ಬೀದರ * ಕಲಬುರಗಿ * ಯಾದಗಿರಿ * ರಾಯಚೂರು * ಕೊಪ್ಪಳ * ಬಳ್ಳಾರಿ * ಬಾಗಲಕೋಟೆ * ವಿಜಯಪೂರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ
Postal Registration No. BDR/054/2026-2027 EMAIL ID:mallammanudi@gmail.com E- Paper WWW.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

Mallammanudi Regional NewsPaper
ಸಂಪಾದಕರು: ರಮೇಶರೆಡ್ಡಿ
ಪ್ರಾದೇಶಿಕ ಕನ್ನಡ ದಿನಪತ್ರಿಕೆ ಮೊ.9448604450

VOLUME-ಸಂಪುಟ:12 | ISSUE- ಸಂಚಿಕೆ: 346 | PAGE- ಪುಟ 8 | ಶುಕ್ರವಾರ 17.01.2025 ಬೀದರ | RNI NO:KARKAN/2011/48371 | RS.ಬೆಲೆ 2/-

# ಬೀದರ್‌ನಲ್ಲಿ ಹಾಡುಹಗಲೇ ಗುಂಡುಹಾರಿಸಿ ದರೋಡೆ







ಬೀದರ್, ಜ.16: ನಗರದ ಜಿಲ್ಲಾಧಿಕಾರಿ ಕಚೇರಿ ಬಳಿ ಸಿನಿಮೀಯ ರೀತಿಯಲ್ಲಿ ಬೆಚ್ಚಿ ಬೀಳಿಸುವಂತ ದರೋಡೆ ನಡೆದಿದ್ದು, ಭದ್ರತಾ ಸಿಬ್ಬಂದಿ ಓರ್ವನನ್ನುಗುಂಡಿಕ್ಕಿಕೊಂದು ಓರ್ವನನ್ನು ಗಂಭೀರವಾಗಿ ಗಾಯಗೊಳಿಸಿ ಸುಮಾರು 93 ಲಕ್ಷ ರೂ. ದೋಚಿರುವ ಘಟನೆ ಗುರುವಾರ ಬೆಳಿಗ್ಗೆ ನಡೆದಿದೆ.

ಜಿಲ್ಲಾಧಿಕಾರಿಕಚೇರಿಸಮೀಪದ ಬ್ಯಾಂಕಿನ ಎಟಿಎಂಗೆ ಹಣ ತುಂಬಲು ಬಂದಿದ್ದಾಗ ಇಬ್ಬರು ಮುಸುಕುಧಾರಿಗಳು ಗುಂಡು ಹಾರಿಸಿ ಓರ್ವನನ್ನು ಕೊಂದು ಇನ್ನೊಬ್ಬನಿಗೆ ಗಾಯಗೊಳಿಸಿ ಹಣದೊಂದಿಗೆಪರಾರಿಯಾಗಿದ್ದಾರೆ. ದರೋಡೆಕೋರರು ಕಣ್ಣಿಗೆ ಖಾರ ಪುಡಿ ಎರಚಿ 5 ಸುತ್ತು ಗುಂಡುಗಳನ್ನುಹಾರಿಸಿದ್ದರಿಂದ ಸಿಎಂಸಿ ಸಿಬ್ಬಂದಿ ಗಿರಿ ವೆಂಕಟೇಶ್ ಅವರು ಸ್ಥಳದಲ್ಲೆ ಸಾವಿಗೀಡಾಗಿದ್ದಾರೆ.ಇನ್ನೊಬ್ಬ ಸಿಬ್ಬಂದಿ ಶಿವಕುಮಾರ್ ಎಂಬುವವರಿಗೆ ತೀವ್ರವಾಗಿ ಗಾಯಗಳಾಗಿದ್ದು, ಅವರನ್ನು ಚಿಕಿತ್ಸೆಗಾಗಿ ಹೈದ್ರಾಬಾದಗೆ ತೆ-ಗೆದುಕೊಂಡು ಹೋಗಲಾಗಿದ್ದು ಶಿವಕುಮಾರಸ್ಥಿತಿಗಂಭೀರವಾಗಿದೆ ಎಂದು ತಿಳಿದುಬಂದಿದೆ.

ಪೊಲೀಸರು ಡಕಾಯಿತರ ಬಂಧನಕ್ಕೆನಾಕಾಬಂದಿ ಮೂಲಕ ಬಲೆ ಬೀಸಿದ್ದಾರೆ.ನಗರದ ಶಿವಾಜಿ ವೃತ್ತದ ಬಳಿ ಇರುವ ಭಾರತೀಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಬೆಳಿಗ್ಗೆ ಎಂದಿನಂತೆ ಎಟಿಎಂಗೆ ಹಣ ತುಂಬಲು ಸಿಎಂಎಸ್ ಏಜೆನ್ಸಿ

(2ನೇ ಪುಟ ನೋಡಿ)

## ಬೀದರ್ ಎಟಿಎಂ ದರೋಡೆ: ಆರೋಪಿಗಳ ಬಂಧನಕ್ಕೆ ತುರ್ತು ಕ್ರಮಕ್ಕೆ ಈಶ್ವರ್ ಖಂಡ್ರೆ ಸೂಚನೆ



ಮಲ್ಲಮ್ಮ ನುಡಿ ವಾರ್ತೆ ಬೀದರ :ಜ.16: ಬೀದರ್‌ನ ಭಾರತೀಯ ಸ್ಟೇಟ್ ಬ್ಯಾಂಕ್ ಬಳಿ ಇಂದು ಹಾಡುಹಗಲೇ ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿ ಸಿಬ್ಬಂದಿಯನ್ನು ಕೊಂದು ಹಣ ದರೋಡೆ ಮಾಡಿರುವ ಘಟನೆ ಬಗ್ಗೆ ಆಘಾತ ವ್ಯಕ್ತಪಡಿಸಿರುವ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ಆರೋಪಿಗಳ ಬಂಧನಕ್ಕೆ ತುರ್ತು ಕ್ರಮ ಕೈಗೊಳ್ಳಲು ಸೂಚಿಸಿದ್ದಾರೆ.

ವಿಧಾನಸೌಧದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗುಂಡಿನ ದಾಳಿಯಲ್ಲಿ ಸಿಬ್ಬಂದಿ ಮೃತಪಟ್ಟಿರುವುದು ತೀವ್ರ ನೋವಿನ ಸಂಗತಿ. ಮೃತರ ಕುಟುಂಬದವರಿಗೆ ಈ ದುಃಖ ಸಹಿಸಿಕೊಳ್ಳುವ ಶಕ್ತಿಯನ್ನು ದೇವರು ನೀಡಲಿ ಎಂದು ಪ್ರಾರ್ಥಿಸಿದ ಅವರು, ಈ ನೋವಿನ ಸಂದರ್ಭದಲ್ಲಿ ಸರ್ಕಾರ ಕುಟುಂಬದ ಜೊತೆ ನಿಲ್ಲುತ್ತದೆ ಎಂದು ತಿಳಿಸಿದರು.

(2ನೇ ಪುಟ ನೋಡಿ)

## ಬೈಕ್-ಗೂಡ್ಸ್ ಆಟೋ ಡಿಕ್ಕಿ:ಇಬ್ಬರ ಸಾವು

ಬೈಕ್-ಗೂಡ್ಸ್ ಆಟೋ ಡಿಕ್ಕಿ:ಇಬ್ಬರ ಸಾವು

ಕಲಬುರಗಿ:ಜ.16: ಬೈಕ್ ಮತ್ತು ಗೂಡ್ಸ್ ಆಟೋ ಮಧ್ಯೆ ಭೀಕರ ಅಪಘಾತ ಸಂಭವಿಸಿ, ಸ್ಥಳದಲ್ಲೇ ಇಬ್ಬರು ಮೃತಪಟ್ಟಿರುವ ಘಟನೆ ಅಫಜಲಪುರ ತಾಲೂಕಿನ ಅಳ್ಳಗಿ ಕ್ರಾಸ್ ಬಳಿ ನಡೆದಿದೆ.

ಅಪಘಾತದಲ್ಲಿ ಬೈಕ್ ಸವಾರ ಶಿವಕುಮಾರ್ (19), ಗೂಡ್ಸ್ ಆಟೋದಲ್ಲಿನ ಹಸನಸಾಬ್ (70) ಎಂಬುವವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತರು ಅಫಜಲಪುರ ತಾಲ್ಲೂಕಿನ ಶಿರವಾಳ ಮತ್ತು ಅಳ್ಳಗಿ ಗ್ರಾಮದವರು ಎನ್ನಲಾಗಿದೆ.

ಬೈಕ್ ಡಿಕ್ಕಿಹೊಡೆದ ರಭಸಕ್ಕೆ ಗೂಡ್ಸ್ ಆಟೋ ಪಲ್ಟಿಯಾಗಿದೆ ಎನ್ನಲಾಗಿದೆ.

ಅಫಜಲಪುರ ಪೊಲೀಸ್ ಠಾಣೆಯಲ್ಲಿಪ್ರಕರಣದಾಖಲಾಗಿದ್ದು ತನಿಖೆ ಜಾರಿಯಲ್ಲಿದೆ.

## ರಂಗೋಲಿ ಹಾಕಿ ಶ್ರೀ ವೀರಭದ್ರೇಶ್ವರ ದೇವರ ಪಲ್ಲಕ್ಕಿ ಗೆ ಸ್ವಾಗತ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್.ಜ.16:ಗ್ರಾಮ ದೇವರಾದ ಶ್ರೀ ವೀರಭದ್ರೇಶ್ವರ ದೇವರಿಗೆ ಭಕ್ತರು. ಹಿಳೆಯರು ಮಕ್ಕಳು, ದೇವರ ಪಲ್ಲಕ್ಕಿಗೆ ರಂಗೋಲಿ ಹಾಕುವುದರ ಮೂಲಕ ಸ್ವಾಗತಿಸುತ್ತಿದ್ದಾರೆ ಹುಮನಾಬಾದ್ ನಲ್ಲಿ ಹಬ್ಬದ ವಾತವರಣ ನಿರ್ಮಾಣವಾಗಿದೆ. ಪ್ರತಿ ನಿತ್ಯ ಭಕ್ತರು ದೇವರ ಪಲ್ಲಕ್ಕಿ ದರ್ಶನ ಪಡೆದು ಪುನಿತರಾಗುತ್ತಿದ್ದಾರೆ.

## ಸಾರ್ವಜನಿಕರಿಗೆ ಕೇಂದ್ರ ಪುರಸ್ಕೃತ ಯೋಜನೆಗಳು ಸಕಾಲದಲ್ಲಿ ತಲುಪಬೇಕು:ಸಂಸದ ಸಾಗರ ಖಂಡ್ರೆ



ಮಲ್ಲಮ್ಮ ನುಡಿ ವಾರ್ತೆ

ಬೀದರ: ಜ.16: ವಿವಿಧ ಇಲಾಖೆಗಳಿಂದನಡೆಯುತ್ತಿರುವ ಕೇಂದ್ರಪುರಸ್ಕೃತಯೋಜನೆಗಳನ್ನು ಸಕಾಲದಲ್ಲಿ ಸಾರ್ವಜನಿಕರಿಗೆ ತಲುಪುವಂತೆ ಮಾಡಬೇಕೆಂದು ಬೀದರಲೋಕಸಭಾಸಂಸದರಾದ ಸಾಗರ ಈಶ್ವರ ಖಂಡ್ರೆ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಅವರುಗುರುವಾರದಂದುಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಮೇಲುಸ್ತುವಾರಿ ಸಮಿತಿ (ದಿಶಾ) ಸಭೆಯಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳ ಅನುಷ್ಠಾನದ ಪ್ರಗತಿ ಪರಿಶೀಲನೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರೈಲ್ವೆ ಇಲಾಖೆಯ ವತಿಯಿಂದ ನಡೆಯುತ್ತಿರುವ ಕಾಮಗಾರಿಗಳು ಆಮೆ ಗತಿಯಿಂದ ಸಾಗುತ್ತಿರುವ ಕಾಮಗಾರಿಗಳು ವೇಗದಿಂದ ಮುಕ್ತಾಯಗೊಳಿಸಿಸಾರ್ವಜನಿಕರಿಗೆ ಅನುಕೂಲವಾಗುವಂತೆಮಾಡಬೇಕು. ಹಾಗೂ ಜಿಲ್ಲೆಯಲ್ಲಿ ರೈಲ್ವೆ ಇಲಾಖೆ ವತಿಯಿಂದ ಅಂಡರ ಬ್ರಿಜ್ ನಿರ್ಮಿಸಿದ್ದು, ಇದು ಮಳೆಗಾಲ ಸಮಯದಲ್ಲಿ ನೀರು ತುಂಬಿ ಸಾರ್ವಜನಿಕರ ಹಾಗೂ ರೈತರ ಓಡಾಟಕ್ಕೆ ಆಡಚಣೆ ಉಂಟಾಗುತ್ತಿರುವುದು ಗಮನಕ್ಕೆ ಬಂದಿರುವುದರಿಂದ ಕೂಡಲೇ ಅದನ್ನು ಪರಿಶೀಲಿಸಿ ಸರಿಪಡಿಸಬೇಕು ರೈಲ್ವೆ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಎನ್.ಎಚ್.ಎಂ. ಯೋಜನೆಯಡಿ ಬಂದಿರುವ ಯಂತ್ರೋಪಕರಣಗಳಿದ್ದುಸರಿಯಾಗಿ ಆಪರೇಟ ಮಾಡಲು ಬರದ ಅಧಿಕಾರಿಗಳನ್ನು ತರಬೇತಿ ನೀಡಬೇಕು. ಕೆಲವೊಂದು ತಾಲ್ಲೂಕುಗಳಲ್ಲಿ

(2ನೇ ಪುಟ ನೋಡಿ)

## ಇಂದು ರಾಜ್ಯಮಟ್ಟದ ಜಾನುವರು ಕುಕ್ಕುಟ ಮತ್ತು ಮತ್ಸ್ಯ ಮೇಳ



ಮಲ್ಲಮ್ಮ ನುಡಿ ವಾರ್ತೆ ಬೀದರ. ಜ. 16 : ಕರ್ನಾಟಕ ಪಶು ವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಶ್ವವಿದ್ಯಾಲಯ ತನ್ನ ಇಪ್ಪತ್ತನೇ ಸಂಸ್ಥಾಪನೆ ದಿನಾಚರಣೆಯನ್ನುಆಚರಿಸುತ್ತದೆ. ವಿಶ್ವವಿದ್ಯಾಲಯದ ಸ್ಥಾಪನೆಯ ಅಂಗವಾಗಿ ವಿಶ್ವವಿದ್ಯಾಲಯ ಆವರಣನಂದಿನಗರಬೀದರ್‌ನಲ್ಲಿ ಜನವರಿ 17 ರಿಂದ 19 ವರಿಗೆ ರಾಜಮಟ್ಟದಜಾನುವರುಕುಕ್ಕುಟ ಮತ್ತು ಮತ್ಸ್ಯ ಮೇಳವನ್ನು ಆಯೋಜಿಸಲಾಗಿದೆ.

ಈ ಮೇಳವು ರಾಜ್ಯದ ಸಮಸ್ತ ರೈತರಿಗೆ, ಪಶು ಹಾಗೂ ಮೀನುಗಾರಿಕೆ ಸಾಕಾಣಿಯಲ್ಲಿ ಆಸಕ್ತಿಯುಳ್ಳ ಜನರಿಗೆ ವಿವಿಧ ತಳಿಗಳು, ಇತ್ತೀಚಿಗೆ ಮೂಡಿ ಬಂದ ಹೊಸ ತಂತ್ರಜ್ಞಾನಗಳು ಸಾಕಾಣಿಕ ಪದ್ಧತಿಗಳು ಹಾಗೂ ಇತರ ಅವಿಷ್ಕಾರಗಳನ್ನು ತಿಳಿದುಕೊಳ್ಳಲು ಒಂದು ಉತ್ತಮ ಅವಕಾಶವಿದೆ.

ಪಶು ಮೇಳದಲ್ಲಿ ಸುಮಾರು 30ಕ್ಕೂ ಹೆಚ್ಚು ಸ್ಥಾನಗಳನ್ನು ಅಳವಡಿಸಲಾಗುತ್ತಿದೆ. ಇದರಲ್ಲಿ ವಿವಿಧ ಇಲಾಖೆಗಳಾದ ಕೃಷಿ, ರೇಷ್ಮೆ ತೋಟಗಾರಿಕೆ ಮತ್ತು ಜಾನುವಾರು ಇಲಾಖೆಗಳು ಭಾಗವಹಿಸುತ್ತಿವೆ. ಅದರ ಜೊತೆಗೆ ರಾಜ್ಯದ ವಿವಿಧ ಜಿಲ್ಲೆಯಿಂದ ಬಂದು ಎಲ್ಲಾ ರೈತನಿಗೆ ಊಟದ ವ್ಯವಸ್ಥೆಯನ್ನು ಮಾಡಲಾಗಿದೆ ಅದು ಮಕ್ಕಳಿಗೆ ವಿಶೇಷ ಆಕರ್ಷಣೆ.

ಈ ಮೇಳದಲ್ಲಿ ಅನೇಕ ಕಾಂರ್ಯಕ್ರಮಂಗಳನ್ನು ಹಮ್ಮಿಕೊಂಡಿದ್ದು ರಾಜ್ಯದ ರೈತರನ್ನು ಪ್ರೋತ್ಸಾಹಿಸಲು ಪ್ರಗತಿಪರ ರೈತರಿಗೆ ರಾಜ್ಯದ 31 ಜಿಲ್ಲೆಯಿಂದ ಶ್ರೇಷ್ಠ ರೈತ ಮತ್ತು ರೈತ ಮಹಿಳಾ ಪ್ರಶಸ್ತಿ ಮಾಡಲಾಗುತ್ತಿದೆ. ಇದಲ್ಲದೆ ಈ ಮೇಳದಲ್ಲಿ ರೈತರ ಕಲಿಕೆಗಾಗಿ ವಿಜ್ಞಾನಿ ರೈತರ ಸಂವಾದ ಹಾಗೂ ರೈತ- ರೈತರ ಸಂವಾದಆದ್ದುವ ಅತ್ಯುತ್ತಮ ಮೊಳಗೆಅತ್ಯುತ್ತಮ ಜಾನುವಾರು ತಳಿ ಹೀಗೆ ವಿವಿಧ ಪ್ರಶಸ್ತಿಗಳನ್ನು ಕೂಡ ವಿತರಿಸಲಾಗುತ್ತದೆ.ಮತ್ತು ಮೇಳದಲ್ಲಿ 15ಕ್ಕೂ ಹೆಚ್ಚು ಸಾಲುಗಳನ್ನುಅಳವಡಿಸಲಾಗಿದ್ದು, ನಾನಾ ಮೀನು ಕಳೆಗಳು ಮತ್ತು ಮಕ್ಕಳ ಆಕರ್ಷಣೆಗಾಗಿ ವಿನಾಶಗೊಳಿಸಲಾಗುತ್ತದೆ. ಸಸ್ಥಿರ ಮೀನುಗಾರಿಕೆ ಮತ್ತು ಜಲ ಕೃಷಿ ಪದ್ಧತಿಗಳನ್ನು ಉತ್ತೇಜಿಸುವುದು. ರಾಜ್ಯದ ಜಲ ಸಂಪನ್ಮೂಲಗಳು ಮತ್ತು ಮೀನುಗಾರಿಕೆ ವಲಯದ ಪ್ರಚಾರ, ಮೀನುಗಾರರು

(2ನೇ ಪುಟ ನೋಡಿ)


## ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಜರುಗಿದ ಗವಿಸಿದ್ದೇಶ್ವರ ಮಹಾ ರಥೋತ್ಸವ

ವೀರಯ್ಯ ವಿ ಹಿರೇ ಮಠ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಗವಿಮಠದ ಐತಿಹಾಸಿಕ ಹಿನ್ನೆಲೆ ಕೊಪ್ಪಳ ನಗರದಲ್ಲಿರುವ ಸುಪ್ರಸಿದ್ಧ ಗವಿಮಠಕ್ಕೆ ನೂರಾರು ವರ್ಷಗಳ ಇತಿಹಾಸವಿದೆ. ವಾರಣಾಸಿಯಿಂದ ಬಂದ ಶ್ರೀ ರುದ್ರಮುನೇಶ್ವರ ಶಿವಯೋಗಿಗಳು ಮಠವನ್ನು ಸ್ಥಾಪಿಸಿದ ಮೂಲ ಗುರುಗಳಾಗಿದ್ದಾರೆ.ಶ್ರೀರುದ್ರಮುನಿ ಶಿವಯೋಗಿಗಳಿಂದಆರಂಭವಾದ ಮಠದ ಪರಂಪರೆಯಲ್ಲಿ ಇದೀಗ 18ನೇ ಪೀಠಾಧಿಪತಿಯಾಗಿರುವ ಸದ್ಯ ಇರುವ ಅಭಿನವ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳು.

ಗತಾ ವೈಭವಕ್ಕೆ ಮರಳಿದ ಕೊಪ್ಪಳ ಗವಿಮಠ ಜಾತ್ರೆಯಲ್ಲಿ ಸುಮಾರು 5 ಲಕ್ಷ ಭಕ್ತ ಜನಸಾಗರ ಭಾಗಿಯಾಗಿದ್ದನ್ನು ಚಿತ್ರಗಳಲ್ಲಿ ಕಾಣಬಹುದು .



ಬೆಳಗಿನಿಂದಲೇ ನಾಡಿನ ನಾನಾ ಭಾಗಗಳಿಂದ ಭಕ್ತರು ಜಾತ್ರೆಯಲ್ಲಿ ಪಾಲ್ಗೊಳ್ಳಲು ಆಗಮಿಸಿದರು.

ಸಂಜೆಗೋಧೂಳಿಸಮಯದಲ್ಲಿ ನಾಡಿನ ಸುಪ್ರಸಿದ್ಧ ಖ್ಯಾತ ಹಿಂದುಸ್ತಾನಿ ಗಾಯಕರಾದ ಪದ್ಮಶ್ರೀ ಪುರಸ್ಕೃತ ಎಮ್. ವೆಂಕಟೇಶ್ ಕುಮಾರ ಅವರು ಷಟಸ್ಥಲ ಧ್ವಜಾರೋಹಣ ಮಾಡುವುದರ ಮೂಲಕ ರಥೋತ್ಸವಕ್ಕೆಚಾಲನೆನೀಡಿದರು.

ದಿವ್ಯ ಸಾನಿಧ್ಯವನ್ನು ತುಮಕೂರಿನ ಶ್ರೀ ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ

(2ನೇ ಪುಟ ನೋಡಿ)

# ಒಂದನೇ ಪುಟದಿಂದ

## ತುರ್ತು ಕ್ರಮಕ್ಕೆ ಈಶ್ವರ್ ಖಂಡ್ರೆ ಸೂಚನೆ

ವಿಷಯ ತಿಳಿದ ಕೂಡಲೇ ಗೃಹ ಸಚಿವ ಡಾ. ಜಿ ಪರಮೇಶ್ವರ್ ಅವರೊಂದಿಗೆ ಹಾಗೂ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ ತಾವು ಮಾತನಾಡಿದ್ದು, ದುಷ್ಕರ್ಮಿಗಳ ಬಂಧನಕ್ಕೆ ತುರ್ತು ಕ್ರಮ ಕೈಗೊಳ್ಳುವಂತೆ ಮತ್ತು ಜಿಲ್ಲೆಯಲ್ಲಿ ಕಟ್ಟೆಚ್ಚರ ವಹಿಸುವಂತೆ ಹಾಗೂ ಶಾಂತಿ ಸುವ್ಯವಸ್ಥೆಗೆ ಭಂಗ ಬಾರದಂತೆ ಕ್ರಮ ವಹಿಸಲು ಸೂಚಿಸಿರುವುದಾಗಿ ತಿಳಿಸಿದರು.17 ರಂದು ಮೃತರ ಮನೆಗೆ ಭೇಟಿ: ಎ.ಟಿ.ಎಂ.ಗೆ ಹಣ ಸಾಗಿಸುವಾಗ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಬೇಕಿತ್ತು, ಏನು ಲೋಪ ಆಗಿದೆ ಎಂಬ ಬಗ್ಗೆ ತನಿಖೆ ನಡೆಸಲಾಗುವುದು, ನಾಳೆ ತಾವು ಬೀದರ್‌ಗೆ ತೆರಳುತ್ತಿದ್ದು, ಮೃತರ ಮನೆಗೆ ಭೇಟಿ ನೀಡಿ ಸಾಂತ್ವನ ಹೇಳುವುದಾಗಿ ತಿಳಿಸಿದರು.

# ಕುಕ್ಕುಟ ಮತ್ತು ಮತ್ಸ್ಯ ಮೇಳ



ಮತ್ತು ಅಕ್ಕಾಕಲ್ಚರ್ ರೈತರ ಜೀವನೋಪಾಯವನ್ನು ಸುಧಾರಿಸುವುದು ಈ ರುಚಿಕರ ಆಹಾರ ಮೊಳಕೆಗಳು, ಅಲಂಕಾರಿಕ ಮೀನು ಪ್ರದರ್ಶನ ನೇಚರ್ ಅಕ್ವೇರಿಯಂ ಚಿಪ್ಪುಗಳ ಪ್ರದರ್ಶನ ಪ್ರಮುಖ ಅಂಶಗಳಾಗಿವೆಮೇಳದಲ್ಲಿ ಸುಮಾರು 20ಕ್ಕೂ ಹೆಚ್ಚು ದೇಶದಲ್ಲೆಡೆಯ ಹಸು, ಎಮ್ಮೆ, ಹಾಡು ಹಾಗೂ ಕುರಿ ತಳಿಗಳನ್ನು ಪ್ರದರ್ಶಿಸಲಾಗುತ್ತಿದೆ ದೇಸಿ ತಳಿಗಳಾದ ಗಿರ್, ಸಾಹಿವಾಲ, ಓಗೋಲ, ಕಾಂಕ್ರೀಜ ಮುಂತಾದ ತಳಿಗಳು ಹಾಗೂ ನಮ್ಮದೇ ಬೀದರ್ ಹೆಮ್ಮೆಯ ತಲೆಯದ ದೇವಣಿ ತಳಿಯನ್ನು ಪ್ರದರ್ಶಿಸಲಾಗುತ್ತಿದೆ. ಈ ಮೇಳದಲ್ಲಿ ಇತ್ತೀಚಿಗೆ ಪ್ರಧಾನಿ ಮೋದಿ ಅವರಿಂದ ಪರಿಚಯಿಸಲ್ಪಟ್ಟ ಹಾಗೂ ಅತಿ ಸಣ್ಣ ತಳಿಯಾದಂತಹ ಪುಂಗನೂರ್ ಮೇಳದ ವಿಶೇಷ ಸೆಳೆತ. ಎಮ್ಮೆ ತಳಿಯಲ್ಲಿ ಮುದ್ರಾ, ಪಾಂಡ್ರಾಮರಿ,

ಸುರ್ತಿ ಮುಂತಾದ ತಳಿಗಳು, ಕುರಿ ಮತ್ತು ಮೇಕೆಯಲ್ಲಿ ಬಿದರಿ, ಉಸ್ಮನಬಾದಿ, ಸಿರೋಯಿ, ಬಾರ್ಬರಿ, ಕೆಂಗೂರಿ ಹೀಗೆ ಮುಂತಾದ ತಳಿಗಳು ಮೇಳದ ವಿಶೇಷ ಆಕರ್ಷಣೆಯಾಗಿವೆ. ಮೇಳದ ಪ್ರದರ್ಶನದಲ್ಲಿ ಕುಕ್ಕುಟ ಪ್ರದರ್ಶನವೂ ವಿಶೇಷ ಅಂಗವಾಗಿದ್ದು ಈ ಕುಕ್ಕುಟ ಪ್ರಪಂಚದಲ್ಲಿ ನಮ್ಮದೇ ವಿಶ್ವವಿದ್ಯಾನಿದಲ್ಲಿ ತಯಾರಿಸಲ್ಪಟ್ಟ ಸುಧಾರಿತ ತಳಿಗಳಾದಂತಹ ಗಿರಿರಾಜ, ಸ್ವರ್ಣಧಾರ, ರಾಜ _2 ಹಾಗೂ ನಾಟಿ ಕೋಳಿಗಳನ್ನು ಪ್ರದರ್ಶಿಸಲಾಗುತ್ತದೆ. ಇದರ ಜೊತೆಗೆ ಇತ್ತೀಚಿನ ದಿನಗಳಲ್ಲಿ ಪ್ರಖ್ಯಾತಿ ಪಡೆದಿರುವಂತಹ ಕಡಕ್ ನಾಥ್, ಆಸೀಲ್ ಹಾಗೂ ಇತರೆ ದೇಸಿ ತಳಿಗಳನ್ನು ಕೂಡ ಇಡಲಾಗುತ್ತಿದೆ. ಬರೀ ಕೋಳಿ ತಳಿಗಳಲ್ಲದೆ ಪ್ರಭಾವಗಳಾದಂತಹ ಬಾತುಕೋಳಿ, ಟರ್ಕಿ, ಗಿನಿ ಪೌಲ್, ಗೌಜುಗನ ಹಕ್ಕಿ ಹಾಗೂ ಗೀಸ್ ಕುಕ್ಕಟ

ಪ್ರಪಂಚದ ಪ್ರಮುಖ ಅಂಶಗಳಾಗಿವೆ. ಈ ಮೇಳದಲ್ಲಿ ಕೇವಲ ತಳಿಗಳು ಪ್ರದರ್ಶನಗಳಲ್ಲದೆ ರೈತರಿಗೆ ಹೈನುಗಾರಿಕೆ, ನೀನು ಹಾಗೂ ಕೋಳಿ ಸಾಕಾಣಿಕೆಗೆ ಸಂಬಂಧಿಸಿದಂತೆ ಮೂಡಿ ಬರುವ ಪ್ರಶ್ನೆಗಳಿಗೆ ಹಾಗೂ ಇತ್ತೀಚಿಗೆ ಬಂದಿರುವ ಹೊಸ ತಂತ್ರಜ್ಞಾನಗಳನ್ನು ತಿಳಿಸಿಕೊಡಲು ವಿಜ್ಞಾನಿಗಳು ಮತ್ತು ವಿಷಯ ತಜ್ಞರು ಉಪಸ್ಥಿತರಿರುತ್ತಾರೆ. ಇವರು ಪ್ರಯೋಗಿಕವಾಗಿ ಅನೇಕ ತಂತ್ರಜ್ಞಾನಗಳ ಬಗ್ಗೆ ತಿಳಿಸುಕೊಡುತ್ತಾರೆ. ಉದಾಹರಣೆಗೆ ಮೇವು ಕತ್ತರಿಸುವಿಕೆ, ತನ ಮೇವು ತಯಾರಿಸುವಿಕೆ, ಹೋಳಿಗಳಲ್ಲಿ ಕಾವುಕೂಡವಿಕೆಮುಂತಾದವುಗಳು ಬಗ್ಗೆ ರೈತರಿಗೆ ಮಾಹಿತಿಯನ್ನು ನೀಡುತ್ತಾರೆ.

ಪಶು ಮೇಳದಲ್ಲಿ ತೋಟಗಾರಿಕೆ ಇಲಾಖೆಯ ವತಿಯಿಂದ ಫಲಪುಷ್ಪ ಪ್ರದರ್ಶನವು ' ಶಾಂತಿ ಮತ್ತು ಸಮಾನತೆ' ಎಂಬ ಕಲ್ಪನೆಯೊಂದಿಗೆ (ಥೀಮ್) ಆಯೋಜಿಸಲಾಗುತ್ತಿದೆ. ಇದರಲ್ಲಿ ಬುದ್ಧ ಭಗವಾನರ ಮೂರ್ತಿಯನ್ನು ಹೂಗಳಿಂದ ಅಲಂಕಾರ ಮಾಡಲಾಗಿದ್ದು, ಕುವೆಂಪು, ಬಸವಣ್ಣ, ಮತ್ತು ಬಸವೇಶ್ವರರ ಭಾವಚಿತ್ರಗಳನ್ನು ಹೂವಿನ ಅಲಂಕಾರದಿಂದ ಸಿಂಗಾರಿಸಲಾಗಿದೆ. ತರಕಾರಿಗಳ ಸಂಗ್ರಹಣೆ, ಹಾಯ್ ಸರ್, ಮತ್ತು ಹೂಕುಂಡಗಳ

ಕಲಾತ್ಮಕ ಈ ಪ್ರದರ್ಶನದ ಪ್ರಮುಖ ಆಕರ್ಷಣಗಳಾಗಿವೆ. ಮೇಳದ ಕೊನೆಯ ದಿನದಂದು ಸ್ಥಾನ ಪ್ರಿಯರಿಗೆ ಸ್ಥಾನ ಪ್ರದರ್ಶನ ಕೂಡ ಆಯೋಜಿಸಲಾಗುತ್ತದೆ. ಸುಮಾರು 15 ವಿವಿಧ ತಳಿಗಳ ಎರಡು ನೂರು ಜ್ಞಾನಗಳು ಇದರಲ್ಲಿ ಭಾಗವಹಿಸಲಿವೆ ಆದ್ರಗಳಲ್ಲಿ ಲ್ಯಾಬ್ರಡಾರ್ ರೆಟ್ರೈವರ್ಸ್, ಜರ್ಮನ್ ಶಫರ್ಡ್ಸ್, 15 ತಳಿಗಳ ಮತ್ತು ಚಿಹೋವಾಸನಂತಹ ಅತೀ ಚಿಕ್ಕ ತಳಿ ಮತ್ತು ಸೇಠಟ್ ಬರ್ನಾಡ್ ಅಂತಹ ದೈತ್ಯ ತಳಿಗಳು ಸಹ ಭಾಗವಹಿಸಲಿವೆ. ಈಮಳದಲ್ಲಿ ಸಂಸ್ಕೃತಿಕ ಕಾರ್ಯಕ್ರಮವು ಕೂಡ ಒಂದು ವಿಶೇಷ ಆಚರಣೆಯಾಗಿದ್ದು ವಿವಿಧ ಕಲಾತಂಡಗಳಿಂದ ಸುಗಮ ಸಂಗೀತ, ಭರತನಾಟ್ಯಂ, ಹಾಡುಗಳು, ಡೊಳ್ಳು ಕುಣಿತ, ಕಂಸಾಳೆ ಹೀಗೆ ಮುಂತಾದವು ಕಾರ್ಯಕ್ರಮಗಳನ್ನು ಒಳಗೊಂಡಿದ್ದು ಹಾಗೂ ವಿದ್ಯಾರ್ಥಿಗಳಿಂದ ಕೂಡ ಪ್ರದರ್ಶನ ನೀಡಲಾಗುವುದು. ಈ ಮೇಳವು ಪಶುಸಂಗೋಪನೆ,

ಮೀನು ಸಾಕಾಣಿಕೆ ಬಗ್ಗೆ ತಿಳಿದುಕೊಳ್ಳಲು ರಾಜ್ಯದ ರೈತರಿಗೆ, ಯುವ ಜನರಿಗೆ ಹಾಗೂ ಶಾಲಾ ಮಕ್ಕಳಿಗೆ ಒಂದು ಉತ್ತಮ ಅವಕಾಶವಾಗಿದ್ದು ಪಾಲ್ಗೊಂಡು ಈ ಮೇಳದ ಲಾಭವನ್ನು ಪಡೆಯಬೇಕು ಎಂದು ವಿಶ್ವವಿದ್ಯಾಲಯ ಮನವಿ ಮಾಡಿದೆ.

# ಗವಿಸಿದ್ದೇಶ್ವರ ಮಹಾ ರಥೋತ್ಸವ

ಸ್ವಾಮಿಗಳು, ಹಾಗೂ ವಿಜಯಪುರದ ಹುಬ್ಬಳ್ಳಿ ಶ್ರೀ ಷಣ್ಮುಖಾ ರೂಢನಾಮಠದ ಶ್ರೀ ಅಭಿನವ ಸಿದ್ದಾರೂಡ ಸ್ವಾಮಿಗಳು ದಿವ್ಯ ಸಾನಿಧ್ಯವನ್ನು ವಹಿಸಿದರು.

ಮುಖ್ಯ ಅತಿಥಿಯಾಗಿ ಸಂಸ್ಕೃತಿ, ಚಿಂತಕರು ಸಾಹಿತಿಗಳು ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಚಲನಚಿತ್ರ ನಿರ್ದೇಶಕರಾದ ಡಾ. ನಾಗತಿಹಳ್ಳಿ ಚಂದ್ರಶೇಖರ ಸೇರಿದಂತೆ ಅನೇಕ ವಿವಿಧ ಮಠಾಧೀಶರು ಕೂಡ ಭಾಗಿಯಾಗಿದ್ದರು.

ಗವಿಸಿದ್ದೇಶ್ವರ ಮಹಾ ರಥೋತ್ಸವ ಚಾಲನೆಗೊಂಡು ಪಾದಗಟ್ಟೆಯತ್ತ ಹೊರಟಾಗ ಜನ ಭಕ್ತಿಯಿಂದ ಕೈ ಮುಗಿದು ಪಾವನರಾದರು. ಮರಳಿ ದೇವಸ್ಥಾನಕ್ಕೆ ಬಂದ ಬಳಿಕ ನೆರೆದ ಜನಸ್ತೋಮ ಸಂತೋಷದಿಂದ ಚಪ್ಪಾಳೆ ತಟ್ಟಿ ಹರ್ಷ ವ್ಯಕ್ತಪಡಿಸಿದರು.

ಮೂರು ದಿನಗಳವರೆಗೆ ಜರುಗುವ ಈ ಜಾತ್ರಾ ಮಹೋತ್ಸವದ ಕಾರ್ಯಕ್ರಮದಲ್ಲಿ ನಾಡಿನ ಹೆಸರಾಂತ ಸಾಹಿತಿಗಳು ಸಂಗೀತಕಾರರು ಸಮಾಜ ಸೇವಕರು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರು ಭಾಗಿಯಾಗುತ್ತಾರೆ.

ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ ವೈ ವಿಜಯೇಂದ್ರ , ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್ ತಂಗಡಗಿ, ಕೊಪ್ಪಳ ಜಿಲ್ಲಾಧಿಕಾರಿ ನಲಿನ್ ಅತುಲ್, ಕೊಪ್ಪಳ ಜಿಲ್ಲಾ ಪಂಚಾಯತಿ ಸಿ ಓ ರಾಹುಲ್ ರತ್ನಪಂಡಿ, ಕೊಪ್ಪಳ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಅರಸಿದ್ದಿ, ಸಂಸದರಾದ ರಾಜಶೇಖರ್ ಹಿಟ್ನಾಳ್, ಕೊಪ್ಪಳ ಕ್ಷೇತ್ರದ ಶಾಸಕರಾದ ರಾಘವೇಂದ್ರ ಹಿಟ್ನಾಳ್, ಮಾಜಿ ಸಚಿವರಾದ ಹಾಲಪ್ಪ ಆಚಾರ್, ಸಿವಿ ಚಂದ್ರಶೇಖರ್, ಅಮರೇಗೌಡ ಬಯ್ಯಾಪುರ್, ಡಾ. ಬಸವರಾಜ್ ಕ್ಯಾವಟರ್, ಮಾಜಿ ಸಂಸದರಾದ ಕರಡಿ ಸಂಗಣ್ಣ, ನಗರ ಸಭೆಯ ಅಧ್ಯಕ್ಷರಾದ ಅಮ್ಜದ್ ಪಟೇಲ್, ಸೇರಿದಂತೆ ಲಕ್ಷಾಂತರ ಭಕ್ತ ಸಮೂಹ ಕೂಡ ಮಾಹಾ ರಥೋತ್ಸವದಲ್ಲಿ ಪಾಲ್ಗೊಂಡಿದ್ದರು.

# ಬೀದರ್‌ನಲ್ಲಿ ಹಾಡುಹಗಲೇ ಗುಂಡುಹಾರಿಸಿ ದರೋಡೆ

ತಂಡ ಆಗಮಿಸಿತ್ತು. ಈ ವೇಳೆ ಎಟಿಎಂಗೆ ಹಾಕಲು ಎಸ್ಬಿಐ ಬ್ಯಾಂಕಿನಿಂದ ಹಣ ಡ್ರಾ ಮಾಡಿದ್ದ ಏಜೆನ್ಸಿ ಸಿಬ್ಬಂದಿ ಅಲ್ಲಿಗೆ ಬಂದಿದ್ದರು. ಎಟಿಎಂಗೆ ಹಾಕಲು ಹೊರ ಬರುತ್ತಿದ್ದಾಗ ದ್ವಿಚಕ್ರವಾಹನದಲ್ಲಿ ಬಂದ ಇಬ್ಬರು ಮುಸುಕುಧಾರಿಗಳು ಅಲ್ಲಿದ್ದವರ ಮೇಲೆ ಕಾರದ ಪುಡಿ ಎರಚಿ ಏಕಾಏಕಿ ಗುಂಡಿನ ದಾಳಿ ಮಾಡಿದರು. ಏಜೆನ್ಸಿಯಲ್ಲಿ ಹಣ ತುಂಬುತ್ತಿದ್ದ ಹಣ ವ್ಯವಸ್ಥಾಪಕ ಗಿರಿ ವೆಂಕಟೇಶ್ ಎಂಬ ವ್ಯಕ್ತಿ ಸ್ಥಳದಲ್ಲೇ ಮೃತಪಟ್ಟರು. ಇನ್ನೊಬ್ಬ ಸಿಬ್ಬಂದಿ ಶಿವಕುಮಾರ್ ಎಂಬುವವರಿಗೆ ತೀವ್ರ ಗಾಯಗಳಾಗಿವೆ.

ಅಲ್ಲಿದ್ದ ಹಣವನ್ನು ಹೊತ್ತುಕೊಂಡು ದ್ವಿಚಕ್ರವಾಹನದಲ್ಲಿಯೇ ಇಬ್ಬರೂ ದರೋಡೆಕೋರರು ಪರಾರಿಯಾಗಿದ್ದಾರೆ. ಅಲ್ಲಿದ್ದವರು ಇದನ್ನು ಗಮನಿಸಿ ಇಬ್ಬರನ್ನೂ ಹಿಡಿಯಲು ಪ್ರಯತ್ನಿಸಿದರೂ ತಪ್ಪಿಸಿಕೊಂಡು ಪರಾರಿಯಾಗಿದ್ದಾರೆ. ಕೆಲವೇ ಕ್ಷಣದಲ್ಲಿ ನಗರದ ಹೃದಯ ಭಾಗದಲ್ಲಿ ನಡೆದ ಘಟನೆಯಿಂದ ಜನತೆ ಬೆಚ್ಚಿಬಿದ್ದಿದೆ.

ವಿಷಯ ತಿಳಿದು ಸ್ಥಳಕ್ಕೆ ಎಸ್.ಪಿ ಪ್ರದೀಪ ಗುಮ್ಮಿ,ಹೆಚ್ಚುವರಿ ಪೋಲಿಸ್ ವರಿಷ್ಠಾಧಿಕಾರಿ ಚಂದ್ರಕಾಂತ್ ಪೂಜಾರಿ ಅವರು ಭೇಟಿ ನೀಡಿ ಬ್ಯಾಂಕ್ ಸಿಸಿ ಟಿವಿ ಪರಿಶೀಲನೆ ಮಾಡಿದರು. ದರೋಡೆಕೋರರು ಪರಾರಿಯಾಗಿರುವ ಮಾರ್ಗ ಆಧರಿಸಿ ತನಿಖೆ ನಡೆದಿದೆ.

ಸ್ಥಳಕ್ಕೆ ಕಲಬುರಗಿ ಡಿಐಜಿ ಅಜಯ್ ಹಿಲ್ಲೋರಿ ಅವರು ಭೇಟಿ ನೀಡಿದ್ದು, ಪರಿಶೀಲನೆ ನಡೆಸುತ್ತಿದ್ದಾರೆ. ಜೊತೆಗೆ ಬ್ಯಾಂಕ್ ಅಧಿಕಾರಿಗಳ ವಿಚಾರಣೆ ಕೂಡ ನಡೆಯುತ್ತಿದೆ.

## ರೇಷ್ಮೆ ಉದ್ಯಮಗಳ ನಿಗಮದ ಅಧ್ಯಕ್ಷರ ಪ್ರವಾಸ

ಕಲಬುರಗಿ,ಜ.16:ಕರ್ನಾಟಕ ರೇಷ್ಮೆಉದ್ಯಮಗಳ ನಿಗಮದ ಅಧ್ಯಕ್ಷರು ಹಾಗೂ ಗುಲಬರ್ಗಾ ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕರಾದ ಕನೀಜ್ ಫಾತೀಮಾ ಅವರು ಹೈದ್ರಾಬಾದ್‌ದಿಂದ ರಸ್ತೆ ಮೂಲಕ ಜನವರಿ 17 ರಂದು ಶುಕ್ರವಾರ ಮಧ್ಯಾಹ್ನ1 ಗಂಟೆಗೆ ಕಲಬುರಗಿಗೆ ಆಗಮಿಸಿ ಸ್ಥಳೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ವಾಸ್ತವ್ಯ ಮಾಡುವರು.

ಜನವರಿ 18 ಹಾಗೂ 19 ರಂದು ಸ್ಥಳೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮತ್ತು ಕುಂದುಕೊರತೆಗಳ ವಿಚಾರಣೆ ನಡೆಸಿ ವಾಸ್ತವ್ಯ ಮಾಡುವರು. ಜನವರಿ 20 ರಂದು ಸೋಮವಾರ ಬೆಳಿಗ್ಗೆ 11ಗಂಟೆಗೆ ಕಲಬುರಗಿಯಿಂದ ರಸ್ತೆ ಮೂಲಕ ಬೆಳಗಾವಿಗೆ ಪ್ರಯಾಣಿಸಿ ವಾಸ್ತವ್ಯ ಮಾಡುವರು. ಜನವರಿ 21 ರಂದು ಬೆಳಿಗ್ಗೆ 11 ಗಂಟೆಗೆ ಬೆಳಗಾವಿಯಲ್ಲಿ ನಿಗದಿತ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ನಂತರ ಮರಳಿ ಅಂದು ರಾತ್ರಿ 11.45 ಗಂ–ಟೆಗೆ ಕಲಬುರಗಿಗೆ ಆಗಮಿಸಿ ವಾಸ್ತವ್ಯ ಮಾಡುವರು.

## ಜಿಲ್ಲಾ ಉಸ್ತುವಾರಿ ಸಚಿವರ ಪ್ರವಾಸ

ಕಲಬುರಗಿ,ಜ.16:ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಜನವರಿ 17 ರಂದು ಬೆಂಗಳೂರಿನಿಂದ ಕಲಬುರಗಿಗೆ ಆಗಮಿಸುವರು.

**CITATION**
**IN THE COURT OF THE PRL. CIVIL JUDGE AND JMFC., AT HUMNABAD**
**Crl. Misc. No. 2158/2024**

**Petitioners**

1). Kashappa S/o Late Kamanna Age; 78 years Occu: Agriculture R/o Kumar Chincholli Tq:Humnabad Dist:Bidar.

2). Shankar S/o Late Kamanna Age; 75 years Occu: Agriculutre R/o Kumar Chincholli Tq:Humnabad Dist:Bidar.

3). Maruti S/o Late Kamanna Age; 72 years Occu: Agriculutre R/o Kumar Chincholli Tq:Humnabad Dist:Bidar.

**//Vs//**

**Respondent:-**

The Registrar of Birth and Death thorugh The Tahasildar Office Humnabad

Sub:- Petition U/Sec 13 (3) of Birth and Death Registration Act 1969

Whereas the above named petitioners have filed the petition under section 13(3) of Birth and Death Registration Act 1969 praying this Honourable court to issue death certificate sons of Petitioners namely : **Late Kamanna S/o Ramappa** who died on **06-08-1994** at Kumar Chincholli Tq:Humnabad Dist:Bidar. The petitioners claiming the death certificate of said **Kamanna** for transfer of property and other official purpose and home record.

Therefore, it is hereby proclaimed that if any persons have got any objection in this regard may approach to this court on **18-01-2025 at 11.00 AM** in person or authorized pleader to answer such claim otherwise the matter will be heard and determined in your absence as per law.

Given under my hand and seal of he court, this the **16-12-2024.**

//By order of the court//

Chief Ministerial Officer
Prl. Civil Judge and JMFC Court,
Humnabad

## ಶಾಲೆಯಲ್ಲಿ ಲ್ಯಾಪ್‌ಟಾಪ್, ಪ್ರಿಂಟರ್ ಕಳುವು: ಆರೋಪಿ ಸೆರೆ

ಕಲಬುರಗಿ: ಜ.16: ತಾಲ್ಲೂಕಿನ ಲಾಡ್ ಚಿಂಚೋಳಿ ಹತ್ತಿರದ ನವಭಾರತ ಶಿಕ್ಷಣ ಸಂಸ್ಥೆಯ ಶಾಲೆಯ ಕಚೇರಿಯ ಕೋಣೆಯ ಬೀಗ ಮುರಿದು ಲ್ಯಾಪ್‌ಟಾಪ್ , ಪ್ರಿಂಟರ್ ಮತ್ತು ಗ್ಯಾಸ್ ಸಿಲಿಂಡರ್ ಕಳ್ಳತನ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯೊಬ್ಬನನ್ನು ನರೋಣಾ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಲಾಡ್ ಚಿಂಚೋಳಿ ಗ್ರಾಮದ ನವೀನ್ ತಂದೆ ಜಯಾನಂದ್ ಹತ್ತರಕಿ (27) ಎಂಬಾತನನ್ನು ಬಂಧಿಸಿ, 45 ಸಾವಿರ ರೂ.ಗಳ ಮೌಲ್ಯದ ಡೆಲ್ ಕಂಪೆನಿಯ ಲ್ಯಾಪ್‌ಟಾಪ್, 45 ಸಾವಿರ ರೂ.ಗಳ ಮೌಲ್ಯದ ಹೆಚ್‌ಪಿ ಕಂಪೆನಿಯ ಪ್ರಿಂಟರ್, 1,500 ರೂ.ಗಳ ಮೌಲ್ಯದ ಖಾಲಿ ಗ್ಯಾಸ್ ಸಿಲಿಂಡರ್ ಮತ್ತು 2,500 ರೂ.ಗಳ ಮೌಲ್ಯದ ತುಂಬಿದ ಗ್ಯಾಸ್ ಸಿಲಿಂಡರ್ ಸೇರಿ 94 ಸಾವಿರ ರೂ.ಗಳ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಿ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ .

ಶಾಲೆಯ ಬೀಗ ಮುರಿದು ಲ್ಯಾಪ್ಟಾಪ್, ಪ್ರಿಂಟರ್, ಗ್ಯಾಸ್ ಸಿಲಿಂಡರ್ ಕಳವು ಮಾಡಿದ ಬಗ್ಗೆ ನರೋಣಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣದ ಪತ್ತೆಗೆ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು, ಹೆಚ್ಚುವರಿ ವರಿಷ್ಠಾಧಿಕಾರಿ ಮಹೇಶ್ ಮೇಘಣ್ಣನವರ್ ಅವರ ಮಾರ್ಗದರ್ಶನದಲ್ಲಿ ಡಿಎಸ್ಪಿ ಗೋಪಿ ಬಿ.ಆರ್., ಸಿಪಿಐ ಪ್ರಕಾಶ್ ಆರ್. ಯಾತನೂರ್ ಅವರ ನೇತೃತ್ವದಲ್ಲಿ ನರೋಣಾ ಠಾಣೆಯ ಪಿಎಸ್‌ಐ ಸಿದ್ಧರಾಮ್, ಸಿಬ್ಬಂದಿಗಳಾದ ಭಗವಂತರಾಯ್, ರೇವಣಸಿದ್ದಪ್ಪ ಬಿರಾದಾರ್, ಭೀಮಾಶಂಕರ್ ಉಡಗಿ,ರಾಮಲಿಂಗ್, ರೇವಣಸಿದ್ದಪ್ಪ, ನಾಗರಾಜ್, ಲಕ್ಷ್ಮೀಪುತ್ರ ಅವರನ್ನೊಳಗೊಂಡ ತಂಡ ರಚಿಸಲಾಗಿತ್ತು. ತಂಡ ತನಿಖೆ ನಡೆಸಿ ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸುವಲ್ಲಿ ಯಶಸ್ವಿಯಾಗಿದೆ.

# ಸಂಘ ಸಂಸ್ಥೆಗಳ ಧನಸಹಾಯ ಸಾಮಾನ್ಯ ಯೋಜನೆಯಡಿ ಸಾಂಸ್ಕೃತಿಕ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 16 : ಬೀದರ್ ಕನ್ನಡ ಭವನದಲ್ಲಿ ಇಂದು ಸಾಯಂಕಾಲ 6 ಗಂಟೆಗೆ ನಾದಬ್ರಹ್ಮ ಕಲಾ ಸಂಸ್ಥೆ ಬೀದರ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರುಗಳ ಸಂಯುಕ್ತಾಶ್ರಯದಲ್ಲಿ 2023 24ನೇ ಸಾಲಿನ ಸಂಘ ಸಂಸ್ಥೆಗಳ ಧನಸಹಾಯ ಸಾಮಾನ್ಯ ಯೋಜನೆಯಡಿಯಲ್ಲಿ ಜಿಲ್ಲಾ ಮಟ್ಟದ ಜಾನಪದ ಸಂಗೀತೋತ್ಸವ



ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧಕರಿಗೆ ಗೌರವ ಸನ್ಮಾನ ಕಾರ್ಯಕ್ರಮ ಜರುಗಲಿದೆ ದಿವ್ಯ ಸಾನಿಧ್ಯ ಶ್ರೀ ಷ ಬ್ರ ರಾಜಶೇಖರ ಶಿವಾಚಾರ್ಯ ವಹಿಸಲಿರುವ ಕಾರ್ಯಕ್ರಮ ಉದ್ಘಾಟಿಸುವರು ಸುರೇಶ್ ಚನ್ನಶೆಟ್ಟಿ ಅಧ್ಯಕ್ಷರು ಕನ್ನಡ ಸಾಹಿತ್ಯ ಪರಿಷತ್ತು ಬೀದರ್ ಮುಖ್ಯ ಅತಿಥಿಗಳಾಗಿ ಸಿದ್ರಾಮ ಸಿಂಧೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವಿಜಯಕುಮಾರ್ ಸೊನಾರೆ ಸಂಜುಕುಮಾರ್ ಅತಿವಾಳೆ ಅನೇಕ ಜಿಲ್ಲಾ ಮಟ್ಟದ ಕಲಾವಿದರು ಭಾಗವಹಿಸುವ ನಾದಬ್ರಹ್ಮ ಕಲಾ ಸಂಸ್ಥೆ ಬೀದರ್ ಅಧ್ಯಕ್ಷರಾದ ಮಲ್ಲಿಕಾರ್ಜುನ ಸ್ವಾಮಿ ತಿಳಿಸಿದ್ದಾರೆ.

# ಸಾಧನೆಗೆ ಶಿಕ್ಷಣವೇ ಅಸ್ತ್ರ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.16:ಸಾಧನೆಗೆ ಶಿಕ್ಷಣವೇ ಅಸ್ತ್ರ. ಹಾಗಾಗಿ ವಿದ್ಯಾರ್ಥಿಗಳು ಅಧ್ಯಯನಶೀಲತೆಯನ್ನು ಮೈಗೂಡಿಸಿಕೊಳ್ಳಬೇಕು. ಆ ಮೂಲಕ ಬದುಕನ್ನು ಸಾರ್ಥಕಪಡಿಸಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಪರಶುರಾಮ ಶಿನ್ನಾಳಕರ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ನಗರದ ಸಕ್ರಿ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ವಾರ್ಷಿಕ ಸ್ನೇಹ ಸಮ್ಮಿಲನ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬೀಳ್ಕೊಡಿಗೆ ಸಮಾರಂಭದಲ್ಲಿ ಹೊಂಗಿರಣ ವಾರ್ಷಿಕ ಸಂಚಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ವೇಳೆಯ ಮಹತ್ವವನ್ನು ಅರಿತು ನಡೆಯಬೇಕು. ಅದನ್ನು ಅರಿಯದೆ ಹೋದರೆ ಏನೆಲ್ಲ ಕಳೆದುಕೊಳ್ಳಬೇಕಾಗುತ್ತದೆ. ಅರಿತರೆ ಏನೆಲ್ಲಾ ಪಡೆದುಕೊಳ್ಳಬಹುದು ಎಂದರು.

ಅಧ್ಯಕ್ಷತೆ ವಹಿಸಿದ್ದ ವಿದ್ಯಾ ಪ್ರಸಾರಕ ಮಂಡಳದ ಗೌರವ ಕಾರ್ಯದರ್ಶಿ ಡಾ.ಗಿರೀಶ ಮಾಸೂರಕರ, ಗುಣಮಟ್ಟದ ಶಿಕ್ಷಣ ಕೊಡುವ ಶಿಕ್ಷಣ ಸಂಸ್ಥೆಗಳು ಇವತ್ತು ತಲೆಯತ್ತಬೇಕಾಗಿದೆ. ಮಕ್ಕಳ ಬೌದ್ಧಿಕ ಶಕ್ತಿಯನ್ನು ಹೆಚ್ಚಿಸುವ ಕಾರ್ಯ ಅವುಗಳಿಂದ ಆಗಬೇಕಾಗಿದೆ. ಸಂಸ್ಕಾರ ಪಡೆದು ಸಂಭ್ರಮಿಸುವ ಕಾರ್ಯ ನಡೆಯಬೇಕಾಗಿದೆ. ಸಂಸ್ಕೃತಿ ಎಂದರೆ ಉತ್ತಮ ಶಿಕ್ಷಣ ಪಡೆಯುವದು. ಹಣ ಸಂಪಾದಿಸಿದರೆ ಸಾಲದು ಮೌಲ್ಯಯುತ ಜೀವನ ನಡೆಸುವುದು ಮುಖ್ಯವಿದೆ ಎಂದರು.

ಬೆಳಗಾವಿಯ ಬೆಟಗೇರಿ ಕೃಷ್ಣಶರ್ಮ ಸ್ಮಾರಕ ಟ್ರಸ್ಟ್ ಸದಸ್ಯ ಡಾ. ಗೀತಾಂಜಲಿ, ವಿಪ್ರ ಮಂಡಳ ಉಪಾಧ್ಯಕ್ಷ ಜಿ.ಎನ್.ಕುಲಕರ್ಣಿ, ಪಪೂ ಕಾಲೇಜು ಗೌರ್ನಿಂಗ್ ಕೌನ್ಸಿಲ್ ಅಧ್ಯಕ್ಷ ಡಾ.ಎಂ.ಜಿ.ದೀಕ್ಷಿತ ಮುಖ್ಯತಿಥಿಗಳಾಗಿ ಆಗಮಿಸಿದ್ದರು. ಪ್ರಾಚಾರ್ಯ ಅಶೋಕ ಕಂದಗಲ್ಲ ಸ್ವಾಗತಿಸಿ ಪ್ರಾಸ್ತಾವಿಕ ನುಡಿ ಆಡಿದರು. ಡಾ.ಉಮೇಶ ತಿಮ್ಮಾಪುರ ಪರಿಚಯಿಸಿದರು, ಶ್ರೀಮತಿ ವಿ.ಎಸ್.ತೊರಗಲ್ಲ ವಂದಿಸಿದರು.ಆರ್.ಜೆ.ಬೊಮ್ಮಣಗಿ ನಿರೂಪಿಸಿದರು.ಕಾರ್ಯಕ್ರಮದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ನಗದು ಬಹುಮಾನ ನೀಡಿ ಸತ್ಕರಿಸಲಾಯಿತು.

## ಕೇಂದ್ರ ಪುರಸ್ಕೃತ ಯೋಜನೆಗಳು ಸಕಾಲದಲ್ಲಿ ತಲುಪಬೇಕು:ಸಂಸದ ಸಾಗರ ಖಂಡ್ರೆ

ಮಷಿನ್‌ಗಳಿದ್ದು ಸಿಬ್ಬಂದಿಗಳಿಗೆ ಆಪರೇಟ ಮಾಡಲು ಬರುತ್ತಿಲ್ಲ. ಕೂಡಲೆ ಕ್ರಮ ವಹಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಸೂಚಿಸಿದರು.ಕೃಷಿ ಇಲಾಖೆ ವತಿಯಿಂದ ಕೇಂದ್ರ ಸರ್ಕಾರದ ಯೋಜನೆಗಳ ಬಗ್ಗೆ ರೈತರಿಗೆ ವ್ಯಾಪರ ಪ್ರಚಾರ ನೀಡಬೇಕು ಹಾಗೂ ಹೊಸದಾಗಿ ಬೊರವೆಲ್ ಕೊರೆಸಿದ ರೈತರಿಗೆ 25 ಸಾವಿರ ಸಹಾಯಧನ ಕುರಿತು ವ್ಯಾಪಕ ಪ್ರಚಾರ ನೀಡಬೇಕು, ರಾಷ್ಟ್ರೀಯ ಕೃಷಿ ಯೋಜನೆಗಳ ಕುರಿತು ಹಾಗೂ ತೋಟಗಾರಿಕೆ ಮಿಷನ್ ಯೋಜನೆಗಳ ಲಾಭ ರೈತರು ಪಡೆಯುವಂತಾಗಬೇಕು. ತೋಟಗಾರಿಕೆ ಇಲಾಖೆ ವತಿಯಿಂದ ಪಾಲಿಹೌಸ ನಿರ್ಮಾಣ, ಕೃಷಿ ಹೊಂಡಾ, ಕೃಷಿ ಸಿಂಚಾಯಿ ಯೋಜನೆ, ನವೀನ ಹೊಸ ಯಂತ್ರೋಪಕರಣ ಕುರಿತು ರೈತರಿಗೆ ಹೆಚ್ಚಿನ ಮಾಹಿತಿ ನೀಡಬೇಕು. ಜಲಜೀವನ ಮಿಷನ್ ಯೋಜನೆಯಡಿಯಲ್ಲಿ ಮನೆ–ಮನೆಗೆ ಶುದ್ಧ ಕುಡಿಯುವ ನೀರು ತಲುಪುವಂತಾಗಬೇಕು, ಕೆಲವೊಂದು ಕಡೆ ಕಾಮಗಾರಿಗಳು ಮುಕ್ತಾಯವಾಗಿದ್ದರು ಕೂಡ ಕುಡಿಯುವ ನೀರು ಸರಬರಾಜು ಆಗುತ್ತಿಲ್ಲವೆಂದರು. ಬಿ.ಎಸ್.ಎನ್.ಎಲ್. ವತಿಯಿಂದ ಜಿಲ್ಲೆಯಲ್ಲಿರುವ 180 ಗ್ರಾಮ ಪಂಚಾಯತಗಳಿಗೆ ದೂರವಾಣಿ ಹಾಗೂ ಇಂಟರನೆಟ್ ಸೇವೆಗಳ ಸಂಪರ್ಕ ಕಲ್ಪಿಸಲು ಸೂಚಿಸಲಾಗಿತ್ತು ಆದರೆ 107 ಗ್ರಾಮ ಪಂಚಾಯತಗಳಿಗೆ ಮಾತ್ರ ಸಂಪರ್ಕ ನೀಡಲಾಗಿದೆ. ಇನ್ನು ಬಾಕಿ ಉಳಿದ 73 ಗ್ರಾಮ ಪಂಚಾಯತಗಳಿಗೆ ಆದಷ್ಟು ಬೇಗನೆ ದೂರವಾಣಿ ಹಾಗೂ ಇಂಟರನೆಟ್ ಸೇವೆಗಳ ಸಂಪರ್ಕ ಕಲ್ಪಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು.

ರೈತರ ವಿದ್ಯುತ ಪರಿವರ್ತಕಗಳು ಸುಟ್ಟು ಹೋಗುತ್ತಿರುವ ಕುರಿತು ಅನೇಕ ದೂರುಗಳು ಬರುತ್ತಿರುವುದರಿಂದ ಸಕಾಲದಲ್ಲಿ ಜೇಸ್ಕಾಂ ಅಧಿಕಾರಿಗಳು ಕ್ರಮವಹಿಸಬೇಕು. ಪಶು ಸಂಗೋಪನಾ ಇಲಾಖೆ ವತಿಯಿಂದ ಜಾನುವಾರುಗಳಿಗೆ ಲಸಿಕಾ ಕಾರ್ಯಕ್ರಮ ಯಶಸ್ವಿಯಾಗಿ ನಡೆಸಬೇಕು ಎಂದರು. ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ರಾಷ್ಟ್ರೀಯ ಹೆದ್ದಾರಿ ಇಲಾಖೆಗಳು ಸೇರಿದಂತೆ ಆಳಂದ, ಚಿಂಚೋಳಿ ತಾಲ್ಲೂಕುಗಳ ಸೇರಿದಂತೆ ಇನ್ನಿತರ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಿದರು.ಸಭೆಯಲ್ಲಿ ಬೀದರ ದಕ್ಷಿಣ ಶಾಸಕರಾದ ಡಾ.ಶೈಲೇಂದ್ರ ಬೆಲ್ದಾಳೆ ಅವರು ಮಾತನಾಡಿ, ಬೀದರ ದಕ್ಷಿಣದ ಗುನ್ನಳ್ಳಿ ಗ್ರಾಮದ ರೈಲ್ವೆ ಅಂಡರಪಾಸ್ ಕಾಮಗಾರಿ ಸರಿಯಾಗಿ ಮಾಡಿರುವುದಿಲ್ಲ ಕೂಡಲೆ ಪರಿಶೀಲನೆ ಮಾಡಿ ಸರಿಪಡಿಸಲು ಕ್ರಮವಹಿಸಬೇಕು. ಹಾಗೂ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ ಜಿಲ್ಲೆಯಲ್ಲಿ ಬೇರೆ ಬೇರೆ ತಳಿಯ ಹಣ್ಣುಗಳು ಬೆಳೆಯಲು ಪ್ರೋತ್ಸಾಹಿಸಬೇಕೆಂದು ಸಭೆಗೆ ತಿಳಿಸಿದರು.

ಇದೇ ಸಂದರ್ಭದಲ್ಲಿ ನೆಲ–ಜಲ್ ಮಿತ್ರ ಯೋಜನೆ ವತಿಯಿಂದ ವಿವಿಧ ಗ್ರಾಮ ಪಂಚಾಯತಗಳಿಗೆ ವಾಟರ ಟೆಸ್ಟಿಂಗ್ ಕಿಟ್ ಹಾಗೂ 60 ಗ್ರಾಮ ಪಂಚಾಯತಳಿಗೆ ಅಂಧ ಮಕ್ಕಳಿಗೆ ಬ್ರೈಲ್‌ಲಿಪಿ ಆಟೋಪಕರಣಗಳು ನೀಡಿದರು. ಹಾಗೂ ನರೇಗಾ ಯೋಜನೆಗಳ ಮಾಹಿತಿಯುಳ್ಳ ಕರಪತ್ರ ಹಾಗೂ ಕ್ಯಾಲೆಂಡರ್ ಬಿಡುಗಡೆಗೊಳಿಸಿದರು.

ಈ ಸಭೆಯಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಗಿರೀಶ ಬದೋಲೆ, ದಿಶಾ ಸಮಿತಿ ಸದಸ್ಯರಾದ ಶಿವಯ್ಯ ಸ್ವಾಮಿ, ಅಪರ ಜಿಲ್ಲಾಧಿಕಾರಿಗಳಾದ ಶಿವಕುಮಾರ ಶೀಲವಂತ, ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿ ಮುತ್ತಣ್ಣ ಕರಿಗಾರ, ಸಿ.ಪಿ.ಓ. ಕಿಶೋರ ದುಬೆ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಸೇರಿದಂತೆ ಬೀದರ, ಚಿಂಚೋಳಿ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಸ್ವಾತಂತ್ರ್ಯ ಹೋರಾಟಗಾರ ದಿವಂಗತ ಮಾಣಿಕರಾವ ಭಂಡಾರಿ ಯವರ 25 ನೆಯ ಪುಣ್ಯಸ್ಮರಣೆ ದಿನೋತ್ಸವ ಕಾರ್ಯಕ್ರಮ

## ಬೀದರ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರನ್ನು ಪಠ್ಯ ಪುಸ್ತಕದಲ್ಲಿ ಅಳವಡಿಸಲು ವೀರಂತರೆಡ್ಡಿ ಜಂಪಾ ಸಲಹೆ



ಹುಮನಾಬಾದ;16–ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ ದಿ.ಮಾಣಿಕರಾವಭಂಡಾರಿಯವರ ಪುಣ್ಯಸ್ಮರಣೆಕಾರ್ಯಕ್ರಮವನ್ನುಅವರ ನಿವಾಸದಲ್ಲಿಹಮ್ಮಿಕೊಳ್ಳಲಾಗಿತ್ತು.ದಿವ್ಯ ಸಾನಿಧ್ಯವನ್ನು ಶ್ರೀ ಶರಣಯ್ಯ ಸ್ವಾಮಿ ನಿಂಬೂರ ಮಠ ವಹಿಸಿದ್ದರು.ರಾಜ್ಯ ಆರ್ಯ ಸಮಾಜದ ಮುಖಂಡರಾದ ಶ್ರೀ ಸುಭಾಷ್ ಅಷ್ಟಿಕರ್ ರವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾಣಿಕರಾವ ಭಂಡಾರಿಯವರು ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿ ನಮ್ಮ ಭಾಗಕ್ಕೆ ಸ್ವಾತಂತ್ರ್ಯ ಪಡೆಯಲು ಹೋರಾಡಿದ ಮಹಾನ್ ಪುರುಷರಾಗಿದ್ದಾರೆ.ಅವರ ನೆನಪು ಸದಾ ಚಿರಸ್ಮರಣೀಯ ಎಂದು ಮುಂದಿನ ಪೀಳಿಗೆಗೆ ದಾರಿದೀಪವಾಗಿದ್ದರೆಂದು ತಿಳಿಸಿದರು. ಹಿರಿಯ ಸಾಹಿತಿ ಹೆಚ್ ಕಾಶಿನಾಥರೆಡ್ಡಿ ಮಾತನಾಡಿದರು. ಶಿಕ್ಷಕ ಸಾಹಿತಿ

ಶ್ರೀ ವೀರಂತರೆಡ್ಡಿ ಜಂಪಾ ಮಾತನಾಡಿ ದಿ.ಮಾಣಿಕರಾವ್ ಭಂಡಾರಿಯವರು ಈ ಭಾಗದ ಸ್ವಾತಂತ್ರ್ಯ ಹೋರಾಟಗಾರರ ಜೊತೆಗೂಡಿ ಹೋರಾಟದ ಮುಂಚೂಣಿಯಲ್ಲಿದ್ದು ಕಲ್ಯಾಣ ಕರ್ನಾಟಕದಸ್ವಾತಂತ್ರ್ಯಕ್ಕಾಗಿಹೋರಾಡಿ ರಜಾಕಾರರ ಸಿಂಹಸ್ವಪ್ನವಾಗಿದ್ದ ಅವರು ನಮ್ಮ ಯುವ ಪೀಳಿಗೆಗೆ ಮಾದರಿಯಾಗಿದ್ದರೆಂದು ಇತಿಹಾಸ ಪುಟದಿಂದ ತಿಳಿದು ಬರುತ್ತದೆ. ಅವರು ಹೋರಾಡಿದ ,ಮತ್ತು ಜೇಲುವಾಸ ಅನುಭವಿಸಿದ ವಿಸ್ತೃತ ಮಾಹಿತಿಯನ್ನು ನಮ್ಮ ಮಕ್ಕಳಿಗೆ ಪಠ್ಯಪುಸ್ತಕಗಳಲ್ಲಿ ಅಳವಡಿಸಿದಾಗ ಮಾತ್ರ ನಮ್ಮತನ ತಿಳಿಯಲು ಹೋರಾಟಗಾರರ ಬಗ್ಗೆ ಮಾಹಿತಿ ಮುಂದಿನ ಜನಾಂಗಕ್ಕೆಗೊತ್ತಾಗಲು ಸಾಧ್ಯವಾಗುತ್ತದೆ ಎಂದರು.ಸಾಹಿತಿ ರೇವಣಸಿದ್ದಯ್ಯ ಮಾತನಾಡಿದರು. ಶ್ರೀ ಜಗನ್ನಾಥ ಬೇಂದ್ರೆ ವಚನ ಗಾಯನ ನಡೆಸಿಕೊಟ್ಟರು. ಶ್ರೀ ರವಿ ಭಂಡಾರಿ ಪ್ರಾಸ್ತಾವಿಕ ಮಾತನಾಡಿದರು. ಇದೇ ಸಂದರ್ಭದಲ್ಲಿ ಪತ್ರಿಕಾ ವಿತರಿಕರಿಗೆ ವಿಶೇಷವಾಗಿ ಸನ್ಮಾನಿಸಲಾಯಿತು.

ವಿವಿಧ ಸಂಘಟನೆಯ ಮುಖ್ಯಸ್ಥರುಗಳಾದ ಶ್ರೀ ಪಂಡಿತ ಕೆ.ಬಾಳೂರೆ, ಶ್ರೀ ಸುರೇಂದ್ರನಾಥ್ ಹುಡುಗಿಕರ್,ರಾಜಕುಮಾರ್ ಭೂರೇಶ್,ಸುರೇಶಮುಸ್ತರಗಿ,ಅರವಿಂದ ಜೋಗರೆ, ಮನೋಜ್ ಸಿತಾಳೆ, ಕೆ.ವೀರಾರೆಡ್ಡಿ,ಕೆ.ಪ್ರಭಾಕರ್,ಪರಮೇಶ್ವರ ಸೂರ್ಯವಂಶಿ, ವೀರಯ್ಯ ಸ್ವಾಮಿ, ಅಶೋಕ ಮಠಪತಿ, ಕಾರ್ತಿಕ ಸ್ವಾಮಿ,ಬಾಬುರಾವ್ ಕಾಳೆ, ನಾಗರಾಜ್ ಹಿಬಾರೆ, ಉದಯಕುಮಾರ ವಾರದ್, ಶ್ರೀ ಭಗವಾನರಾವ್ ಕಾಳೆ,ಶಿವರಾಜ್ ಮೇತ್ರೆ ಶ್ರೀ ವಿಜಯಕುಮಾರ ಚೆಟ್ಟಿ, ರಾಜು ಭಂಡಾರಿ, ಪರಿವಾರದ ಸಹೋದರಿ ಶ್ರೀಮತಿ ನಾಗಮ್ಮ ಭಂಡಾರಿ,ಗೀತಾ ಭಂಡಾರಿ, ಕು.ಶ್ರಾವಣಿ, ಸಂಸ್ಕೃತ ಭಂಡಾರಿ ಉಪಸ್ಥಿತರಿದ್ದರು.ಶ್ರೀ ಮನೋಹರರಾವ ಭಂಡಾರಿ ವಂದಿಸಿದರು. ಗಿರೀಶ್ ಸರ್ ನಿರೂಪಣೆ ಮಾಡಿದರು.

## ಭೂಮಂಡಲದ ಬಾಬಾಸಾಹೇಬ್ ಕೃತಿಗೆ ಆಹ್ವಾನ– ಡಾ. ಸುಬ್ಬಣ್ಣ ಕರಕನಳ್ಳಿ

ಮಲ್ಲಮ್ಮ ನುಡಿ ವಾರ್ತೆ

ಬೀದರ: ವಿಶ್ವಜ್ಞಾನಿ ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ್ ಅಂಬೇಡ್ಕರ 134 ನೇ ಜಯಂತಿ, ಮಾತೋಶ್ರೀ ರಮಾಬಾಯಿ ಅಂಬೇಡ್ಕರ ರವರ 127 ನೇ ಜಯಂತಿ ಪ್ರಯುಕ್ತ ವಿಶ್ವ ಕನ್ನಡಿಗರ ಸಂಸ್ಥೆ ಕರ್ನಾಟಕ ವತಿಯಿಂದ ಭೂಮಂಡಲದ ಬಾಬಾಸಾಹೇಬ್ ಕೃತಿಯನ್ನು ಪ್ರಕಟಣೆ ಮಾಡುತ್ತಿದೆ. ಅಂಬೇಡ್ಕರ ಜೀವನ ಮತ್ತು ಹೋರಾಟ, ಅಂಬೇಡ್ಕರ ಮತ್ತು ಸಂವಿಧಾನ, ಅಂಬೇಡ್ಕರ ಮತ್ತು ದುಂಡು ಮೇಜ್, ಅಂಬೇಡ್ಕರ ಮತ್ತು ಕಾರ್ಮಿಕರು, ಅಂಬೇಡ್ಕರ ಮತ್ತು ಕೃಷಿ ನೀರಾವರಿ, ಅಂಬೇಡ್ಕರ ಮತ್ತು ಮಹಿಳೆ, ಅಂಬೇಡ್ಕರ ಮತ್ತು ಮಾಧ್ಯಮ, ಅಂಬೇಡ್ಕರ ಮತ್ತು ಭಾರತ ದೇಶ, ಅಂಬೇಡ್ಕರ ಮತ್ತು ವಿಶ್ವ ಸಂಸ್ಥೆ, ಅಂಬೇಡ್ಕರ ಮತ್ತು ವಿಶ್ವದ ರಾಷ್ಟ್ರಗಳು, ಮಾತೋಶ್ರೀ ರಮಾಬಾಯಿ ಅಂಬೇಡ್ಕರ ಜೀವನ, ಬಾಬಾಸಾಹೇಬ್ ಅಂಬೇಡ್ಕರ ರವರನ್ನು ವಿಶ್ವದ ಡಾಕ್ಟರರಾಗಿ



ರೂಪಿಸುವಲ್ಲಿ ರಮಾತಾಯಿ ಪಾತ್ರ, ಬಾಲ್ಯದ ಅಂಬೇಡ್ಕರ ಭೀಮಾತಾಯಿ ಪಾತ್ರ, ಬುದ್ಧನ ಪ್ರತಿ ಬಿಂಬ ಅಂಬೇಡ್ಕರ, ಭಾರತೀಯ ರಿಜೋರ ಬ್ಯಾಂಕ ಮತ್ತು ಅಂಬೇಡ್ಕರ, ಭಾರತದ ಆರ್ಥಿಕತೆ ಮತ್ತು ಅಂಬೇಡ್ಕರ, ಬಾಬಾಸಾಹೇಬ್ ಅಂಬೇಡ್ಕರ ರೂಪಿಸುವಲ್ಲಿ ತಂದೆ ರಾಮಜೀ ಪಾತ್ರ, ಪ್ರಚಲಿತ ವಿಶ್ವಕ್ಕೆ ಅಂಬೇಡ್ಕರ ಅಂಬೇಡ್ಕರ ಮತ್ತು ಸಂಘಟನೆಗಳು, ಅಂಬೇಡ್ಕರ ಮತ್ತು ಸರ್ಕಾರಗಳು, ಪ್ರಚಲಿತ ಸಮಸ್ಯೆಗಳ ನಿವಾರಣೆಗೆ ಅಂಬೇಡ್ಕರ, ಮುಂತಾದ ವಿಷಯ ಒಳಗೊಂಡಿರುವ ಗದ್ಯ ಮತ್ತು ಪದ್ಯ ಹಾಗೂ ನಾಟಕ ರೂಪದಲ್ಲಿ ಒಂದು ವಿಷಯವನ್ನು ಆಯ್ಕೆ ಮಾಡಿಕೊಂಡು ಬರೆದು ಕಳಿಸಲು ಮಾರ್ಚ 20 ಕೋನೆಯ ದಿನವಾಗಿರುತ್ತದೆ. ಪದ್ಯವಾಗಿದ್ದರೆ, ಎರಡು ಪುಟಗಳಲ್ಲಿ ಗದ್ಯ ಹಾಗೂ ನಾಟಿಕ ವಿಷಯ ತಜ್ಞಾರಿಂದ ಸಂದರ್ಶನವಾಗಿದ್ದರೆ, ಐದರಿಂದ ಹತ್ತು ಪುಟಗಳಲ್ಲಿ ಬರೆದು ಕಳಿಸಲು ಪತ್ರಿಕಾ ಪ್ರಕಟಣೆಯಲ್ಲಿ ವಿನಂತಿ ಮಾಡಿಕೊಳ್ಳಲಾಗಿದೆ. 17–4–318/2 ಸಿ ಎಂ ಸಿ ಕಾಲೋನಿ ಮೈಲೂರು ಬೀದರ. 585403 ದೂ ಸಂಖ್ಯೆ: 9901612139 ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ, ಏಪ್ರಿಲ್ ತಿಂಗಳಲ್ಲಿ ಸಮಾರಂಭವನ್ನು ಆಯೋಜನೆ ಮಾಡಿ ಕೃತಿಯನ್ನು ಬಿಡುಗಡೆ ಮಾಡಲಾಗುವುದು ಬರಹಗಳನ್ನು ಕಳಿಸಿದವರಿಗೆ ಗೌರವ ಸತ್ಕಾರ, ಪ್ರಕಟವಾದ ಪುಸ್ತಕ 10 ಪತ್ರಿಯನ್ನು ಬರಹಗಾರರಿಗೆ ನೀಡಲಾಗುವುದೇಂದು ವಿಶ್ವ ಕನ್ನಡಿಗರ ಸಂಸ್ಥೆ ಕರ್ನಾಟಕ ಅಧ್ಯಕ್ಷ ಡಾ. ಸುಬ್ಬಣ್ಣ ಕರಕನಳ್ಳಿ ತಿಳಿಸಿದ್ದಾರೆ.

## ಅರ್ಜಿ ಸಲ್ಲಿಕೆ ಕೊನೆಯ ದಿನಾಂಕ ವಿಸ್ತರಣೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.16–ಕಲಬುರಗಿ ವಿಭಾಗದ ಗ್ರಂಥಾಲಯ ವಿಜ್ಞಾನ ತರಬೇತಿ ಶಾಲೆಯಲ್ಲಿ 6 ತಿಂಗಳ ಅವಧಿಗೆ ಪ್ರವೇಶ ಪಡೆಯಲು ಅರ್ಜಿ ಸಲ್ಲಿಕೆ ಕೊನೆಯ ದಿನಾಂಕವನ್ನು 2025ರ ಜನವರಿ 31 ರವರೆಗೆ ವಿಸ್ತರಿಸಲಾಗಿದೆ ಎಂದು ಕಲಬುರಗಿ ಗ್ರಂಥಾಲಯ ತರಬೇತಿ ಶಾಲೆಯ ಪ್ರಾಂಶುಪಾಲರು ಹಾಗೂ ಉಪನಿರ್ದೇಶಕರು ತಿಳಿಸಿದ್ದಾರೆ.

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಅಡಿಯಲ್ಲಿ ರಾಜ್ಯದ 04 ಕಂದಾಯ ವಿಭಾಗಗಳಾದ ಬೆಂಗಳೂರು, ಮೈಸೂರು ವಿಭಾಗದ ಮಂಗಳೂರು, ಬೆಳಗಾವಿ ವಿಭಾಗದ ಧಾರವಾಡ ಮತ್ತು ಕಲಬುರಗಿ ವಿಭಾಗಗಳಲ್ಲಿ 06 ತಿಂಗಳ ಅವಧಿಗೆ ಗ್ರಂಥಾಲಯ ವಿಜ್ಞಾನ ತರಬೇತಿ ಶಾಲೆಯಲ್ಲಿ ಪ್ರವೇಶ ಪಡೆಯಲು ಈ ಹಿಂದೆ ದಿನಾಂಕ:13/12/2024 ರಂದು ಅರ್ಜಿ ಆಹ್ವಾನಿಸಿ, ಅರ್ಜಿ ಸಲ್ಲಿಕೆ ಕೊನೆಯ ದಿನಾಂಕವನ್ನು 2025ರ ಜನವರಿ 10 ರವರೆಗೆ ನಿಗದಿಪಡಿಸಲಾಗಿತ್ತೆಂದು ಅವರು ತಿಳಿಸಿದ್ದಾರೆ.

## ಬಳ್ಳಾರಿ ಪ್ರಾದೇಶಿಕ ಸಾರಿಗೆ ಕಚೇರಿಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜ.16–ನಗರದ ಸುಧಾ ಕ್ರಾಸ್ ಬಳಿಯ ಪ್ರಾದೇಶಿಕ ಸಾರಿಗೆ ಕಚೇರಿಗೆ ಕರ್ನಾಟಕ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಹಾಗೂ ಬಳ್ಳಾರಿ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳ ತಂಡವು ಗುರುವಾರ ಸಂಜೆ ದಿಢೀರ್ ಭೇಟಿ ನೀಡಿ ಕಚೇರಿಯ ವಿವಿಧ ಕಡತಗಳನ್ನು ಪರಿಶೀಲನೆ ಮಾಡಿದರು. ಕಚೇರಿಯ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಹಾಜರಾತಿ ಪುಸ್ತಕ, ಚಲನ–ವಲನ ವಹಿ ಹಾಗೂ ನಗದು ಘೋಷಣಾ ವಹಿ ಪುಸ್ತಕಗಳನ್ನು ಪರಿಶೀಲಿಸಿದರು.

ನಗದು ಘೋಷಣಾ ವಹಿ ಎಂದರೇನು? ಎಂದು ಅಧಿಕಾರಿಗಳಿಗೆ ವಿಚಾರಿಸಿದರು. ಬೆಳಿಗ್ಗೆ ಕಚೇರಿಗೆ ಬರುವಾಗ ಒಬ್ಬ ಅಧಿಕಾರಿ ಅಥವಾ ಸಿಬ್ಬಂದಿ ತನ್ನಲ್ಲಿ ಎಷ್ಟು ನಗದು ಹಣ ಇದೆ ಎಂದು ನಮೂದಿಸಬೇಕು, ಬಳಿಕ ಸಂಜೆ ಮನೆಗೆ ತೆರಳುವಾಗ ಇದ್ದ ನಗದು ಹಣದ ಮಾಹಿತಿಯನ್ನು ತಪ್ಪದೇ ನಮೂದಿಸಬೇಕು ಎಂದು ತಿಳಿಸಿದರು.ಬಳಿಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಹಾಗೂ ಕಚೇರಿ ಅಧೀಕ್ಷಕರ ಮೊಬೈಲ್ ನಲ್ಲಿನ ಫೋನ್ ಪೇ ಮತ್ತು ಗೂಗಲ್ ಪೇ ನಲ್ಲಿನ ಹಣಕಾಸು ವಹಿವಾಟಿನ ಬಗ್ಗೆ ಪರಿಶೀಲನೆ ನಡೆಸಿದರು. ಇದೇ ವೇಳೆ ಬ್ಯಾಂಕ್ ಖಾತೆಯ ವಹಿವಾಟಿನ ದಾಖಲೆ ಪ್ರತಿ ನೀಡಬೇಕು ಎಂದು ತಿಳಿಸಿದರು.

ಈ ವೇಳೆ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭರಾಣಿ.ವಿ.ಜೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್, ಕರ್ನಾಟಕ ಲೋಕಾಯುಕ್ತದ ಅಪರ ನಿಬಂಧಕರಾದ ಕೆ.ಎಂ. ರಾಜಶೇಖರ್, ಸಹಾಯಕ ನಿಬಂಧಕರಾದ ಶುಭವೀರ್ ಜೈನ್.ಬಿ., ಉಪ ನಿಬಂಧಕರಾದ ಅರವಿಂದ.ಎನ್.ವಿ., ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿಯೂ ಆದ ರಾಜೇಶ್ ಎನ್.ಹೊಸಮನೆ, ಬಳ್ಳಾರಿ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಸಿ.ಸಿದ್ಧರಾಜು, ಡಿವೈಎಸ್ಪಿ ವಸಂತ ಕುಮಾರ್ ಸೇರಿದಂತೆ ಬಳ್ಳಾರಿ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು, ಮತ್ತಿತರರು ಹಾಜರಿದ್ದರು.

## ವಾಯುವಿಹಾರಕ್ಕೆ ಹೋಗಿದ್ದ ವ್ಯಕ್ತಿ ಮೇಲೆ ಹಲ್ಲೆ

ಮಲ್ಲಮ್ಮ ನುಡಿ ವಾರ್ತೆ




ಕಲಬುರಗಿ,ಜ.16–ವಾಯುವಿಹಾರಕ್ಕೆ ಹೋಗಿದ್ದ ವ್ಯಕ್ತಿಯೊಬ್ಬರ ಮೇಲೆ ಮೂವರು ವ್ಯಕ್ತಿಗಳು ಸೇರಿ ಹಲ್ಲೆ ನಡೆಸಿರುವ ಘಟನೆ ವಾಡಿ ಸಾಹುಕಾರ–ಮಾಳಾ ಲೇಔಟ್‌ನಲ್ಲಿ ನಡೆದಿದೆ.

ಕಪನೂರ ವಿದ್ಯಾನಗರ ಕಾಲೋನಿಯ ಸಿದ್ದು ಡೊಂಗರಗೆ (40) ಎಂಬುವವರ ಮೇಲೆ ಮಹಾದೇವಪ್ಪ ಜಮಾದಾರ, ಶರಣು ಪೂಜಾರಿ ಮತ್ತು ಅಜರ್ ಎಂಬುವವರು ಹಲ್ಲೆ ನಡೆಸಿದ್ದಾರೆ.

ಸಿದ್ದು ಡೊಂಗರಗೆ ಅವರು ಜ.14 ರಂದು ಸಾಯಂಕಾಲ ತಮ್ಮ ಮನೆ ಹತ್ತಿರವಿರುವ ವಾಡಿ ಸಾಹುಕಾರ ಮತ್ತು ಮಾಳಾ ಲೇಔಟ್‌ನಲ್ಲಿ ಎಂದಿನಂತೆ ಸಾಯಂಕಾಲ 6 ಗಂಟೆಗೆ ವಾಯುವಿಹಾರಕ್ಕೆ ಹೋಗಿ 7.20ರ ಸುಮಾರಿಗೆ ಮನೆಯ ಕಡೆಗೆ ಬರುತ್ತಿದ್ದಾಗ ಮಹಾದೇವಪ್ಪ ಜಮಾದಾರ, ಶರಣು ಪೂಜಾರಿ ಮತ್ತು ಅಜರ್ ಎಂಬುವವರು ಅವರನ್ನು ತಡೆದು ಅವಾಚ್ಯವಾಗಿ ಬೈಯ್ದು ವಿನಾಕಾರಣ ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ.

ಈ ಸಂಬಂಧ ಸಿದ್ದು ಡೊಂಗರಗೆ ಅವರು ಸಬ್–ಅರ್ಬನ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ತನಿಖೆ ನಡೆದಿದೆ.



ಇಂಡಿ: ತಾಲೂಕಿನ ಮಿರಗಿ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಇರುವ ಕಿರಾಣಿ ಅಂಗಡಿಯಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದ ವೇಳೆ ಅಬಕಾರಿ ಇಲಾಖೆ ಅಧಿಕಾರಿಗಳು ದಾಳಿ ಮಾಡಿ ಒಟ್ಟು 8.640 ಲೀ ಮದ್ಯ ವಶಕ್ಕೆ ಪಡೆದ ಘಟನೆ ನಡೆದಿದ್ದು. ಸಿದ್ದಪ್ಪ ಮಲಪ್ಪ ಖಸ್ಕಿ ಸದರಿ ಆರೋಪಿತನ ವಿರುದ್ಧ ಅಬಕಾರಿ ನಿರೀಕ್ಷಕರಾದ ರಾಹುಲ ಎಸ್ ನಾಯಕ ಅವರು ಪ್ರಕರಣ ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿದರು. ಸಿಬ್ಬಂದಿಗಳಾದ ಅಶೋಕ ಎಸ್ ಗೊಣಸಗಿ, ಶಿವಾನಂದ ಕೊಡತೆ, ಬಸವಂತ ಭೈರಗೊಂಡ, ಮಂಜುನಾಥ ಬಡಿಗೇರ ದಾಳಿಯಲ್ಲಿ ಭಾಗವಸಿದರು ಅಂತಾ ಪತ್ರಿಕಾ ಪ್ರಕಟಣೆ ನೀಡಿದರು. (ಮಲ್ಲಮ್ಮ ನುಡಿ ಚಿತ್ರ)

ಆರ್ಬಿಟ್ ಸಂಸ್ಥೆಯ 30 ವರ್ಷದ ಜುಬುಲಿ ಸಂಭ್ರಮಾಚರಣೆ

## ‘ಚಪ್ಪಾಳೆ ತಟ್ಟುವ ಕೈಗಿಂತ ಕಣ್ಣೀರು ಒರೆಸುವ ಒಂದು ಬೆರಳು ಶ್ರೇಷ್ಠವಾದದ್ದು’: ಫಾದರ್ ಸಂತೋಷ್‌ಡಯಾಸ್

ಮಲ್ಲಮ್ಮ ನುಡಿ ವಾರ್ತೆ




ಹುಮನಾಬಾದ:ಜ.16–ಗುಲ್ಬರ್ಗ ಧರ್ಮ ಕ್ಷೇತ್ರದ ಧರ್ಮಾಧಿಕಾರಿಗಳಾದ ಡಾಕ್ಟರ್ ಮೈಕಲ್ ಮಿರಂದ ಕಾರ್ಯಕ್ರಮದ ಘನ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು. ಆರ್ಬಿಟ್ ಸಂಸ್ಥೆಯು 30 ವರ್ಷಗಳಿಂದ ಬಡವರ ಕಣ್ಣೀರು ಒರೆಸುವ ಕೆಲಸ ಮಾಡಿದೆ. ಸಂಸ್ಥೆಯಿಂದ ಹಲವಾರು ಯೋಜನೆಗಳ ಮುಖಾಂತರ ಸಮುದಾಯದಿಂದ ಅಂಚಿಗೆ ತಳ್ಳಲ್ಪಟ್ಟವರ, ನೋವಿಗೆ ಸ್ಪಂದಿಸುವ ಕಾರ್ಯ ಮಾಡಿದೆ. ಸಂತ ಮದರ್ ತೆರೇಸಾ ಅವರ ತತ್ವಾದರ್ಷಗಳನ್ನು ಅಳವಡಿಸಿಕೊಂಡು ಬಡವರ ಸೇವೆಯೇ ದೇವರ ಸೇವೆ ಎಂಬಂತೆ 30 ವರ್ಷಗಳಿಂದ ಸೇವೆಯನ್ನು ಮಾಡಿಕೊಂಡು ಬರುತ್ತಿದೆ. ಈ ಸೇವೆ ಮಾಡುವಲ್ಲಿ ಸಂಸ್ಥೆಯ ಕಾರ್ಯಕರ್ತರ ಪಾತ್ರ ತುಂಬಾ ಪ್ರಮುಖವಾದದ್ದು. ಮುಂದಿನ ದಿನಗಳಲ್ಲಿ ಸಂಸ್ಥೆಯಿಂದ ಇನ್ನೂ ಹೆಚ್ಚಿನ ರೀತಿಯಿಂದ ಸೇವೆಗಳು ಜನರಿಗೆ ಲಭಿಸಲಿ ಎಂದು ಹಾರೈಸುತ್ತೇನೆ ಎಂದು ನುಡಿದರು.

ಹುಮ್ನಾಬಾದ್ ಪಟ್ಟಣದ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯಲ್ಲಿ ಜನವರಿ 16ರಂದು ಸಂಸ್ಥೆಯ 30 ವರ್ಷದ ಜುಬುಲಿ ವಾರ್ಷಿಕೋತ್ಸವವನ್ನು ಅತಿ ವಿಜ್ರಂಬಣೆಯಿಂದ ಆಚರಿಸಲಾಯಿತು.

ಮುಖ್ಯ ಅತಿಥಿಯಾಗಿ ಆಗಮಿಸಿದ ವಿಧಾನ ಪರಿಷತ್ ಸದಸ್ಯರಾದ ಡಾ. ಚಂದ್ರಶೇಖರ್ ಪಾಟೀಲ ಮಾತನಾಡಿ, ಸಂಸ್ಥೆ 30 ವರ್ಷಗಳಲ್ಲಿ ಮಾಡಿದ ಸೇವೆಯು ಸುವರ್ಣ ಅಕ್ಷರಗಳಲ್ಲಿ ಬರೆಯುವಂತದ್ದು. ದೀನದಲಿತರ, ದಿಕ್ಕಿಲ್ಲದವರಿಗಾಗಿ ಸದಾ ಸೇವೆಯನ್ನು ಮಾಡುತ್ತಿದೆ. ವಿಶೇಷವಾಗಿ ಆರೋಗ್ಯಕ್ಷೇತ್ರ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಜನರ ಜೀವನ ಮಟ್ಟ ಉನ್ನತ ಮಟ್ಟಕ್ಕೆ ಏರಿಸುವಲ್ಲಿ ಸಂಸ್ಥೆಯ ಪಾತ್ರ ತುಂಬಾ ದೊಡ್ಡದಾಗಿದೆ. ಸ್ಥಾಪನೆಯಾಗಿ ಇಲ್ಲಿಯವರೆಗೆ ಮಾಡಿರುವ ಸೇವೆಯನ್ನು ನಾವು ಅತಿ ಸಮೀಪದಿಂದ ಗಮನಿಸಿದ್ದೇವೆ ಸಂಸ್ಥೆಯ ನಿರ್ದೇಶಕರು ಧರ್ಮ ಗುರುಗಳು ಹಾಗೂ ಸಿಸ್ಟರ್ಸ್ ಅವರು ತಮ್ಮ ಜೀವನವನ್ನೇ ಸಮಾಜದ ನಿಸ್ವಾರ್ಥ ಸೇವೆಗಾಗಿ ಮುಡಿಪಿಟ್ಟದ್ದಾರೆ, ಹುಮ್ನಾಬಾದ್ ತಾಲೂಕಿನ ಪಾಟೀಲ್ ಪರಿವಾರ ಆರ್ಬಿಟ್ ಸಂಸ್ಥೆಯೊಂದಿಗೆ ಸದಾ ಬೆಂಬಲವಾಗಿರುವುದಾಗಿ ನುಡಿದರು.

ಶ್ರೀ ದಾಸ್ ಸೂರ್ಯವಂಶಿ, ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ರಾಜ್ಯ ಆಯುಕ್ತರು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ವಿಶೇಷಚೇತನರಿಗಾಗಿ ಸರಕಾರವು ಹಲವಾರು ಸೌಲಭ್ಯಗಳನ್ನು ಒದಗಿಸಿಕೊಟ್ಟಿದೆ ಇದರ ಸದುಪಯೋಗವನ್ನು ಪ್ರತಿಯೊಬ್ಬ ವಿಶೇಷಚೇತನರು ಪಡೆದುಕೊಳ್ಳಬೇಕು. ಸರಕಾರದ ಸೌಲತ್ತುಗಳು ಅರ್ಹ ಫಲಾನುಭವಿಗಳು ಅನುಭವಿಸಬೇಕು. ಸರಕಾರದ ಎಲ್ಲಾ ಕಚೇರಿಗಳು ಅಂಗವಿಕಲರ ಸ್ನೇಹಿಯಾಗಿ ಪರಿವರ್ತಿಸುವ ಉದ್ದೇಶ ಹೊಂದಿದ್ದೇವೆ. ಐದು ಪ್ರತಿಶತ ಅನುದಾನವನ್ನು ವಿಶೇಷಚೇತನರಿಗಾಗಿ ಬಳಸುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮವನ್ನು ಕೈಗೊಳ್ಳುತ್ತಿದ್ದೇವೆ. ಬರುವ ಮುಂದಿನ ದಿನಗಳಲ್ಲಿ ಪ್ರತಿಗ್ರಾಮದಲ್ಲಿ ಅಂಗವಿಕರ ಹಾಗೂ ಪೋಷಕರ ಸ್ವಸಹಾಯ ಗುಂಪುಗಳನ್ನು ರಚಿಸುವ ಮೂಲಕ ಅವರ ಸಬಲೀಕರಣಕ್ಕಾಗಿ ಗಂಭೀರ ಕಾರ್ಯ ಯೋಜನೆಗಳನ್ನು ಹಾಕಿಕೊಂಡು ಆ ನಿಟ್ಟಿನಲ್ಲಿ ಕಾರ್ಯ ಮಾಡುತ್ತಿದ್ದೇವೆ. ವಿಶೇಷಚೇತನರಿಗೆ ಯಾವುದೇ ಸಮಸ್ಯೆ ಎದುರಾದರೂ ನೇರವಾಗಿ ನಮ್ಮನ್ನು ಸಂಪರ್ಕಿಸಿ ಪರಿಹಾರ ಕಂಡುಕೊಳ್ಳಬಹುದು ಎಂದು ಈ ಸಂದರ್ಭದಲ್ಲಿ ಅಭಯ ಹಸ್ತವನ್ನು ನೀಡಿದರು.

ಪೂರ್ವ ನಿರ್ದೇಶಕರಾದ ಫಾದರ್ ಸಂತೋಷ್‌ಡಯಾಸ್ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಈ 30 ವರ್ಷಗಳಲ್ಲಿ ಸಂಸ್ಥೆ ಬೆಳೆಯುವುದರೊಂದಿಗೆ ಸಂಸ್ಥೆಯ ಫಲಾನುಭವಿಗಳಾದ ಮಹಿಳೆಯರು ಸಹ ಬೆಳೆದಿರುವುದು ತುಂಬಾ ಸಂತೋಷದ ಸಂಗತಿ. ಪೂರ್ವದಲ್ಲಿ ಮಹಿಳಾ ಸ್ವಸಹಾಯ ಸಂಘಗಳನ್ನು ರಚಿಸುವಾಗ ಅನೇಕ ಅಡೆತಡೆಗಳು ಎದುರಾದವು ನಂತರ ನಿರಂತರ ಪ್ರಯತ್ನದಿಂದ ಮುಂದೆ ಮಹಿಳೆಯರು ಸಕ್ರಿಯವಾಗಿ ಸ್ವಸಹಾಯ ಸಂಘಗಳಲ್ಲಿ ಪಾಲ್ಗೊಳ್ಳುವ ಮೂಲಕ ಆರ್ಥಿಕ ಸ್ವಾತಂತ್ರ್ಯವನ್ನು ಪಡೆದುಕೊಂಡಿರುವುದು ಎಲ್ಲರಿಗೂ ಮಾದರಿಯ ವಿಷಯ. ‘ಚಪ್ಪಾಳೆ ತಟ್ಟುವ ಕೈಗಿಂತ ಕಣ್ಣೀರು ಒರೆಸುವ ಒಂದು ಬೆರಳು ಶ್ರೇಷ್ಠ’ ಆರ್ಬಿಟ್ ಸಂಸ್ಥೆಯ ಪರಿಶ್ರಮ ಇದರಲ್ಲಿ ಎದ್ದು ಕಾಣುತ್ತದೆ ಎಂದು ನುಡಿದರು.

ಸಂಸ್ಥೆಯ ಫಲಾನುಭವಿ ಶ್ರೀಮತಿ ವಿಮಲಬಾಯಿ ತಮ್ಮ ಅನುಭವವನ್ನು ಹಂಚಿಕೊಳ್ಳುವ ಮೂಲಕ ಸುಮಾರು 30 ವರ್ಷಗಳಿಂದ ಆರ್ಬಿಟ್ ಸಂಸ್ಥೆಯೊಂದಿಗೆ ನಿಕಟ ಸಂಬಂಧವನ್ನು ಹೊಂದಿ ಮಹಿಳಾ ಸ್ವಸಹಾಯ ಸಂಘದಲ್ಲಿ ಸಕ್ರಿಯ ಸದಸ್ಯತ್ವವನ್ನು ಪಡೆದುಕೊಂಡು, ಸಂಸ್ಥೆಯ ಪ್ರತಿಯೊಂದು ಕಾರ್ಯಕ್ರಮ, ತರಬೇತಿಗಳು ಅರಿವು ಮೂಡಿಸುವ, ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ಇಂದು ನಾವು ಸಮಾಜದ ಮುಖ್ಯವಾಹಿನಿಯಲ್ಲಿ ಆರ್ಥಿಕ ಸ್ವಾತಂತ್ರ್ಯದೊಂದಿಗೆ ಮಹಿಳಾ ನಾಯಕತ್ವ ಗುಣಗಳನ್ನು ಬೆಳೆಸಿಕೊಂಡಿದ್ದೇವೆ, ಆರ್ಬಿಟ್ ಸಂಸ್ಥೆ ನಮಗೆ ಪುನರ್ಜನ್ಮವನ್ನು ನೀಡಿದೆ ಎಂದು ತಮ್ಮ ಅನುಭವವನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ಫಲಾನುಭವಿಗಳಿಗೆ ವೀಲ್‌ಚೇರ್, ಸಹಾಯಧನ, ಕುರಿವಿತರಣೆ, ಸರಕಾರಿ ಸವಲತ್ತುಗಳ ಯುಡಿಐಡಿ ಕಾರ್ಡ್, ತರಬೇತಿಯಲ್ಲಿ ಭಾಗವಹಿಸಿ ಪಡೆದುಕೊಂಡ ಪ್ರಮಾಣ ಪತ್ರಗಳು ಹಾಗೂ ಡ್ರೈವಿಂಗ್ ಲೈಸೆನ್ಸ್‌ಗಳನ್ನು ಫಲಾನುಭವಿಗಳಿಗೆ ಗಣ್ಯರಿಂದ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಮಹಿಳೆಯರಿಂದ ಕೋಲಾಟ, ಜಾನಪದ ಗೀತೆಗಳು, ನೃತ್ಯ, ಶಾಲಾ ಮಕ್ಕಳಿಂದ ಅರಿವು ಮೂಡಿಸುವ ನಾಟಕ. ಮಾಡುವ ಮೂಲಕ ನೆರೆದಿದ್ದ ಜನರನ್ನು ರಂಜಿಸಿದರು.

ಕಾರ್ಯಕ್ರಮದಲ್ಲಿ ಮೌಲಾನಾ ತಸದ್ದುಗ್ ಶಾಬ್ ನದವೆ ಅಧ್ಯಕ್ಷರು ಜಮಾತೆಉಲ್ಮ ಬೀದರ್ ಇವರು ತಮ್ಮ ಹಿತನುಡಿಗಳನ್ನು ನುಡಿದರು. ಸಂತೋಷ್ ಪಾಟೀಲ್ ಹುಮ್ನಾಬಾದ್, ಬೀದರ್ ವಲಯದ ಮುಖ್ಯ ಗುರುಗಳಾದ ಕ್ಲೇರಿಡಿಸೋಜಾ, ಹುಮ್ನಾಬಾದ್ ತಾಲೂಕಿನ ಮುಖ್ಯ ವೈದ್ಯಾಧಿಕಾರಿಗಳಾದ ನಾಗನಾಥ್ ಹುಲಸೂರೆ, ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಡಾಕ್ಟರ್ ಗುರುರಾಜ್ ಕುಲಕರ್ಣಿ, ಶ್ರೀ ಶ್ರೀನಿಧಿ ಉಪಸ್ಥಿತರಿದ್ದರು. ಕಥೋಲಿಕ ಧರ್ಮಸಭೆಯ ಗುರುಗಳು ಹಾಗೂ ಸಿಸ್ಟರ್ಸ್ ಬಹು ಸಂಖ್ಯೆಯಲ್ಲಿ ಭಾಗವಹಿಸಿದರು, ಸಂಸ್ಥೆಯ ಒಟ್ಟು ಫಲಾನುಭವಿಗಳು ಸುಮಾರು 1200 ಜನ ಭಾಗವಹಿಸಿದರು ಹಾಗೂ ಸಂಸ್ಥೆಯ ಎಲ್ಲಾ ಸಿಬ್ಬಂದಿವರ್ಗದವರು ಸಕ್ರೀಯವಾಗಿ ಭಾಗವಹಿಸುವ ಮೂಲಕ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಪ್ರಾರ್ಥನಾ ನೃತ್ಯ ಬೆಥನಿ ಶಾಲೆಯ ಮಕ್ಕಳಿಂದ, ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ಸ್ವಾಗತಿಸಿದರು, ಫಾದರ್ ಸಚಿನ್, ಸಿಸ್ಟರ್ ಕ್ರಿಸ್ಟಿನ ನಿರೂಪಿಸಿದರು, ಶ್ರೀಮತಿ ಸವಿತಾ ವಂದಿಸಿದರು.

## “ಯುವನಿಧಿ ಯೋಜನೆಯಡಿ ಜನವರಿ 20ರವರೆಗೆ ವಿಶೇಷ ನೋಂದಣಿ ಅಭಿಯಾನ”

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.16–ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಗಳಲ್ಲಿ ಒಂದಾದ ‘ಯುವನಿಧಿ’ ಯೋಜನೆಯಡಿ ಫಲಾನುಭವಿಗಳ ನೋಂದಣಿ ಪ್ರಕ್ರೀಯು ಚಾಲ್ತಿಯಲ್ಲಿದ್ದು, ಈ ಸಂಬಂಧ 2022–23 ಹಾಗೂ 2023–24ನೇ ಸಾಲಿನಲ್ಲಿ ಪದವಿ/ಡಿಪ್ಲೋಮಾ ತೇರ್ಗಡೆ ಹೊಂದಿದ ನಿರುದ್ಯೋಗ ಅಭ್ಯರ್ಥಿಗಳನ್ನು ‘ಯುವನಿಧಿ’ ಯೋಜನೆಯಡಿ https://sevasindhugs.karnataka.gov.in ಸೇವಾಸಿಂಧು ಪೋರ್ಟಲ್‌ನಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಜನವರಿ 20 ರವರೆಗೆ ವಿಶೇಷ ನೋಂದಣಿ ಅಭಿಯಾನ”ವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಲಬುರಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಈ ವಿಶೇಷ ನೋಂದಣಿ ಅಭಿಯಾನ”ವನ್ನು ಕಲಬುರಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಜಿಲ್ಲೆಯ ಎಲ್ಲಾ ವಿಶ್ವವಿದ್ಯಾಲಯಗಳು, ಸರ್ಕಾರಿ/ಅನುದಾನಿತ ಪದವಿ/ಡಿಪ್ಲೋಮಾ, ತಾಲ್ಲೂಕು ಕಚೇರಿಗಳಲ್ಲಿ ಹಮ್ಮಿಕೊಳ್ಳಲಾಗಿದೆ. ಅರ್ಹ ಫಲಾನುಭವಿಗಳು ಇದರ ಸದುಪಯೋಗ ಪಡೆಯಬೇಕು. ಪದವೀದರರಿಗೆ ಪ್ರತಿ ತಿಂಗಳು 3,000 ರೂ. ಹಾಗೂ ಡಿಪ್ಲೋಮಾ ಪದವೀದರರಿಗೆ 1500 ರೂ. ನಿರುದ್ಯೋಗಿ ಭತ್ಯೆಯನ್ನು ನೀಡಲಾಗುತ್ತದೆ. ಫಲಿತಾಂಶದ ನಂತರ ನಿರುದ್ಯೋಗಿಗಳಾಗಿ 180 ದಿವಸಗಳು ಪೂರೈಸಿ ಹೆಸರನ್ನು ನೊಂದಾಯಿಸಿಕೊಂಡ ಅಭ್ಯರ್ಥಿಗಳಿಗೆ ನೇರ ನಗದು ವರ್ಗಾವಣೆ ಮಾಡಲಾಗುತ್ತದೆ.

ನಂತರ ಮಾಹೆವಾರು ಯುವನಿಧಿ ಯೋಜನೆಯ ಪ್ರಯೋಜನವನ್ನು ಪಡೆಯಬೇಕಿದ್ದಲ್ಲಿ ಸೇವಾ ಸಿಂಧು ಪೋರ್ಟಲ್‌ನಲ್ಲಿ ಪ್ರತಿ ತಿಂಗಳು ತಾವು ನಿರುದ್ಯೋಗಿಯೆಂದು, ಉನ್ನತ ವ್ಯಾಸಂಗ ಮುಂದುವರೆಸುತ್ತಿಲ್ಲವೆಂದು ಹಾಗೂ ಸ್ವಯಂ ಉದ್ಯೋಗವಿಲ್ಲವೆಂದು ಪ್ರತಿ ತಿಂಗಳು 25ನೇ ತಾರೀಖಿನೊಳಗಾಗಿ ಸ್ವಯಂ ಘೋಷಣೆ ಆಧಾರದ ಮೇಲೆ ಅಭ್ಯರ್ಥಿಗಳು ಮುಂದಿನ ಪಾವತಿಯನ್ನು ಸ್ವೀಕರಿಸಬಹುದಾಗಿದೆ.

ಅಭ್ಯರ್ಥಿಗಳು ಕರ್ನಾಟಕ ಒನ್/ಗ್ರಾಮ ಒನ್ ಮತ್ತು ಬಾಪೂಜಿ ಸೇವಾ ಕೇಂದ್ರಗಳಲ್ಲಿ ಯುವನಿಧಿ ಯೋಜನೆಗೆ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಕಡ್ಡಾಯವಾಗಿ ಆಧಾರ್ ಸೀಡೆಡ್ ಬ್ಯಾಂಕ್ ಖಾತೆ ಹಾಗೂ ಆಧಾರ ಲಿಂಕ್ಡ್ ಮೊಬೈಲ್ ನಂಬರನ್ನು ಹೊಂದಿರಬೇಕು. ಅರ್ಜಿ ಸಲ್ಲಿಸಿದ ನಂತರ ಸೇವಾ ಸಿಂಧು ಪೋರ್ಟಲ್‌ನಲ್ಲಿ ತಮ್ಮ ಅರ್ಜಿಯು ಯಾವ ಹಂತದಲ್ಲಿದೆ ಎಂಬುವುದನ್ನು ಪರಿಶೀಲಿಸಿಕೊಂಡು, ಒಂದು ವೇಳೆ ಅರ್ಜಿಯು ಅಪ್ರೂವಾಗದ ಸಂದರ್ಭದಲ್ಲಿ ಸೂಚಿಸಲ್ಪಟ್ಟ ಇಲಾಖೆಯ ಕಛೇರಿಗಳಿಗೆ ತಮ್ಮ ಎಲ್ಲಾ ಮೂಲ ಅಂಕಪಟ್ಟಿ ಹಾಗೂ ಇತರೆ ಪ್ರಮಾಣ ಪತ್ರಗಳೊಂದಿಗೆ ಖುದ್ದಾಗಿ ಭೇಟಿ ನೀಡಿ ಅಪ್ರೂವ್ ಮಾಡಿಕೊಳ್ಳಬೇಕು.

ಹೆಚ್ಚಿನ ಮಾಹಿತಿಗಾಗಿ ಕಲಬುರಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯನ್ನು ಹಾಗೂ ಕಚೇರಿ ದೂರವಾಣಿ ಸಂಖ್ಯೆ 08472–274846 ನ್ನು ಸಂಪರ್ಕಿಸಲು ಕೋರಲಾಗಿದೆ.

## ಭಾವುರಾವ ಚಿಂಚನಸೂರ್ ನಿಧನ



ಮಲ್ಲಮ್ಮ ನುಡಿ ವಾರ್ತೆ

ಕಲ್ಬುರ್ಗಿ:ವೆಂಕಟೇಶ ನಗರದ ನಿವಾಸಿ ಭಾವುರಾವ ಚಿಂಚನಸೂರ್ (90) ಮಂಗಳವಾರ ರಂದು ನಿಧನ ಹೊಂದಿದ್ದಾರೆ. ಮೃತರಿಗೆ ಪತ್ನಿ, ಪುತ್ರಿ, ಮೂವರು ಪುತ್ರರು ಸೇರಿ ಅಪಾರ ಬಂಧುಬಳಗವಿದೆ. ಮಂಗಳವಾರ ಸಾಯಂಕಾಲ ನಗರದ ಚಿತ್ತಾರಿ ಅಡ್ಡದಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಅಪ್ರಾಪ್ತೆಗೆ ಲೈಂಗಿಕ ದೌರ್ಜನ್ಯ: 30 ವರ್ಷ ಜೈಲು ಶಿಕ್ಷೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.16: ಅಪ್ರಾಪ್ತೆ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಸಾಬೀತಾದ್ದರಿಂದ ಯಡ್ರಾಮಿ ತಾಲೂಕಿನ ಗೂಗಿಹಾಳ ( ಗುಳ್ಯಾಳ) ದ ಮಹಾಂತೇಶ ಕಡಬೂರ ಎಂಬಾತನಿಗೆ ಪೋಕ್ಸೋ ಪ್ರಕರಣದಡಿ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ 30 ವರ್ಷ ಜೈಲು ಶಿಕ್ಷೆ , 35 ಸಾವಿರ ರೂ ದಂಡ ವಿಧಿಸಿ ಆದೇಶಿಸಿದೆ.

# ಬಸವಣ್ಣನವರ ಪ್ರತಿಮೆ ಧರ್ಮ ಧ್ವಜ ಭಗ್ನಗೊಳಿಸಿದ ದುಷ್ಟರನ್ನು ಕೂಡಲೇ ಬಂಧಿಸಿ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಜ.16: ತಾಲೂಕಿನ ದಾಡಗಿ ಕ್ರಾಸ್ ಬಳಿ ಇರುವ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ ಪ್ರತಿಮೆ ಹಾಗೂ ಧರ್ಮ ಧ್ವಜವನ್ನು ಭಗ್ನಗೊಳಿಸಿರುವ ದುಷ್ಟರನ್ನು ಕೂಡಲೇ ಬಂಧಿಸಬೇಕೆಂದು ನಮ್ಮ ಕರ್ನಾಟಕ ಸೇನೆಯ ಜಿಲ್ಲಾಧ್ಯಕ್ಷ ಗಣೇಶ್ ಪಾಟೀಲ್ ಆಗ್ರಹಿಸಿದರು. ತಹಶೀಲ್ದಾರರಿಗೆ ಮನವಿ ಪತ್ರವನ್ನು ಸಲ್ಲಿಸಿ ವಿಶ್ವಕ್ಕೆ ಸಮಾನತೆ ,ಸಹೋದರತೆ ,ಭ್ರಾತೃತ್ವಸಾರಿದ ಮಹಾನುಭಾವ ಬಸವೇಶ್ವರರು. ಕಾಯಕ ,ದಾಸೋಹ ಅಹಿಂಸೆ , ಸಮಾಜದ ಪರಿಕಲ್ಪನೆಯನ್ನು ನೀಡಿ ಲಿಂಗ ಅಸಮಾನತೆಯನ್ನು ಹೋಗಲಾಡಿಸಿದರು. ಇಂಥವರ ಪ್ರತಿಮೆ ಭಗ್ನಗೊಳಿಸಿರುವ ಕೃತ್ಯವನ್ನು ಖಂಡಿಸುತ್ತೇವೆ. ತಪ್ಪಿತಸ್ಥರನ್ನು ಒಂದು ವಾರದೊಳಗೆ ಬಂಧಿಸಬೇಕು ಇಲ್ಲವಾದರೆ ಜಿಲ್ಲಾದ್ಯಂತ ಉಗ್ರವಾದ ಹೋರಾಟ ಮಾಡಲಾಗುವುದೆಂದು ತಿಳಿಸಿ, ಪ್ರತಿಮೆಗಳ ಸಮೀಪ ಸಿ ಸಿ ಕ್ಯಾಮೆರಾಗಳನ್ನು ಕಡ್ಡಾಯವಾಗಿ ಅಳವಡಿಸಬೇಕು ಅಂದಾಗ ಮಾತ್ರ ಇಂಥ ಕೃತ್ಯಗಳು ಸಂಭವಿಸುವುದಿಲ್ಲ ಎಂದರು.

ಈ ಸಂದರ್ಭದಲ್ಲಿ ಸುದೀಪ್ ತೂಗಾವೆ, ದತ್ತಾತ್ರಿ ಜಗತಾಪ, ಬಸವರಾಜ್ ಕಾರಬಾರಿ, ಕಾಶಿನಾಥ್ ಸಿ, ಸ್ವಾಮಿ ಭದ್ರೇಶ್, ದೀಪಕ್ ಥಮಕೆ , ರಾಜಕುಮಾರ್ ಕುಂಬಾರ್, ಜಗದೀಶ್ ಪಾಟೀಲ್, ಮಹೇಶ್ ರಾಚೋಟಿ , ಶಿವ ಸ್ವಾಮಿ, ಸಂಗಮೇಶ್ ಮಾಳಗೆ ,ಸಾಗರ ಸ್ವಾಮಿ ,ಆನಂದ್ ಸಾಗರ್, ವೀರಶೆಟ್ಟಿ ಎಂ, ರಾಹುಲ್ ಪಾಟೀಲ್ ಇತರರು ಉಪಸ್ಥಿತರಿದ್ದರು.

# ಕಂಬಾರ ಸಮಾಜದ ಜಿಲ್ಲಾ ಸಮಾವೇಶ 19 ರಂದು




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ:ಜ.16:ಕಂಬಾರ (ಕಮ್ಮಾರ) ಸಮಾಜದ ಜಿಲ್ಲಾ ಸಮಾವೇಶ, ಶ್ರೀ ಮಹಾಶರಣ ಕಮ್ಮಾರ ಕಲ್ಲಯ್ಯ ಜಯಂತ್ಯೋತ್ಸವ ಹಾಗೂ ಗ್ರಂಥ ಬಿಡುಗಡೆ ಸಮಾರಂಭವು ಇದೇ ದಿ.19 ರಂದು ಬೆಳಿಗ್ಗೆ 11 ಗಂಟೆಗೆ ನವನಗರದ ಕಲಾಭವನದಲ್ಲಿ ಆಯೋಜಿಸಲಾಗಿದೆ ಎಂದು ಸಮಾಜದ ಮುಖಂಡ ಈರಣ್ಣ ಕಮ್ಮಾರ ಹೇಳಿದರು.

ಗುರುವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಕಾರ್ಯಕ್ರಮ ದಿವ್ಯಸಾನ್ನಿಧ್ಯವನ್ನು ಬಸವಕಲ್ಯಾಣದ ಡಾ.ಬಸವಲಿಂಗ ಪಟ್ಟದೇವರು, ಕೂಡಲಸಂಗಮದ ಮಹಾದೇಶ್ವರ ಸ್ವಾಮೀಜಿ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಸಕ ಎಚ್.ವಾಯ್.ಮೇಟಿ ಅಧ್ಯಕ್ಷತೆ ವಹಿಸಲಿದ್ದು, ಸಂಸದ ಪಿ.ಸಿ.ಗದ್ದಿಗೌಡರ, ಶಾಸಕ ವಿಜಯಾನಂದ ಕಾಶಪ್ಪನವರ್ ಜ್ಯೋತಿ ಬೆಳಗಿಸುವರು, ಶಾಸಕ ಜೆ.ಟಿ.ಪಾಟೀಲ, ಸಿದ್ದು ಸವದಿ ಕಮ್ಮಾರ ಕಲ್ಲಯ್ಯನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವರು. ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ಶಾಸಕ ಭೀಮಸೇನ ಚಿಮ್ಮನಕಟ್ಟಿ ಸಸಿಗೆ ನೀರು ಉಣಿಸುವರು. ಮಹಾಶರಣ ಕಮ್ಮಾರ ಕಲ್ಲಯ್ಯನವರ ಗ್ರಂಥವನ್ನು ವಿಧಾನ ಪರಿಷತ್ ಶಾಸಕರಾದ ಪಿ.ಎಚ್.ಪೂಜಾರ, ಹನಮಂತ ನಿರಾಣಿ, ಜಗದೀಶ ಗುಡಗುಂಟಿ, ಪ್ರಕಾಶ ಹುಕ್ಕೇರಿ, ಸುನೀಲಗೌಡ ಪಾಟೀಲ ಬಿಡುಗಡೆ ಮಾಡುವರು.

ಮುಖ್ಯ

ಅತಿಥಿಗಳಾಗಿ ಮಾಜಿ ಸಚಿವರಾದ ಎಸ್.ಆರ್.ಪಾಟೀಲ, ಮುರುಗೇಶ ನಿರಾಣಿ, ಮಾಜಿ ಶಾಸಕ ವೀರಣ್ಣ ಚರಂತಿಮಠ, ದೊಡ್ಡನಗೌಡ ಪಾಟೀಲ, ಆನಂದ ನ್ಯಾಮಗೌಡ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಡಾ.ಸಾಗರ ತೆಕ್ಕೆನ್ನವರ್, ಜಿಲ್ಲಾ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಶ್ರೀಮತಿ ರಕ್ಷಿತಾ ಈಟಿ ಆಗಮಿಸುವರು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬಸವರಾಜ ಕಮ್ಮಾರ, ಎ.ಕೆ.ಕಂಬಾರ, ಪರಶುರಾಮ ಕಂಬಾರ, ಮಲ್ಲಪ್ಪ ಕಂಬಾರ, ಬಸವರಾಜ ಕಂಬಾರ ಉಪಸ್ಥಿತರಿದ್ದರು.

# ಪಟ್ಟದ್ದೇವರ ಶೈಕ್ಷಣಿಕ ಕಾಳಜಿ ಮಾದರಿ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಜ.16: ಗಡಿಭಾಗದಲ್ಲಿ ಶೈಕ್ಷಣಿಕ ಪ್ರಗತಿಗೆ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ತೋರುತ್ತಿರುವ ಕಾಳಜಿ ಮಾದರಿಯಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದರು.

ತಾಲೂಕಿನ ಕರಡ್ಯಾಳ ಚನ್ನಬಸವೇಶ್ವರ ಗುರುಕುಲದಲ್ಲಿ ಬೀದರ್ ಚನ್ನಬಸವೇಶ್ವರ ಗುರುಕುಲ ಪ್ರಥಮ ಪಿಯುಸಿ ವಿಜ್ಞಾನ ವಿಭಾಗದ ಪ್ರವೇಶ ಪ್ರಾರಂಭದ ಕರಪತ್ರ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಗ್ರಾಮೀಣ ಭಾಗದಲ್ಲಿ ಪೂಜ್ಯರು 1992ರಲ್ಲಿ ಪ್ರಾರಂಭಿಸಿದ ಶಿಕ್ಷಣ ಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದು ನಾಡಿಗೆ ಅದ್ಭುತ ಕೊಡುಗೆ ನೀಡುತ್ತಿದೆ. ಗ್ರಾಮೀಣ ಭಾಗದಲ್ಲಿ ತೆರೆದ ಚನ್ನಬಸವೇಶ್ವರ ಗುರುಕುಲ ಗುಣಮಟ್ಟದ ಶಿಕ್ಷಣ, ಸಂಸ್ಕಾರದ ಮೂಲಕ ರಾಜ್ಯದಲ್ಲಿ ಪ್ರತಿಷ್ಠಿತ ಸಂಸ್ಥೆಯಾಗಿ ಗುರುತಿಸಿಕೊಂಡಿದೆ.

ಇದೀಗ ಬೀದರ್ ನಗರದಲ್ಲಿ ಚನ್ನಬಸವೇಶ್ವರ ಗುರುಕುಲ ಹೆಸರಿನಲ್ಲಿ ಪಿಯುಸಿ ವಿಜ್ಞಾನ ವಿಭಾಗದ ಕಾಲೇಜು ಆರಂಭಿಸುತ್ತಿರುವುದು ಹೆಮ್ಮೆ ತರಿಸಿದೆ ಎಂದರು.

ಈ ಕಾಲೇಜು ಆರಂಭದಿಂದ ಬೀದರ್ ನಗರ ಪ್ರದೇಶ ಮತ್ತು ಸುತ್ತಮುತ್ತಲಿನ ಗ್ರಾಮದ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ಸಿಗಲಿದೆ. ಈ ಸಂಸ್ಥೆಯಡಿ ಇನ್ನಷ್ಟು ಅಂಗಸಂಸ್ಥೆ ಹೊರಬಂದು ಶೈಕ್ಷಣಿಕ ಕ್ಷೇತ್ರ ಮತ್ತಷ್ಟು ವಿಸ್ತಾರಗೊಳ್ಳಲಿ ಎಂದು ಆಶಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ನಿರ್ದೇಶಕ ಶಶಿಧರ ಕೋಸಂಬೆ, ಪ್ರಥಮ ದರ್ಜೆ ಗುತ್ತಿಗೆದಾರ ಸಂಗಮೇಶ ಹುಣಜೆ ಮದಕಟ್ಟಿ, ಆಡಳಿತಾಧಿಕಾರಿ ಮೋಹನ ರೆಡ್ಡಿ, ಪ್ರಾಚಾರ್ಯ ಬಸವರಾಜ ಮೊಳಕೀರೆ, ಉಪಪ್ರಾಚಾರ್ಯ ಸಿದ್ರಾಮ ಗೊಗ್ಗಾ ಇದ್ದರು. ಲಕ್ಷ್ಮಣ ಮೇತ್ರೆ ನಿರೂಪಿಸಿ, ವಂದಿಸಿದರು.

**ಜ.26ರಂದು ಬೀದರ್‌ನಲ್ಲಿ ಚನ್ನಬಸವೇಶ್ವರ ಪಿಯುಸಿ ಕಾಲೇಜು ಪ್ರಾರಂಭ**

ಬೀದರ್ ನಗರ ಸೇರಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ ನೀಡುವ ದಿಸೆಯಿಂದ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಚನ್ನಬಸವೇಶ್ವರ ಗುರುಕುಲ ಪ್ರಥಮ ವರ್ಷದ ವಿಜ್ಞಾನ ಪದವಿ ಪೂರ್ವ ಕಾಲೇಜು ಆರಂಭಿಸಲು ನಿರ್ಧರಿಸಿದ್ದಾರೆ ಎಂದು ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ತಿಳಿಸಿದರು.

ಜ.26ರಂದು ಬೀದರ್ ನಗರದ ರಾಂಪೂರೆ ಬ್ಯಾಂಕ್ ಕಾಲೋನಿಯಲ್ಲಿ ಕಾಲೇಜು ಉದ್ಘಾಟನೆಗೊಳ್ಳಲಿದ್ದು, ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಸಾನ್ನಿಧ್ಯದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು ಉದ್ಘಾಟಿಸಲಿದ್ದಾರೆ ಎಂದರು.

ಪೂಜ್ಯರು ಪ್ರಾರಂಭಿಸಿದ ವಿದ್ಯಾ ಸಂಸ್ಥೆಯಲ್ಲಿ ಗುಣಾತ್ಮಕ ಶಿಕ್ಷಣ ಮತ್ತು ಸಂಸ್ಕಾರಕ್ಕೆ ಹೆಚ್ಚಿನ ಒತ್ತು ಕೊಡಲಾಗುತ್ತಿದೆ. ಅತ್ಯುತ್ತಮ ಸೌಲಭ್ಯ, ನುರಿತ ಉಪನ್ಯಾಸಕರ ವರ್ಗ ಹೊಂದಿದ್ದು ನೀಟ್, ಜೆಇಇ, ಐಐಟಿ, ಐಐಎಸ್ ಇಆರ್, ಎನ್‌ಡಿಎ, ಕೆಸೆಟ್ ಸೇರಿ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ತರಬೇತಿ ಪಡೆದು ವಿದ್ಯಾರ್ಥಿಗಳು ಸಾಧಕರಾಗಿ ಹೊರಹೊಮ್ಮುತ್ತಿದ್ದಾರೆ ಎಂದು ಸಂತಸ ವ್ಯಕ್ತ ಪಡಿಸಿದರು.

ಬೀದರ್ ನಗರದ ರಾಂಪೂರೆ ಬ್ಯಾಂಕ್ ಕಾಲೋನಿಯ ಚನ್ನಬಸವೇಶ್ವರ ಗುರುಕುಲ ಕಾಲೇಜಿನಲ್ಲಿ ಫೆ.2 ರಂದು ಭಾನುವಾರ ಪಿಯುಸಿ ಪ್ರಥಮ ವರ್ಷದ ಪ್ರವೇಶಕ್ಕಾಗಿ ಸ್ಕಾಲರ ಶೀಪ್ ಪರೀಕ್ಷೆ ನಡೆಯಲಿದ್ದು ಜಿಲ್ಲೆಯ ಹೆಚ್ಚಿನ ವಿದ್ಯಾರ್ಥಿಗಳು ಭಾಗವಹಿಸಬೇಕು.

**– ಗುರುಬಸವ ಪಟ್ಟದ್ದೇವರು ಹಿರೇಮಠ ಸಂಸ್ಥಾನ ಭಾಲ್ಕಿ**

ಗ್ರಾಮೀಣ ಭಾಗದಲ್ಲಿ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ತೆರೆದ ವಿದ್ಯಾ ಸಂಸ್ಥೆಯಿಂದ ವಿದ್ಯಾರ್ಥಿಗಳು ಸಾಧಕರಾಗಿ ಹೊರಹೊಮ್ಮುತ್ತಿದ್ದಾರೆ. ಇಲ್ಲಿ ಕಲಿತ ವಿದ್ಯಾರ್ಥಿಗಳು ನಾಡಿಗೆ ಉತ್ತಮ ಕೊಡುಗೆ ನೀಡುತ್ತಿದ್ದಾರೆ.

**– ಈಶ್ವರ ಖಂಡ್ರೆ ಜಿಲ್ಲಾ ಉಸ್ತುವಾರಿ ಸಚಿವರು ಬೀದರ್**

# ಜ.22 ರಂದು ಬೀದಿ ಬದಿ ವ್ಯಾಪಾರಸ್ಥರ ಬೃಹತ್ ಸಮಾವೇಶ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ:ಜ.16: ರಾಷ್ಟ್ರೀಯ ಬೀದಿ ಬದಿ ವ್ಯಾಪಾರಿಗಳ ದಿನಾಚರಣೆ ಅಂಗವಾಗಿ ಕರ್ನಾಟಕ ಬೀದಿ ಬದಿ ವ್ಯಾಪಾರಿಗಳ ಸಂಘಟನೆ ಒಕ್ಕೂಟದ ನೇತೃತ್ವದಲ್ಲಿ ಜ. 21 ರಂದು ಬಾಗಲಕೋಟೆ ನಗರದಲ್ಲಿ ಬೀದಿ ಬದಿ ವ್ಯಾಪಾರಸ್ಥರ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಜಿಲ್ಲಾಧ್ಯಕ್ಷ ಯಲ್ಲಪ್ಪ ಸನಕೆನ್ನವರ ಹೇಳಿದರು.

ನಗರದ ಪ್ರೆಸ್‌ಕ್ಲಬ್‌ನಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9 ಗಂಟೆಗೆ ಹಳೇ ಬಾಗಲಕೋಟೆ ನಗರದ ಅಂಬೇಡ್ಕರ ವೃತ್ತದಿಂದ ಮೆರವಣಿಗೆ ಆರಂಭವಾಗಿ ನಗರದ ವಿವಿಧೆಡೆ ಸಂಚರಿಸಲಿದೆ. ಬಳಿಕ 11 ಗಂಟೆಗೆ ತರಕಾರಿ ಮಾರುಕಟ್ಟೆ ಪ್ರದೇಶದಲ್ಲಿ ಸಮಾವೇಶ ಕಾರ್ಯಕ್ರಮ ಜರುಗಲಿದೆ. ಸಂಸದ ಪಿ.ಸಿ.ಗದ್ದಿಗೌಡರ, , ಶಾಸಕರಾದ ಎಚ್.ವೈ. ಮೇಟಿ, ಬಿ.ಬಿ.ಚಿಮ್ಮನಕಟ್ಟಿ, ವಿಜಯಾನಂದ ಕಾಶಪ್ಪನವರ, ಜೆ.ಟಿ.ಪಾಟೀಲ, ವಿ.ಪ ಸದಸ್ಯ ಪಿ.ಎಚ್.ಪೂಜಾರ, ಯುವ ಮುಖಂಡರಾದ ಸಂತೋಷ ಹೊಕ್ರಾಣಿ, ಮಲ್ಲಿಕಾರ್ಜುನ ಚರಂತಿಮಠ, ಡಾ.ಶೇಖರ ಮಾನೆ ಸೇರಿದಂತೆ ಇತರ ನಾಯಕರು ಪಾಲ್ಗೊಳ್ಳಿದ್ದಾರೆ ಎಂದರು.

ಸಮಾವೇಶದ ಅಂಗವಾಗಿ ಬಾಗಲಕೋಟೆ ನಗರದಲ್ಲಿರುವ 1500 ಕ್ಕೂ ಬೀದಿ ಬದಿ ವ್ಯಾಪಾರಸ್ಥರು ತಮ್ಮ ಅಂಗಡಿ, ಮುಂಗಟ್ಟು ಬಂದ್ ಮಾಡಿ ಬೆಂಬಲ ವ್ಯಕ್ತಪಡಿಸಲಿದ್ದಾರೆ. ಉಚಿತವಾಗಿ ಆರೋಗ್ಯ ತಪಾಸಣೆ ನಡೆಯಲಿದೆ ಎಂದರು.

ಬಾಗಲಕೋಟೆ ತಾಲೂಕು ಅಧ್ಯಕ್ಷ ಆಂಜನೇಯ ಕಾಗಿ, ಮುಖಂಡರಾದ ನಾಗರಾಜ ದಳವಾಯಿ, ಬಾಳು ಬಾವಲತ್ತಿ, ಮುಕ್ತುಬ್ ಸಾಬ ದೊಡ್ಡಮನಿ, ಅಬ್ದುಲ್ ರಜಾಕ್ ಸಣ್ಣಕ್ಕಿ ಇತರರು ಇದ್ದರು.

# ಬೆನಕಟ್ಟಿಯಲ್ಲಿ ನಾಳೆ ರೊಟ್ಟಿ ತಟ್ಟುವ ಸ್ಪರ್ಧೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.16:ತಾಲೂಕಿನ ಬೆನಕಟ್ಟಿ ಗ್ರಾಮದಲ್ಲಿ ಜ.18 ರಂದು ಮಹಿಳೆಯರಿಗಾಗಿ ರೊಟ್ಟಿತಟ್ಟುವ(ಮಾಡುವ)ಸ್ಪರ್ಧೆ ಏರ್ಪಡಿಸಲಾಗಿದೆ.

ತತ್ವಜ್ಞಾನಿ ಮಹಾಯೋಗಿ ವೇಮನರ 613 ನೇಯ ಜಯಂತ್ಯೋತ್ಸವದ ಅಂಗವಾಗಿ ಸ್ಥಳೀಯ ಸರ್ವ ಮಹಿಳಾ ಸಂಘಟನೆಗಳ ಆಶ್ರಯದಲ್ಲಿ ಶನಿವಾರ ಬೆಳಿಗ್ಗೆ 10 ಗಂಟೆಯಿಂದ ಸ್ಪರ್ಧೆ ಆರಂಭವಾಗಲಿದ್ದು, ಇದರ ಜೊತೆಯಲ್ಲಿ ಸಿರಿಧಾನ್ಯಗಳ ಅಡುಗೆ ಸ್ಪರ್ಧೆಯೂ ನಡೆಯಲಿದೆ. ಸ್ಥಳೀಯ ಮಹಿಳೆಯರಿಗೆ ಮಾತ್ರ ಅವಕಾಶ ನೀಡಲಾಗಿದೆ.

ರೊಟ್ಟಿ ಮಾಡುವ ಸ್ಪರ್ಧೆಯ ವಿಜೇತ ಮೊದಲ ಮೂವರು ಮಹಿಳೆಯರಿಗೆ ಪ್ರಥಮ 3 ಸಾವಿರ, ದ್ವಿತೀಯ 2ಸಾವಿರ ಹಾಗೂ ತೃತೀಯ 1 ಸಾವಿರ ರೂ.ಗಳ ನಗದು ಬಹುಮಾನವನ್ನು ರಜನಿ(ಗೀತಾ) ಪಾಟೀಲ ನೀಡುತ್ತಿದ್ದು, ಭಾಗವಹಿಸುವ ಎಲ್ಲ ಮಹಿಳೆಯರಿಗೂ ಸಮಾಧಾನಕರ ಬಹುಮಾನ ನೀಡಲಾಗುವುದು.

ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವ ಮಹಿಳೆಯರು ಜ.17 ಶುಕ್ರವಾರ ಮಧ್ಯಾಹ್ನ 3 ಗಂಟೆಯೊಳಗೆ ಹೆಸರು ನೊಂದಾಯಿಸುವಂತೆ ಮಹಿಳಾ ಸಂಘಟನೆಗಳ ಪ್ರಕಟಣೆ ತಿಳಿಸಿದೆ.

## ಜ.21 ರಂದು ಮಹಾದೇವ ತಾತನವರ ಪುಣ್ಯ ಸ್ಮರಣೋತ್ಸವ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ:ಜ.16: ಪವಾಡ ಪುರುಷ ಅಲ್ಲಿಪುರ ಮಹಾದೇವ ತಾತನವರ 37 ನೇ ವರ್ಷದ ಪುಣ್ಯ ಸ್ಮರಣೋತ್ಸವ ಜ.21 ರಂದು ಸಂಜೆ 6 ಗಂಟೆಗೆ ಶಿವಾನುಭವ ಸಮಿತಿ, ತಾತನವರ ಸದ್ಭಕ್ತ ಮಂಡಳಿಯಿಂದ ಚರಂತಿಮಠದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಿದ್ದಲಿಂಗಪ್ಪ ಹೊಸಕೇರಿ ಹೇಳಿದರು. ನಗರದ ಪ್ರೆಸ್‌ಕ್ಲಬ್‌ನಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 6 ಗಂಟೆಗೆ ಆರಂಭವಾಗುವ ಕಾರ್ಯಕ್ರಮದಲ್ಲಿ ಚರಂತಿಮಠದ ಪ್ರಭುಸ್ವಾಮೀಜಿ, ನರಗುಂದ ವೀರಕ್ತಮಠದ ಶಿವಕುಮಾರ ಸ್ವಾಮೀಜಿ ಸಾನ್ನಿಧ್ಯವಹಿಸಲಿದ್ದಾರೆ. ಬಿವಿವಿ ಸಂಘದ ಕಾರ್ಯಾಧ್ಯಕ್ಷ, ಮಾಜಿ ಶಾಸಕ ವೀರಣ್ಣ ಚರಂತಿಮಠ ಅಧ್ಯಕ್ಷತೆ ವಹಿಸಲಿದ್ದಾರೆ. ಉಪನ್ಯಾಸಕಿ ಚೈತನ್ಯದೇವಿ ಗುದ್ನಯ್ಯನವರಮಠ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಅಕ್ಕ ರುದ್ರ ಬಳಗದ ಅಧ್ಯಕ್ಷೆ ಗಿರಿಜಕ್ಕಾ ಶೆಟ್ಟರ ವಿಶೇಷ ಆಮಂತ್ರಿತರಾಗಿ ಆಗಮಿಸಲಿದ್ದಾರೆ ಎಂದರು.

ಬೆಳಿಗ್ಗೆ 7 ಗಂಟೆಗೆ ತಾತಾನವರ ರಜತಮೂರ್ತಿಗೆ ಮಹಾರುದ್ರಾಭಿಷೇಕ, ಭಜನೆ, ದೀಪಾರಾಧನೆ ನಡೆಯಲಿದೆ. ಬಾಗಲಕೋಟೆ ಭಕ್ತರು ಆಗಮಿಸಿ ತಾತನವರ ದರ್ಶನ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಜಿ.ಎಸ್.ವೈಜಾಪುರ, ಮಲ್ಲಪ್ಪ ಆರಬ್ಬಿ, ವಿಶ್ವನಾಥ ವೈಜಾಪುರ, ಎ.ಎಸ್.ಪಾವಟೆ, ಬಸವರಾಜ ಮುಕ್ಕುಪ್ಪಿ ಇತರರು ಇದ್ದರು.

# ಅಂಗವಿಕಲರಿಗೆ ಪಾಲಿಟೆಕ್ನಿಕ್ ಕಾಲೇಜು




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ:ಜ.16:ಮೈಸೂರಿನ ಜೆಎಸ್‌ಎಸ್ ವಿಶೇಷಚೇತನರ ಕಾಲೇಜು ಅಂಗವಿಕಲರಿಗಾಗಿ ಕಳೆದ ಮೂವತ್ತು ವರ್ಷಗಳ ಹಿಂದೆ ಪ್ರತ್ಯೇಕ ಪಾಲಿಟೆಕ್ನಿಕ್ ಕಾಲೇಜು ಆರಂಭಿಸಿದೆ. ಬಾಗಲಕೋಟೆ ಭಾಗದ ಅಂಗವಿಕಲ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕಾಲೇಜಿನ ಉಪನ್ಯಾಸಕ ಎಂ.ಎಂ.ರಘು ಹೇಳಿದರು.

ನಗರದ ಪ್ರೆಸ್‌ಕ್ಲಬ್‌ನಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂಗವಿಕಲರು ತಾಂತ್ರಿಕ ಶಿಕ್ಷಣದಿಂದ ವಂಚಿತರಾಗಬಾರದು ಎನ್ನುವ ಉದ್ದೇಶದಿಂದ ಈ ಕಾಲೇಜು ಆರಂಭಗೊಂಡಿದೆ. ಸದ್ಯದರಲ್ಲಿ ಬಿ.ಇ ಕಾಲೇಜು ಸ್ಥಾಪನೆಯಾಗಲಿದೆ. ಪ್ರತಿ ವರ್ಷ 350, 400 ವಿದ್ಯಾರ್ಥಿಗಳ ಪ್ರವೇಶವಿದೆ. ಅದರಲ್ಲಿ ಧಾರವಾಡ, ಹಾವೇರಿ, ಬಳ್ಳಾರಿ ಭಾಗ ಸೇರಿದಂತೆ ರಾಜ್ಯದ ವಿವಿಧ ಭಾಗದಿಂದ ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಾರೆ. ಆದರೇ ಬಾಗಲಕೋಟೆ, ವಿಜಯಪುರ ಭಾಗದ ಅಂಗವಿಕಲ ವಿದ್ಯಾರ್ಥಿಗಳು ಆಗಮಿಸುತ್ತಿಲ್ಲ. ಈ ಸಾರಿ ಅವಕಾಶ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ನಮ್ಮ ಕಾಲೇಜು ಕರ್ನಾಟಕ ಸರ್ಕಾರ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್, ನವದೆಹಲಿಯ ಎಐಸಿಟಿಇ ಅನುಮೋದನೆ ಪಡೆದುಕೊಂಡಿ- ದೆ. ಕ್ಯಾಂಪಸ್ ಸಂದರ್ಶನ ಮೂಲಕ ಶೇ. 80 ರಷ್ಟು ಉದ್ಯೋಗ ಕಲ್ಪಿಸಲಾಗುತ್ತದೆ. ಸರ್ಕಾರದ ಮಾನದಂಡ ಅನುಸಾರ ಅಂಗವಿಕಲರು ಅಂತ ಪರಿಗಣಿಸಲಾಗುತ್ತದೆ ಎಂದರು. ಕಮರ್ಷಿಯಲ್ ಪ್ರಾಕ್ಟೀಸ್, ಕಂಪ್ಯೂಟರ್ ಸೈನ್ಸ್, ಜ್ಯುಯಲರಿ ಡಿಜೈನ್, ಇಲೆಕ್ಟ್ರಾನಿಕ್ ಆಂಡ್ ಕಮ್ಯೂನಿಕೇಷನ್ ಸೈನ್ಸ್, ಅಪರೆಲ್ ಡಿಜೈನ್, ಫ್ಯಾಬ್ರಿಕೇಷನ್ ಟೆಕ್ನಾಲಜಿ ಸೇರಿದಂತೆ ವಿವಿಧ ಕೋರ್ಸಗಳು ಡಿಪ್ಲೋಮಾ ಪದವಿ ನೀಡಲಾಗುವುದು. ಗುಣಮಟ್ಟದ ಶಿಕ್ಷಣವಿದೆ. ವಸತಿ, ಊಟ ಸೌಲಭ್ಯ ಕಲ್ಪಿಸಲಾಗಿದೆ. ಅತ್ಯಂತ ಕಡಿಮೆ ವೆಚ್ಚದಲ್ಲಿ ಅಂಗವಿಕಲರಿಗೆ ತಾಂತ್ರಿಕ ಶಿಕ್ಷಣ ನೀಡಲಾಗುತ್ತಿದೆ. ಅವರದೇ ಸಜ್ಞೆ, ಭಾಷೆ, ಲಿಪಿ ಬಳಸಿ ಉಪನ್ಯಾಸಕರು ತರಬೇತಿ ನೀಡುತ್ತಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಎಂ.ಎನ್.ಶಿವಕುಮಾರ, ಮಹಾದೇವ ಪ್ರಸಾದ, ಫಳನಿಸ್ವಾಮಿ ಇದ್ದರು.

# ತಾಯಿಯ ಪವಿತ್ರ ಪಾದ ಸ್ವರ್ಗ ಸಮಾನ




ಮಲ್ಲಮ್ಮ ನುಡಿ ವಾರ್ತೆ

ಇಂಡಿ : ಈ ಜಗತ್ತಿನಲ್ಲಿ ಹೆತ್ತ ತಾಯಿಯ ಆಶೀರ್ವಾದಕ್ಕಿಂತ ಶ್ರೇಷ್ಠ ಅನುಗ್ರಹ ಇನ್ನೊಂದಿಲ್ಲ, ತಾಯಿಯ ಪವಿತ್ರ ಪಾದ ಸ್ವರ್ಗಕ್ಕೆ ಸಮಾನ. ದೇವರ ಆರಾಧನೆ ಮಾಡುವದು ತಾಯಿಯ ಸೇವೆ ಮಾಡುವದು ಎರಡು ಪವಿತ್ರ ಕಾರ್ಯ ಎಂದು ಸುಕ್ಷೇತ್ರ ಗೋಳಸಾರದ ಗುರುದೇವಿ ಅಮ್ಮನವರು ಹೇಳಿದರು.

ತಾಲೂಕಿನ ಗೋಳಸಾರದ ಶ್ರೀ ಪುಂಡಲಿಂಗ ಮಹಾಶಿವಯೋಗಿಗಳ ಮಠದಲ್ಲಿ ಹಮ್ಮಿಕೊಂಡ ಸದ್ಗುರು ಶ್ರೀಧರೇಶ್ವರ ಮಹಾಶಿವಯೋಗಿಗಳ 31ನೇ ಪುಣ್ಯಾರಾಧನೆ ಮಹೋತ್ಸವದ ಮಹಿಳಾ ಗೋಷ್ಠಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ತಾಯಿಯೇ ಪರಮದೈವವೆಂದು ತಿಳಿದು ತಂದೆ ತಾಯಿಯವರ ಸೇವೆಯಿಂದ ಸಕಲೈಶ್ವರ್ಯ ಪ್ರಾಪ್ತವಾಗಿ ನೆಮ್ಮದಿಯ ಬದುಕು ಸಾಧ್ಯವಾಗುತ್ತದೆ. ಗುರುಭಕ್ತಿಯನ್ನೇ ಉಸಿರಾಗಿಸಿಕೊಂಡು ಸತ್ಕಾರ್ಯ ಮಾಡುತ್ತಿರುವ ಗೋಳಸಾರ ಮತ್ತು ಜಿಲ್ಲೆಯ ಜನತೆಗೆ ಶ್ರೀ ಅಭಿನವ ಪುಂಡಲಿಂಗ ಶ್ರೀಗಳು ಮತ್ತು ಗೋಳಸಾರ ಮಠದ ದಿವ್ಯ ಕೃಪೆಯಿಂದ ಶ್ರೇಯಸ್ಸಿನ ಬದುಕು ಸಾಧ್ಯವಾಗಲಿ ಸರ್ವರಿಗೂ ಶುಭವಾಗಲಿ ಎಂದರು.

ಬುರಾಣಪೂರ ಶ್ರೀ ಸಿದ್ದಾರೂಢ ಮಠದ ಮಾತೋಶ್ರೀ ಯೋಗೀಶ್ವರಿ ಅಮ್ಮನವರು ಮಾತನಾಡಿ ಆಧ್ಯಾತ್ಮದ ಅನುಸಂಧನವೇ ಗುರು ಶಿಷ್ಯರ ನಿಜವಾದ ಸಂಬಂಧ ನಾವು ಸನ್ಮಾರ್ಗದಲ್ಲಿ ನಡೆದಾಗಲೂ ಲೋಕ ನಿಂದನೆಗಳು ಬರುವದು ಸಹಜ, ಲೋಕ ನಿಂದನೆಗೆ ಧೃತಿಗೆಡದೆ ಸರ್ವರಿಗೂ ಪ್ರೀತಿಯಿಂದ ಹಿತವನ್ನೇ ಬಯಸುವವ ದೇವಮಾನವನಾಗುತ್ತಾನೆ ಅಂತಹ ಕಾರ್ಯ ಗೋಳಸಾರ ಮಠ ಮಾಡುತ್ತಿದೆ ಎಂದರು.

ಶಿವಮೊಗ್ಗಾದ ರಂಗನಾಯಕಿ ಗುರು ಪ್ರಸಾದ ಹತ್ವಾರ ಮಾತನಾಡಿ ದೇಶದ ಸರ್ವಾಂಗೀಣ ಸದ್ವಿಕಾಸಕ್ಕಾಗಿ ಸಮರ್ಥ ಯುವಶಕ್ತಿಯ ಅಗತ್ಯವಿದ್ದು ರಾಷ್ಟ್ರ, ಮಾತೆ ಜೀಜಾ ಮಾತೆಯಂತೆ ಎಲ್ಲ ತಾಯಂದಿರು ತಮ್ಮ ಮಕ್ಕಳನ್ನು ಸಾಮ್ರಾಟ ಛತ್ರಪತಿ ಶಿವಾಜಿ ಮಹಾರಾಜರ ಚೈತನ್ಯ ಕುಡಿಗಳಂತೆ ಬೆಳೆಸಬೇಕು ಬಸವಾದಿ ಶರಣರ ಪುಣ್ಯಭೂಮಿ ಸಾಧ್ಯತೆಗಳ ಶ್ರೇಷ್ಠಭೂಮಿಯಾಗಿದ್ದು ಈ ನೆಲದ ವಾರಸುದಾರರು ನಾವುಗಳು ಎನ್ನುವದು ಹೆಮ್ಮೆ ನಮಗಿರಬೇಕು ಎಂದರು.

ಉಪನ್ಯಾಸಕಿ ಕವಿತಾ ಸುದೀಂದ್ರ ಹಾಸ್ಯಕಾರ್ಯಕ್ರಮ ನಡೆಸಿಕೊಟ್ಟರು.. ಸುಕ್ಷೇತ್ರ ಗೋಳಸಾರದ ಅಭಿನವ ಪುಂಡಲಿಂಗ ಮಹಾಶಿವಯೋಗಿಗಳು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಮಸಳಿ ಬಿಕೆಯ ತುಕಾಬಾಯಿ ಪೀರಪ್ಪ ತಳವಾರ, ಸಾತಲಗಾಂವದ ಜಯರಾಬಿ ನದಾಫ, ಸಂಗೋಗಿಯ ಚಂದ್ರಭಾಗಾ ಸುರಗಿಹಳ್ಳಿ ಇವರು ಮಾಡಿಸ ಸಮಾಜಮುಖಿ ಕಾರ್ಯಕ್ಕೆ ಮಠದ ವತಿಯಿಂದ ಇವರನ್ನು ಸನ್ಮಾನಿಸಲಾಯಿತು.

# ದುಡಿಮೆ ಸಂಸ್ಕೃತಿ ಸುಂದರ ಸಮಾಜದ ಬೇರು – ಸೇಡಂ ಜಿ.

ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ:-ಒಂದು ಸುಂದರ ಸಮಾಜದ ನಿರ್ಮಾಣವಾಗಬೇಕಾದರೆ, ಸಂಸ್ಕೃತಿ ಅದರ ಮೂಲ ಬೇರು ಎಂದು ಮಾಜಿ ಸಂಸದ ಹಾಗೂ ಚಿಂತಕರಾದ ಡಾ. ಬಸವರಾಜ ಪಾಟೀಲ ಸೇಡಂ ನುಡಿದರು. ತಾಲೂಕಿನ ಹಾರಕೂಡ ಶ್ರೀಮಠದಲ್ಲಿ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರ ದಿವ್ಯನೇತ್ರತ್ವದಲ್ಲಿ ಆಯೋಜಿಸಿದ ತೃತೀಯ ಕಾಯಕ ಉತ್ಸವದ ಪೂರ್ವ ಸಿದ್ದತಾ ಸಭೆಯಲ್ಲಿ ಮಾತನಾಡಿ ನಮ್ಮ ದೇಶದಲ್ಲಿ ಕೃಷಿ ಕಾಯಕ ಪ್ರಧಾನವಾಗಿತ್ತು, ಹೇರಳವಾದ ಸಸ್ಯ ಸಂಪತ್ತನ್ನು ಬಳಸಿಕೊಂಡು ಸಮೃದ್ಧ ಭಾರತ ಕಟ್ಟುವಲ್ಲಿ ಪ್ರತಿಯೊಬ್ಬರೂ ದುಡಿಮೆ ಸಂಸ್ಕೃತಿಯನ್ನು ವೈಗೂಡಿಸಿಕೊಳ್ಳಬೇಕು. ಪರಿಶ್ರಮವಿಲ್ಲದ ಬದುಕಿನಲ್ಲಿ ಯಾವುದೇ ಶ್ರೇಯಸ್ಸು ಕಾಣಲು ಸಾಧ್ಯವಿಲ್ಲ. ಅದ್ಭುತವಾದ ಮೆದುಳಿನ ಶಕ್ತಿಯನ್ನು ಬಳಸಿಕೊಂಡು ಕೌಶಲ್ಯಯುಕ್ತ ಕಸಬುಗಳಿಂದ ಸ್ವಾವಲಂಬಿಯಾಗಿ ಬಾಳಲು ಸಾಧ್ಯವಾಗುತ್ತದೆ.




ಎಲ್ಲರನ್ನೂ ಅಪ್ಪಿಕೊಳ್ಳುವ ಸಮನ್ವಯತೆಯ ಶ್ರೀಮಂತಿಕೆಯಿಂದ ಕೂಡಿದ ವಿಶಿಷ್ಟ ವ್ಯಕ್ತಿತ್ವಧಾರಿಗಳಾದ ಪೂಜ್ಯ ಡಾ. ಚನ್ನವೀರ ಶಿವಾಚಾರ್ಯರು ತಮ್ಮ ಶ್ರೀಮಠದಿಂದಲೇ ಬಸವಕಲ್ಯಾಣ ರಥ ಮೈದಾನದಲ್ಲಿ ಫೆಬ್ರುವರಿ 15 ಹಾಗೂ 16ನೇ ರಂದು ಆಯೋಜಿಸುತ್ತಿರುವ ಕಾಯಕ ಉತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನತೆ ಪಾಲ್ಗೊಂಡು ಇದರ ಉಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಡಾ. ಗಂಗಾಂಬಿಕ ಅಕ್ಕ ಮಾತನಾಡಿ, ಕಾಯಕ ಮತ್ತು ದಾಸೋಹ ಒಂದು ನಾಣ್ಯದ ಎರಡು ಮುಖಗಳಿದ್ದಂತೆ, ಶ್ರಮವಹಿಸಿ ಸಂಪಾದಿಸಿದ ಗಳಿಕೆ ಬಾಳಿನುದ್ದಕ್ಕೂ ಫಲ ನೀಡುತ್ತದೆ. ದುಡಿಮೆ ಇಲ್ಲದೆ ಸಂಪಾದಿಸಬೇಕೆನ್ನುವ ಮನೋಧೋರಣೆ ತೊಲಗಿ ಬೆವರು ಹನಿ ಸುರಿಸುವ ಕಾಯಕ ಪ್ರಜ್ಞೆ ನಮ್ಮದಾಗಬೇಕು.

ಪರಿಶ್ರಮವೇ ಪರಮಾತ್ಮನ ಪೂಜೆ ಎನ್ನುವ ಬಸವಾದಿ ಶರಣರ ಚಿಂತನೆಯ ಪ್ರತಿರೂಪವೇ ಕಾಯಕ ಉತ್ಸವ.

ಎಲ್ಲರೂ ಇದರ ಲಾಭ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಬಸವಕಲ್ಯಾಣ ರಥ ಮೈದಾನದಲ್ಲಿ ಜರುಗಲಿರುವ ಕಾಯಕ ಉತ್ಸವ ಕಾರ್ಯಕ್ರಮಕ್ಕಾಗಿ ಹಾರಕೂಡದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರ ದಿವ್ಯ ನೇತೃತ್ವದಲ್ಲಿ ವಿವಿಧ ಸಮಿತಿಗಳು ರಚಿಸಲಾಯಿತು.

ನಿವೃತ್ತ ನ್ಯಾಯಾಧೀಶ ಸುಭಾಷ್ ಚಂದ್ರ ನಾಗರಾಳೆ ಅನಿಸಿಕೆ ವ್ಯಕ್ತಪಡಿಸಿದರು. ಬಸವ ಮಹಾಮನೆಯ ಶ್ರೀ ಸಿದ್ರಾಮೇಶ್ವರ ಮಹಾಸ್ವಾಮಿಗಳು, ಪೂಜ್ಯ ಪಂಚಾಕ್ಷರಿ ಶ್ರೀಗಳು ಬೇಲೂರ, ಕಾವೇರಿ ಪಾಟೀಲ ಖಂಡಾಳ, ಮುಖಂಡರಾದ ಮೇಘರಾಜ ನಾಗರಾಳೆ, ರಾಜಕುಮಾರ ಬಿರಾದಾರ, ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ರಾಮಪ್ಪ ಗುದಗೆ, ಬೀದರ ಜಿಲ್ಲಾ ಪಂಚಾಯಿತಿ ನಿವೃತ್ತ ಉಪ ಕಾರ್ಯದರ್ಶಿಗಳಾದ ಬಿ. ಕೆ. ಹಿರೇಮಠ, ಮಲ್ಲಿನಾಥ ಹಿರೇಮಠ. ಆನಂದರಾವ ಝುಳಕೆ, ಮಹಾರಾಜಪ್ಪ ಮೂಳೆ ರಾಜಕುಮಾರ ಪಾಟೀಲ ಹಾರಕೂಡ, ಪೃಥ್ವಿರಾಜ ದೇಗಾಂವ, ರಾಮಲಿಂಗ ರೆಡ್ಡಿ, ಶಿವಾನಂದ ಪಾಟೀಲ ಅಷ್ಟಗಿ ಮುಂತಾದವರು ಉಪಸ್ಥಿತರಿದ್ದರು.

ಸೂರ್ಯಕಾಂತ ಮಠ ಸ್ವಾಗತಿಸಿ, ನಿರೂಪಿಸಿದರು. ವೀರಣ್ಣ ಶೀಲವಂತ ಪ್ರಾರ್ಥನೆ ಗೀತೆ ನಡೆಸಿಕೊಟ್ಟರು.


# ಇಂದು ಅಲೈಮಾರಿ ಸಮುದಾಯದ ಮಕ್ಕಳಿಗೆ ನೋಟ್ ಬುಕ್ ಹಾಗೂ ಪೇನ್ನು ವಿತರಣೆ

ಮಲ್ಲಮ್ಮ ನುಡಿ ವಾರ್ತೆ



ಬೀದರ: ದಿನಾಂಕಃ ಜ.15ರಂದು ಬೀದರ ಜಿಲ್ಲೆ ಜನನಾಯಕರು ಎಂದು ಖ್ಯಾತಿ ಹೊಂದಿರುವ ಬೀದರ ಜಿಲ್ಲೆಯ ಉಸ್ತುವಾರಿ ಸಚೀವರು ಹಾಗೂ ಅರಣ್ಯ ಮತ್ತು ಪರಿಸರ ಇಲಾಖ್ಯೆಗಳ ಸಚೀವರಾದ ಶ್ರೀ, ಈಶ್ವರ ಬಿ.ಖಂಡ್ರೆ ಇವರ 62ನೇ ಹುಟ್ಟು ಹಬ್ಬದ ನಿಮಿತ್ಯ ನೌಬಾದಿನ ಸರ್ಕಾರಿ ಶಾಲೆ ಸಿ.ಆರ್.ಪಿ.ಎಫ್ ಆವರಣದ ಬಲಭಾಗದಲ್ಲಿ 11:00 ಗಂಟೆಗೆ ಅಲೈಮಾರಿ ಸಮುದಾಯದ ಮಕ್ಕಳಿಗೆ ನೋಟ್ ಬುಕ್ ಹಾಗೂ ಪೇನ್ನು ವಿತರಣಯನ್ನು ಶ್ರೀ ಈಶ್ವರ ಖಂಡ್ರೆಯ ಅಪ್ಪಟ ಅಭಿಮಾನಿಯಾದ ಮಾಣಿಕೇಶ ಪಾಟೀಲ್ ಅವರ ನೇತೃತ್ವದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಬೊಮ್ಮನಹಳ್ಳಿ ಗ್ರಾಪಂ ಅಧ್ಯಕ್ಷೆಯಾಗಿ ಸರೋಜಾಬಾಯಿ ಅವಿರೋಧ ಆಯ್ಕೆ



ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ: ತಾಲೂಕಿನ ದೇವರ ಹಿಪ್ಪರಗಿ ಮತಕ್ಷೇತ್ರ ವ್ಯಾಪ್ತಿಯ ಬೊಮ್ಮನಹಳ್ಳಿ ಗ್ರಾಮ ಪಂಚಾಯತ್ ನ ಅಧ್ಯಕ್ಷ ಸ್ಥಾನಕ್ಕೆ ಸರೋಜಾಬಾಯಿ ಮಲಕಣ್ಣ ಮಸರಕಲ್ಲ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಹಿಂದಿನ ಅಧ್ಯಕ್ಷರಾದ ಮಲ್ಲನಗೌಡ ಪಾಟೀಲ ಇವರ ರಾಜಿನಾಮೆಯಿಂದಾಗಿ ತೆರವಾಗಿದ್ದ ಈ ಸ್ಥಾನಕ್ಕೆ ಗುರುವಾರ ನಡೆದ ಚುನಾವಣೆಯಲ್ಲಿ ಸರೋಜಾ ಬಾಯಿ ಮಲಕಣ್ಣ ಮಸರಕಲ್ಲ ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ-ಂದು ಚುನಾವಣಾಧಿಕಾರಿ ನಿಂಗಪ್ಪ ಮಸಳಿ ಘೋಷಿಸಿದರು. ಒಟ್ಟು 13 ಸದಸ್ಯ ಬಲವಿರುವ ಗ್ರಾಪಂ ಅಧ್ಯಕ್ಷರ ಈ ಚುನಾವಣೆಯಲ್ಲಿ ಎಲ್ಲ 13 ಸದಸ್ಯರು ಭಾಗವಹಿಸಿದ್ದರು. ಚುನಾವಣಾ ಸಹಾಯಕರಾಗಿ ತಾಪಂ ನ ಮಹಾಂತಗೌಡ ದೊರೆಗೋಳ, ಪಿಡಿಒ ಪ್ರಭು ಚನ್ನೂರ, ಕಾರ್ಯದರ್ಶಿ ಎಚ್.ಜಿ.ಚೌಧರಿ ಕಾರ್ಯನಿರ್ವಹಿಸಿದರು.

ವಿಜಯೋತ್ಸವ: ಗ್ರಾಪಂ ನೂತನ ಅಧ್ಯಕ್ಷೆಯಾಗಿ ಸರೋಜಾಬಾಯಿ ಮಲಕಣ್ಣ ಮಸರಕಲ್ಲ ಅವಿರೋಧವಾಗಿ ಆಯ್ಕೆಯಾಗುತ್ತಿದ್ದಂತೆ ಅವರ ಅಪಾರ ಬೆಂಬಲಿಗರು ಪಟಾಕಿ ಸಿಡಿಸಿ ಸಿಹಿ ವಿತರಿಸಿ ವಿಜಯೋತ್ಸವ ಆಚರಿಸಿದರು. ಈ ವೇಳೆ ಮುಖಂಡರಾದ ಮಡು ಸಾವುಕಾರ ಬಿರಾದಾರ, ಸಿಕಂದರ ವಠಾರ, ಜಗನ್ನಾಥ ಮಸರಕಲ್ಲ, ಶಕುಂತಲಾ ಜಗನ್ನಾಥ ಮಸರಕಲ್ಲ, ನಿಂಗಣ್ಣ ಕಲಬುರ್ಗಿ, ವೆಂಕಟೇಶ ಬಸನಗೌಡ ಮಾಡಗಿ, ಶಂಕರ ಗೌಡ ಪಾಟೀಲ, ಸಾಹೇಬಗೌಡ ಪಾಟೀಲ, ಸಿದ್ದಣ್ಣ ಕಟ್ಟಿಮನಿ, ಉಮೇಶ ಬೂದಿಹಾಳ, ಅಪ್ಪು ಮೈಲೇಶ್ವರ ಗ್ರಾಪಂ ಸದಸ್ಯರಾದ ಮಲ್ಲನಗೌಡ ಪಾಟೀಲ, ಭರಮವ್ವ ಕಾಳಗಿ, ಯಮನಪ್ಪ ಮಸರಕಲ್ಲ, ಸಾಬವ್ವ ಹರಿಜನ, ಶಿವಶಂಕರ ಕಟ್ಟಿಮನಿ, ಕಸ್ತೂರಿಬಾಯಿ ಹೆಬ್ಬಾಳ, ಜಂಗಮಯ್ಯ ಹಿರೇಮಠ, ಶಂಕ್ರಮ್ಮ ರಂಜಣಗಿ, ಚನ್ನಮ್ಮ ನಾಟೀಕಾರ, ಭಾಗಪ್ಪ ಮೇಟಿ, ಕರೆಮ್ಮ ಬಿರಾದಾರ, ಭಾಗೀರತಿ ಬಿರಾದಾರ ಇದ್ದರು.

# ಜಗದ್ಗುರು ನರೇಂದ್ರಚಾರ್ಯ ಮಹಾರಾಜರ ಜಯಂತಿ ನಿಮತ್ಯ ರಕ್ತದಾನ ಶಿಬಿರ



ಮಲ್ಲಮ್ಮ ನುಡಿ ವಾರ್ತೆ

ಬೀದರ್: ಜಿಲ್ಲೆಯ ಬೀದರ್ ನಗರದಲ್ಲಿ ಸರ್ಕಾರಿ ಬ್ರೀಮ್ಸ್ ಆಸ್ಪತ್ರೆಯ ಬ್ಲಡ್ ಬ್ಯಾಂಕ್‌ನಲ್ಲಿ ಜಗದ್ಗುರು ನರೇಂದ್ರಚಾರ್ಯ ಮಹಾರಾಜರ ಜಯಂತಿ ನಿಮತ್ಯ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದೆ. ರಕ್ತದಾನದಿಂದ ರೋಗಗಳು ನಿಯಂತ್ರಣಕ್ಕೆ ಬರುವುದರ ಜೊತೆಗೆ ಆತ್ಮ ತೃಪ್ತಿ ಸಿಗುತ್ತದೆ ಎಂದು ಹಂಸರಾಜ್ ಕವಿಗಳು ತಿಳಿಸಿದ್ದಾರೆ.

ಜಗದ್ಗುರು ನರೇಂದ್ರಚಾರ್ಯ ಮಹಾರಾಜರ ಸಂಸ್ಥಾನದ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷ ಕೂಡ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಯಿತು. ಶಿಬಿರದಲ್ಲಿ ಸ್ವಯಂ ಪ್ರೇರಿತರಾಗಿ ಸುಮಾರು ಜನ ರಕ್ತದಾನ ಮಾಡಿದ್ದರು.

ಈ ಸಂದರ್ಭದಲ್ಲಿ ನರೇಶ್‌ನಾಯಕ್, ಚಂದ್ರಕಾಂತ್ ಪಾಟೀಲ್, ಶಿವಕುಮಾರ್ ಯಾದವರೆಡ್ಡಿ, ಅರ್ಜುನ್ ಪಾಟೀಲ್, ಭರತ್ ರೂಪನರ್, ಅನಿಲ್ ಕುಮಾರ ಭುಜಂಗಿ, ವಿವೇಕಾನಂದ ಸ್ವಾಮೀ, ಗೋಪಾಲ್ ರೆಡ್ಡಿ ,ಸಂಜು ಕುಮಾರ ಬಿರಾದಾರ ಸೇರಿದಂತೆ ಇನ್ನಿತರು ಉಪಸಿತರಿದ್ದರು.

# ನುಡಿನಮನ ಕಾರ್ಯಕ್ರಮ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ, ಜ.16: ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕದ ವತಿಯಿಂದ ಕನ್ನಡ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕದ ಕಾರ್ಯಕಾರಿಣಿ ಸಮಿತಿಯ ಮಹಿಳಾ ಸದಸ್ಯರಾದ ಶ್ರೀಮತಿ ಸರೋಜಾ ಬ್ಯಾತನಾಳ್ ರವರು ವಿಧಿವಶರಾದ ಪ್ರಯುಕ್ತ ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಘಟಕವು ನುಡಿ ನಮನ ಮತ್ತು ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಜಿಲ್ಲಾ ಘಟಕದ ಅಧ್ಯಕ್ಷರಾದ ಡಾ. ನಿಷ್ಠಿ ರುದ್ರಪ್ಪ,, ಚೋರನೂರ್ ಕೊಟ್ರಪ್ಪ ಸರ್, ಗ್ರಾಮೀಣ ಘಟಕದ ಅಧ್ಯಕ್ಷರಾದ ಎ. ಎರಿಸ್ವಾಮಿ, ಶಿಕ್ಷಕರಾದ ಸತ್ಯನಾರಾಯಣ, ಲಕ್ಷ್ಮಿ ಪವನ್ ಕುಮಾರ್, ರಮಣಪ್ಪ, ಕಾರ್ತಿಕ್ ಮರಿಸ್ವಾಮಿ ಮಠ, ಚಾಂದ್ ಪಾಷಾ, ಡಾ. ಎಸ್ ಮಂಜುನಾಥ್, ವಿ ರಾಮಚಂದ್ರ, ಅಜಯ್ ಬಣಕಾರ್, ಬಿ ಹನುಮಂತರಾವ್, ತೆಂಗಿನಕಾಯಿ ಮಲ್ಲಿಕಾರ್ಜುನ್, ಮತ್ತು ತಾಲೂಕು ಘಟಕದ ಅಧ್ಯಕ್ಷರಾದ ನಾಗರೆಡ್ಡಿ ಕೆ ವಿ ಎಲ್ಲರು ನುಡಿ ನಮನ ಸಲ್ಲಿಸಿದರು, ದಿ.ಶ್ರೀಮತಿ ಸರೋಜಾ ಬ್ಯಾತನಾಳ್ ರವರ ಕುಟುಂಬಸ್ಥರು ನುಡಿ ನಮನ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

# 18ರಂದು ತಾಳಿಕೋಟಿಗೆ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಭೇಟಿ

ಮಲ್ಲಮ್ಮ ನುಡಿ ವಾರ್ತೆ



ತಾಳಿಕೋಟಿ: ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪನವರು ಜನವರಿ 18ರಂದು ಪಟ್ಟಣ-ಕ್ಕೆ ಆಗಮಿಸಲಿದ್ದಾರೆ ಎಂದು ಬಿಜೆಪಿ ಮುಖಂಡ ಪುರಸಭೆ ಸದಸ್ಯ ಮುದುಕಪ್ಪ ಬಡಿಗೇರ ತಿಳಿಸಿದ್ದಾರೆ. ಪತ್ರಿಕೆಯೊಂದಿಗೆ ಮಾತನಾಡಿದ ಅವರು ಮಾಜಿ ಉಪ ಮುಖ್ಯಮಂತ್ರಿಗಳಾದ ಈಶ್ವರಪ್ಪನವರು ಬಾಗೇವಾಡಿ ತಾಲೂಕಿನಲ್ಲಿ ಫೆ.04 ರಂದು ನಡೆಯಲಿರುವ ರಾಯಣ್ಣ ಬಿಗ್ರೇಡ್ ಸಮಾವೇಶದ ಸಿದ್ಧತೆ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಲು ಜನವರಿ 18ರಂದು ಆಗಮಿಸುತ್ತಿದ್ದು, ಈ ಸಂದರ್ಭದಲ್ಲಿ ಅವರು ತಮ್ಮ ಕುಲ ದೇವತೆಯಾದ ಪಟ್ಟಣದ ಶ್ರೀ ದ್ಯಾಮವ್ವ ದೇವಿಯ ದೇವಸ್ಥಾನಕ್ಕೆ ಬೆಳಿಗ್ಗ 10 ಗಂಟೆಗೆ ಭೇಟಿ ನೀಡಲಿದ್ದು ತಾಯಿಯ ದರ್ಶನ ಪಡೆಯಲಿದ್ದಾರೆ. ಪಕ್ಷದ ಮುಖಂಡರು ಕಾರ್ಯಕರ್ತರು ಈ ಸಮಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿರಬೇಕೆಂದು ಮನವಿ ಮಾಡಿಕೊಂಡಿದ್ದಾರೆ.

# ಕರ್ನಾಟಕ ಉಪ ಲೋಕಾಯುಕ್ತ ಬಿ.ವೀರಪ್ಪ ಅವರು ಬಳ್ಳಾರಿ ಜಿಲ್ಲಾ ಆಸ್ಪತ್ರೆ, ಬಿಮ್ಸ್ ಭೇಟಿ ಪರಿಶೀಲನೆ

ಮಲ್ಲಮ್ಮ ನುಡಿ ವಾರ್ತೆ



ಬಳ್ಳಾರಿ,ಜ.16-ಕರ್ನಾಟಕ ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಗುರುವಾರ ನಗರದ ಜಿಲ್ಲಾ ಆಸ್ಪತ್ರೆ ಮತ್ತು ಬಿಮ್ಸ್‌ಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ತುರ್ತು ಚಿಕಿತ್ಸಾ ವಿಭಾಗ, ಔಷಧಿ ವಿತರಣಾ ವಿಭಾಗ, ಓಬಿಜಿ ವಾರ್ಡ್ ಸೇರಿದಂತೆ ವಿವಿಧ ವಾರ್ಡ್ಗಳಿಗೆ ಭೇಟಿ ನೀಡಿ ಅಲ್ಲಿನ ಸ್ಥಿತಿ-ಗತಿ ಪರಿಶೀಲಿಸಿದರು.

ವಿವಿಧ ವಾರ್ಡ್ಗಳಿಗೆ ದಾಖಲಾಗಿದ್ದ ರೋಗಿಗಳ ಆರೋಗ್ಯ ವಿಚಾರಿಸಿದರು. ರೋಗಿಗಳಿಗೆ ಗುಣಮಟ್ಟ ಸೇವೆ ನೀಡಬೇಕು ಎಂದು ಅಲ್ಲಿನ ಕರ್ತವ್ಯ ನಿರತ ವೈದ್ಯಾಧಿಕಾರಿಗಳಿಗೆ ನಿರ್ದೇಶನ ನೀಡಿದರು. **ಅವಧಿ ಮೀರಿದ ಔಷಧಿಗಳನ್ನು ವಿತರಿಸುವಂತಿಲ್ಲ;** ಜಿಲ್ಲಾ ಆಸ್ಪತ್ರೆ, ಬಿಮ್ಸ್ ಸೇರಿದಂತೆ ಯಾವುದೇ ಆಸ್ಪತ್ರೆಗಳಲ್ಲಿ ಅವಧಿ ಮೀರಿದ ಔಷಧಿ, ಶಸ್ತ್ರ ಚಿಕಿತ್ಸಕ ವಸ್ತುಗಳನ್ನು ಯಾವುದೇ ಕಾರಣಕ್ಕೂ ವಿತರಿಸುವಂತಿಲ್ಲ ಮತ್ತು ಬಳಸುವಂತಿಲ್ಲ ಎಂದು ಜಿಲ್ಲಾ ಆಸ್ಪತ್ರೆ ಮತ್ತು ಬಿಮ್ಸ್ ಔಷಧಿ ವಿತರಣಾ ವಿಭಾಗದ ವೈದ್ಯಾಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

**ಔಷಧಿಗೆ ಹೊರಗಡೆ ಶಿಫಾರಸ್ಸು ಮಾಡುವಂತಿಲ್ಲ;** ಆಸ್ಪತ್ರೆಯಲ್ಲಿ ದಾಖಲಾದ ರೋಗಿಗಳಿಗೆ ಔಷಧಿಗಾಗಿ ಹೊರಗಡೆ ಶಿಫಾರಸ್ಸು ಮಾಡುವಂತಿಲ್ಲ, ಆಸ್ಪತ್ರೆಯಿಂದಲೇ ವಿತರಿಸುವಂತೆ ಸರ್ಕಾರದ ಸುತ್ತೋಲೆ ಇದ್ದು, ಸಾರ್ವಜನಿಕರು ಹೊರಗಡೆಯಿಂದ ಖರೀದಿಸಿ ತಂದಿರುವುದು ಕಂಡುಬಂದಿದೆ. ಈ ಕುರಿತು ಶಿಫಾರಸ್ಸು ಮಾಡಿದ ವೈದ್ಯಾಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಬೇಕು ಎಂದು ಬಿಮ್ಸ್ ನಿರ್ದೇಶಕರಿಗೆ ಸೂಚಿಸಿದರು. ಇದರಿಂದಾಗಿಯೇ ಬಿಮ್ಸ್ ಆಸ್ಪತ್ರೆಯ ಸುತ್ತಲೂ 20 ಕ್ಕೂ ಹೆಚ್ಚು ಔಷಧಿ ಮಳಿಗೆಗಳು ಸುತ್ತುವರೆದುಕೊಂಡಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

**ಆತ್ಮಸ್ಥೈರ್ಯ ತುಂಬಿರಿ;** ಆಸ್ಪತ್ರೆಗೆ ಬರುವ ವಿವಿಧ ರೀತಿಯ ರೋಗಿಗಳಿಗೆ ಆತ್ಮಸ್ಥೈರ್ಯ ತುಂಬಬೇಕು. ಸಣ್ಣಪುಟ್ಟ ರೋಗಕ್ಕೂ ಅವರಿಗೆ ಇನ್ನಷ್ಟು ನಿಶ್ಯಕ್ತರಾಗುವಂತೆ ಮಾಡಬಾರದು. ಸೊಪ್ಪು ತರಕಾರಿ-ಪಲ್ಯ ಸೇವಿಸುವಂತೆ ಯೋಗ-ನಿಯಮಿತ ವ್ಯಾಯಾಮ ಮಾಡುವಂತೆ ಸಲಹೆ ಮಾಡಬೇಕು ಎಂದು ಸೂಚಿಸಿದರು.

ಈ ವೇಳೆ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭರಾಣಿ.ವಿ.ಜೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್, ಕರ್ನಾಟಕ ಲೋಕಾಯುಕ್ತದ ಅಪರ ನಿಬಂಧಕರಾದ ಕೆ.ಎಂ.ರಾಜಶೇಖರ್, ಸಹಾಯಕ ನಿಬಂಧಕರಾದ ಶುಭವೀರ್ ಜೈನ್.ಬಿ., ಉಪ ನಿಬಂಧಕರಾದ ಅರವಿಂದ.ಎನ್.ವಿ., ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿಯೂ ಆದ ರಾಜೇಶ್ ಎನ್.ಹೊಸಮನೆ, ಬಳ್ಳಾರಿ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಸಿ.ಸಿದ್ಧರಾಜು, ಡಿವೈಎಸ್ಪಿ ವಸಂತಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಬಸರೆಡ್ಡಿ, ಬಿಮ್ಸ್ ನಿರ್ದೇಶಕ ಡಾ.ಗಂಗಾಧರ ಗೌಡ ಸೇರಿದಂತೆ ಬಳ್ಳಾರಿ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು, ವೈದ್ಯಾಧಿಕಾರಿಗಳು ಹಾಗೂ ಮತ್ತಿತರರು ಹಾಜರಿದ್ದರು.

# ಹಿರಿಯ ನಾಗರಿಕರಿಗೆ ಉಚಿತ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆ ಶಿಬಿರಕ್ಕೆ ಚಾಲನೆ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಜನವರಿ 16, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಹಿರಿಯ ನಾಗರಿಕರಿಗೆ ಉಚಿತ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆ ಶಿಬಿರವನ್ನು ಶಹಾಪುರದ ತಾಲೂಕು ಆಸ್ಪತ್ರೆಯಲ್ಲಿ ಡಾ.ಯಲ್ಲಪ್ಪಗೌಡ ಹಾಗೂ ಡಾ.ಜಗದೀಶ ಉಪ್ಪಿನ ಅವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಯಿತು.

ಶಹಾಪುರದ ತಾಲೂಕು ಆಸ್ಪತ್ರೆಯಲ್ಲಿ ಇಂದು ಜನವರಿ 16ರ ಗುರುವಾರ ರಂದು ಹಿರಿಯ ನಾಗರಿಕರಿಗೆ ಉಚಿತ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆಕ್ಕೆ ಯಾದಗಿರಿ ಜಿಲ್ಲಾ ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣಾಧಿಕಾರಿಗಳು ಶರಣಪ್ಪ ಪಾಟೀಲ್ ಅವರು ಶಿಬಿರಕ್ಕೆ ಚಾಲನೆ ನೀಡಲಾಯಿತು.

ಈ ಸಂದರ್ಭದಲ್ಲಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಿಬ್ಬಂದಿ ಹಾಗೂ ಇಲಾಖೆ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಿಬ್ಬಂದಿ, ಇನ್ನಿತರರು ಉಪಸ್ಥಿತರಿದ್ದರು.

# ಜ.17ರಿಂದ ಕಲಬುರಗಿಯಲದಲಿ ಭಾರತೋತ್ಸವ – ಸಿರಿಗೆರೆ ಪನ್ನಾರಾಜ್



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ:ಕಲಬುರಗಿಯಲ್ಲಿಬಹುತ್ವ ಸಂಸ್ಕೃತಿ ಭಾರತೋತ್ಸವ–2025 ಇದೇ ಜ.17 ರಿಂದ ಮೂರು ದಿನಗಳಕಾಲಜರುಗಲಿದ್ದು ಚಲೋ ಕಲಬುರಗಿ ಹಮ್ಮಿಕೊಳ್ಳಲಾಗಿದೆ ಎಂದು ಸಹಮತ ವೇದಿಕೆ ಮುಖ್ಯಸ್ಥ ಎಸ್.ಪನ್ನಾರಾಜ್ ತಿಳಿಸಿದ್ದಾರೆ.

ನಗರದಲ್ಲಿಸೌಹಾರ್ದ ಕರ್ನಾಟಕದ ವತಿಯಿಂದ ಆಯೋಜಿಸಿದ್ದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ನಮ್ಮ ತರುಣ ಪೀಳಿಗೆ ಕೋಮು ದ್ವೇಷದ ದಳ್ಳುರಿಗೆ ಸಿಲುಕದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಅದಕ್ಕಾಗಿ ಜ.17, 18 ಮತ್ತು 19 ರಂದು ಮೂರು ದಿವಸಗಳವರೆಗೆ ಕಲಬುರಗಿಯಲ್ಲಿ ರಾಜ್ಯಮಟ್ಟದ ಈ ಸೌಹಾರ್ದ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದರು.

ಸೌಹಾರ್ದ ಕರ್ನಾಟಕ–ಜಾಗತಿಕ ಲಿಂಗಾಯತ ಮಹಾಸಭೆ,ಮಾನವ ಬಂಧುತ್ವ ವೇದಿಕೆ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ದಲಿತ ಹಕ್ಕುಗಳ ಸಮಿತಿ ಮಾದಿಗ ದಂಡೋರ ಹೋರಾಟ ಸಮಿತಿ, ಕೋಲಿ ಕಬ್ಬಲಿಗ ಹೋರಾಟ ಸಮಿತಿ, ಸಂವಾದ ಕರ್ನಾಟಕ, ಎದ್ದೇಳು ಕರ್ನಾಟಕ,ದಲಿತ ಕಲಾ ಮಂಡಳಿ, ಗದಗ ರಾಷ್ಟ್ರೀಯ ಬಸವದಳ, ಕ್ರಾಂತಿ ಗಂಗೋತ್ರಿ ಅಕ್ಕನಾಗಲಾಂಬಿಕೆ ಮಹಿಳಾ ಗಣ ಸಮುದಾಯ,ಕರ್ನಾಟಕ ಪ್ರಜ್ಞಾ ಕಾನೂನು ಸಲಹಾ ಸಮಿತಿ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಮೇ ಸಾಹಿತ್ಯಮೇಳ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಎಸ್.ಎಫ್.ಐ. ಡಿ.ವೈ.ಎಫ್.ಐ.,ಸಿ.ಐ.ಟಿ.ಯು. ಅಭಿಮತ ಮಂಗಳೂರು ಭಾರತ ಜ್ಞಾನ ವಿಜ್ಞಾನ ಸಮಿತಿ, ಅಖಿಲ ಭಾರತ ದಲಿತ ಹಕ್ಕುಗಳ ಅಂದೋಲನ ಅಖಿಲ ಭಾರತ ಕಿಸಾನ ಸಭಾ ಭಾರತೀಯ ಮಹಿಳಾ ಒಕ್ಕೂಟ, ಅಖಿಲ ಭಾರತ ವಿದ್ಯಾರ್ಥಿ ಒಕ್ಕೂಟ, ಅಖಿಲ ಭಾರತ ಯುವಜನ ಒಕ್ಕೂಟ, ಭಾರತ ಖೇತ್ ಮಜೂರ್ ಯುನಿಯನ್ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘಟನೆ ಕರ್ನಾಟಕ ಪ್ರಾಂತ ರೈತ ಸಂಘ ಲಡಾಯಿ ಪ್ರಕಾಶನ ಉದ್ಯೋಗ ಖಾತ್ರಿ ಕಾಯಕಜೀವಿಗಳ ಸಂಘಟನೆ, ಅಂಬೇಡ್ಕರ್ ವಿದ್ಯಾರ್ಥಿಗಳ ಸಂಘಟನೆ (ಕೇಂದ್ರಿಯ ವಿಶ್ವವಿದ್ಯಾಲಯ), ದಲಿತ ಸಂಘಟನೆಗಳ ಒಕ್ಕೂಟ, ಸಂವಿಧಾನಪರ ಸಂಘಟನೆಗಳ ಒಕ್ಕೂಟ, ಸಮಗ್ರ ಬಸವಪರ ಸಂಘಟನೆಗಳ ಒಕ್ಕೂಟ ಕಾಯಕಜೀವಿಗಳ ಸಮಾಜ ಸಂಘಟನೆಗಳ ಒಕ್ಕೂಟದೊಂದಿಗೆ ಹಮ್ಮಿಕೊಂಡಿರುವ ಈ ಉತ್ಸವದ ಮೊದಲ ದಿನ ಶ್ರೀ ಶರಣಬಸವೇಶ್ವರ ದೇವಸ್ಥಾನದಿಂದ ಮಹಾತ್ಮ ಬಸವೇಶ್ವರ ಮತ್ತು ಬಾಬಾಸಾಹೇಬರ ಪುತ್ಥಳಿ ಮಾರ್ಗವಾಗಿ ಸ್ವಾಜಾ ಬಂದೇನವಾಜ್ ದರ್ಗಾದವರೆಗೆ "ನಮ್ಮ ನಡಿಗೆ ಶರಣ, ಸಂತ, ಸೂಫಿ ಪ್ರಜ್ಞೆಯೆಡೆಗೆ" ಘೋಷಣೆಯಡಿಯಲ್ಲಿ ವಾಹನ ಜಾಥಾ ನಡೆಯುತ್ತದೆ ಎಂದರು.

ಜ. 18 ರಂದು "ಭಾವೈಕ್ಯದ ಹೊನಲು:ಸಮನ್ವಯದ ಗಾಯನ ಗಮಲು" ಘೋಷಣೆಯಡಿ ದಿನವಿಡೀ ತತ್ವಪದ, ಸೂಫಿಪದ, ವಚನ ಗಾಯನ ಕಾರ್ಯಕ್ರಮಗಳು ಜರುಗಲಿವೆ. 19 ರಂದು ದಿನವಿಡೀ "ಬಹುತ್ವ ಭಾರತದ ಜಾಗ್ರತ ಅಭಿಯಾನ" ನಾಡಿನೆಲ್ಲೆಡೆಯಿಂದ ಪರಮಪೂಜ್ಯರು,ಸರ್ವಧರ್ಮಗಳ ನೇತಾರರು, ವಿಚಾರವಾದಿಗಳು, ಸಾಮಾಜಿಕ ಕಾರ್ಯಕರ್ತರು, ಮಾನವಹಕ್ಕುಗಳ ಹೋರಾಟಗಾರರು, ಅಖಿಲ ಕರ್ನಾಟಕದ ದುಡಿಯುವ ಜನರು ಸಮಾವೇಶಗೊಂಡು ಸಮತೆ–ಮಮತೆಗಳ ಸಂದೇಶ ಸಾರಲಿದ್ದಾರೆ.

ನಾಡಿನ ವಿವಿಧ ಜಿಲ್ಲೆಗಳಿಂದ ಜಾಥಾ ಹೊರಟು ಜ. 19 ರಂದು ಕಲಬುರಗಿಯಲ್ಲಿಸಮಾವೇಶಗೊಳ್ಳುತ್ತವೆ. ಕಲಬುರಗಿಯನ್ನುಕೋಮುವಾದಿಗಳ ಅಡ್ಡೆ ಮಾಡಲು ಬಿಡುವುದಿಲ್ಲ. ಕಾಯಕಜೀವಿಗಳ ಸ್ವಾಭಿಮಾನದ ನಡಿಗೆ ಸಮತ್ವದೆಡೆಗೆ, ನಮ್ಮ ನಡೆ ಬಹುತ್ವ ಭಾರತ ಉತ್ಸವದೆಡೆಗೆ ಎಂದರು.

ಗೋಷ್ಠಿಯಲ್ಲಿ ಸಹಮತ ವೇದಿಕೆ ಮುಖಂಡರಾದ ನಿಷ್ಠಿ ರುದ್ರಪ್ಪ, ಎ.ಮಾನಯ್ಯ, ಸತ್ಯಬಾಬು, ಕಲಾವತಿ, ಸಂಗನಕಲ್ಲು ವಿಜಯ್ ಕುಮಾರ್, ಬಿ.ಎಂ.ಪಾಟೀಲ್, ಜೆ.ವಿ.ಮಂಜುನಾಥ, ರಮೇಶ್ ಬುಜ್ಜಿ,ರಫೀಕ್,ರಿಜ್ವಾನ್ ಉಮರ್, ಪಿ ಆರ್ ವೆಂಕಟೇಶ್, ಇನ್ನಿತರರು ಇದ್ದರು.

# ಹಸು ಕೆಚ್ಚಲು ಕತ್ತರಿಸಿದ್ದಕ್ಕೆ ಆಕ್ರೋಶಗೊಂಡ ಬಿಜೆಪಿ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ; ಗೋವುಗಳ ಕೆಚ್ಚಲು ಕತ್ತರಿಸುವ ಮೂಲಕ ಕೋಟ್ಯಾಂತರ ಹಿಂದೂಗಳ ಭಾವನೆಗೆ ಧಕ್ಕೆ ಉಂಟು ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ ಬಿಜೆಪಿ ರೈತ ಮೋರ್ಚಾದ ವತಿಯಿಂದ ನಗರದಲ್ಲಿಪ್ರತಿಭಟನೆನಡೆಸಲಾಯಿತು.

ಬಿಜೆಪಿ ರೈತ ಮೋರ್ಚಾ ಜಿಲ್ಲಾ ಅಧ್ಯಕ್ಷ ಗಣಪಾಲ ಐನಾಥ ರೆಡ್ಡಿ ಈ ಘಟನೆಯನ್ನು ಖಂಡಿಸಿ ಆಕ್ರೋಶ ವ್ಯಕ್ತಪಡಿಸಿದ್ದಲ್ಲದೆ, ಗೋವುಗಳ ಮೇಲೆ ಇತ್ತೀಚೆಗೆ ನಡೆಯುತ್ತಿರುವ ಅಮಾನುಷ ಕ್ರೌರ್ಯವನ್ನು ಸಹಿಸುವುದಿಲ್ಲ ಎಂದಿದ್ದಾರೆ. ರಾಯಲ್ ವೃತ್ತದಲ್ಲಿ ಬಿಜೆಪಿ ರೈತ ಮೋರ್ಚಾ ವತಿಯಿಂದ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ಸರಕಾರ ತನ್ನ ಜವಾಬ್ದಾರಿ ಮರೆತಿದೆ. ಈ ದುಷ್ಕೃತ್ಯಕ್ಕೆ ಸಹಕರಿಸಿದವರು, ಕುಮ್ಮಕ್ಕು ನೀಡಿದವರನ್ನು ಬಂಧಿಸಬೇಕು ಎಂದು ಆಗ್ರಹಿಸಿದರು.

ಮುಖ್ಯಮಂತ್ರಿಗಳು ಮತ್ತು ಸಚಿವ ವೆಂಕಟೇಶ್ ಅವರು ಹಸು ಕೊಡುವುದಾಗಿ ಹೇಳಿದ್ದಾರೆ. ಇದು ಕೋಟಿಗಟ್ಟಲೆ ಗೋವುಗಳನ್ನು ಸಾಕುವವರು ಮತ್ತು ಹಿಂದೂಗಳ ಮನಸ್ಸಿಗೆ ಘಾಸಿ ತಂದಿದೆ. ನಿನ್ನೆ ಕಾಂಗ್ರೆಸ್ ಸಚಿವರ ಮನೆಗೆ ಗೋಮಯ ಹಚ್ಚಿ ಬಿಜೆಪಿ ಮುಖಂಡರು ಪ್ರತಿಭಟನೆ ಮಾಡಿದ್ದಾರೆ. ಇದು ಬಹುಸಂಖ್ಯಾತ ಹಿಂದೂಗಳ ಭಾವನೆಗೆ ಧಕ್ಕೆ ತರುವ ದುಷ್ಕೃತ್ಯ ಎಂದು ಆಕ್ಷೇಪಿಸಿದರು. ಈ ಸರಕಾರ ಗೋಶಾಲೆಗೆ ಬಿಡುಗಡೆ ಮಾಡಿದ ಅನುದಾನವನ್ನು ರದ್ದು ಮಾಡಿದೆ. ಸಿದ್ದರಾಮಯ್ಯ ಹಾಗೂ ಸರಕಾರದ ಕೊಳಕು ಮನಸ್ಸು ಶುದ್ಧೀಕರಣವಾಗಲಿ; ಅವರು ಗೋವುಗಳನ್ನು ರಕ್ಷಿಸುವ ಯೋಚನೆ ಮಾಡಲಿ ಎಂದು ತಿಳಿಸಿದರು.

ಸರ್ಕಾರ ನಡೆಸುವವರ ಆಲೋಚನೆಯಲ್ಲಿ ಬದಲಾವಣೆ ಆಗಿ ಗೋವುಗಳಿಗೆ ರಕ್ಷಣೆ ನೀಡಲಿ. ಹಿಂದೂಗಳ ಮನಸ್ಸಿಗೆ ಘಾಸಿ ಮಾಡದಿರಲಿ ಎಂಬ ಆಶಯವನ್ನು ಹೊಂದಿರುವುದಾಗಿ ಹೇಳಿದ ಐನಾಥರೆಡ್ಡಿ, ಇದೊಂದು ಸಾಂ–ಕೇತಿಕ ಹೋರಾಟ. ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳುತ್ತೇವೆ ಎಂದರು. ಗೋವುಗಳನ್ನು ಕಾಮಧೇನು, ಮುಕ್ಕೋಟಿ ದೇವತೆಗಳು ಅವುಗಳಲ್ಲಿ ವಾಸ ಇವೆ ಎಂದು ಭಾವಿಸುತ್ತೇವೆ ಎಂದು ವಿವರಿಸಿದರು.

ಪ್ರತಿಭಟನೆಯಲ್ಲಿ ನೆರೆದಿದ್ದ ಕಾರ್ಯಕರ್ತರು ಮುಖಂಡರು ರಕ್ಷಿಸಿ ರಕ್ಷಿಸಿ ಗೋವುಗಳನ್ನು ರಕ್ಷಿಸಿ, ಉಳಿಸಿ ಉಳಿಸಿ ಗೋವುಗಳನ್ನು ಉಳಿಸಿ, ಕಾಂಗ್ರೆಸ್ ಸರಕಾರಕ್ಕೆ ಧಿಕ್ಕಾರ–ಸೇರಿದಂತೆ ಮೊದಲಾದ ಘೋಷಣೆಗಳನ್ನು ಕೂಗಿದರು.

# ವಿದ್ಯುತ್ ಗ್ರಾಹಕರ ಸಂವಾದ, ಎಸ್‌ಒಪಿ ಸಭೆ

ಮಲ್ಲಮ್ಮ ನುಡಿ ವಾರ್ತೆ '

ಯಾದಗಿರಿ : ಜನವರಿ 16,–ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದಂತೆ ಯಾದಗಿರಿ ಕಾರ್ಯ ಮತ್ತು ಪಾಲನಾ ಹಾಗೂ ಗುರುಮಠಕಲ್ ಉಪ ವಿಭಾಗಗಳಲ್ಲಿ ವಿದ್ಯುತ್ ಗ್ರಾಹಕರ ಸಂವಾದ, ಎಸ್‌ಒಪಿ ಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಯಾದಗಿರಿ ಜೆಸ್ಕಾಂ ಕಾರ್ಯ ಮತ್ತು ಪಾಲನಾ ವಿಭಾಗ ಕಾರ್ಯನಿರ್ವಾಹಕ ಅಭಿಯಂತರರು (ವಿ) ರಾಘವೇಂದ್ರ ಅವರು ತಿಳಿಸಿದ್ದಾರೆ.

ಕಲಬುರಗಿ ಜೆಸ್ಕಾಂ, ಕಾರ್ಯ ಮತ್ತು ಪಾಲನಾ ವೃತ್ತ, ಅಧೀಕ್ಷಕ ಅಭಿಯಂತರರು (ವಿ) ಅಧ್ಯಕ್ಷತೆಯಲ್ಲಿ 2025ರ ಜನವರಿ 18ರ ಶನಿವಾರ ರಂದು ಯಾದಗಿರಿ ಕಾರ್ಯ ಮತ್ತು ಪಾಲನಾ ವಿಭಾಗದ ವ್ಯಾಪ್ತಿಯ ಯಾದಗಿರಿ ವಿಭಾಗದಲ್ಲಿ ಯಾದಗಿರಿ, ಗುರುಮಠಕಲ್ ಉಪ ವಿಭಾಗದಲ್ಲಿ ಏರ್ಪಡಿಸಿದೆ. ಆಸಕ್ತರು ಈ ಸಭೆಗೆ ಹಾಜರಾಗಿ ತಮ್ಮ ಅಹವಾಲು ಸಲ್ಲಿಸಬೇಕು, ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿಯು ವಿನಂತಿಸಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಜ್ಯದ ವೈದ್ಯಕೀಯ ಶಿಕ್ಷಣ ಸಚಿವರ ಪ್ರವಾಸ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.16–ರಾಜ್ಯದ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ. ಶರಣಪ್ರಕಾಶ ಆರ್.ಪಾಟೀಲ್ ರಾಯಚೂರಿನಿಂದ ರಸ್ತೆ ಮೂಲಕ ಜನವರಿ 18 ರಂದು ಶನಿವಾರ ಮಧ್ಯಾಹ್ನ 3 ಗಂಟೆಗೆ ಕಲಬುರಗಿಗೆ ಆಗಮಿಸಿ, ವಾಸ್ತವ್ಯ ಮಾಡುವರು.

ಜನವರಿ 19 ರಂದು ಭಾನುವಾರ ಕಲಬುರಗಿಯಲ್ಲಿ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗವಹಿಸಿ ವಾಸ್ತವ್ಯ ಮಾಡುವರು. ಜನವರಿ 20 ರಂದು ಸೋಮವಾರ ಸಂಜೆ 7 ಗಂಟೆಗೆ ಕಲಬುರಗಿ ಬ್ರಹ್ಮಪುರದಲ್ಲಿ ಶ್ರೀ ಚವದಾಪುರಿ ಹಿರೇಮಠ, ಬ್ರಹ್ಮಪುರ–ಶಹಾಬಜಾರ ಕಲಬುರಗಿ ಶ್ರೀಮದ್ ರಂಭಾಪುರಿ ಜಗದ್ಗುರುಗಳ ದಿವ್ಯಸನ್ನಿಧಾನದಲ್ಲಿ ಶತಾಯುಷಿ ಶ್ರೀ ಶಾಂತವೀರ ಶಿವಾಚಾರ್ಯ ಮಹಾಸ್ವಾಮಿಗಳ 43ನೇ ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸುವರು. ನಂತರ ರಾತ್ರಿ 9.20 ಗಂಟೆಗೆ ಕಲಬುರಗಿಯಿಂದ ವಿಮಾನದ ಮೂಲಕ ಬೆಂಗಳೂರಿಗೆ ಪ್ರಯಾಣಿಸುವರು.

# ಪ್ರತಿಭಾ ಕಾರಂಜಿಯಾ ಮಕ್ಕಳಲ್ಲಿನ ವಿಶೇಷ ಕಲೆಯನ್ನು ಹೊರಹಾಕಲು ಒಳ್ಳೆ ವೇದಿಯಾಗಿದೆ– ಶಾಸಕ: ಅಲ್ಲಮ ಪ್ರಭು



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಜ.16–ಶಿಕ್ಷಣದ ಜೊತೆಗೆ ವಿವಿಧ ಕಲೆಗಳನ್ನು ಹೊರ ತೆಗಿಯುವ ಕೆಲಸ ಶಿಕ್ಷಕ ವೃಂದದವರದಾಗಿರಬೇಕು,ಪ್ರತಿಭಾ ಕಾರಂಜಿಯು ಮಕ್ಕಳಲ್ಲಿನ ವಿಶೇಷ ಕಲೆಯನ್ನು ಹೊರಹಾಕಲು ಇದು ಒಂದು ಒಳ್ಳೆ ವೇದಿಕೆಯಾಗಿದೆ, ದಕ್ಷಿಣ ಮತಕ್ಷೇತ್ರದ ಶಾಸಕರಾದ ಅಲ್ಲಮ ಪ್ರಭು ಪಾಟೀಲ ಅವರು ಹೇಳಿದರು.

ಗುರುವಾರದಂದು ಜಿಲ್ಲಾಡಳಿತ, ಜಿಲ್ಲಾಡಳಿತ,ಜಿಲ್ಲಾ ಪಂಚಾಯತ್ ಕಲಬುರಗಿ ಹಾಗೂ ಉಪ ನಿರ್ದೇಶಕರ ಕಾರ್ಯಾಲಯ, ಶಾಲಾ ಶಿಕ್ಷಣ ಇಲಾಖೆ ವತಿಯಿಂದ ನಗರದ ಚರ್ಚ್ ರಸ್ತೆಯಲ್ಲಿರುವ ಸೆಂಟ್ ಮೇರಿ ಇಂಗ್ಲೀಷ ಮಾಧ್ಯಮ ಶಾಲೆಯ ಆವರಣದಲ್ಲಿ 2024–25ನೇ ಸಾಲಿನ ಪ್ರಾಥಮಿಕ. ಪ್ರೌಢ ಮತ್ತು ಪದವಿಪೂರ್ವ ವಿದ್ಯಾರ್ಥಿಗಳಿಗಾಗಿ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಸ್ಪರ್ಧೆಗಳ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸಿ ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಇದೆ ರೀತಿ ಮಕ್ಕಳಿಗೆ ಇದು ಕೂಡ ಒಂದು ಒಳ್ಳೆ ಕಲೆಯನ್ನು ಹುಟ್ಟಿ ಹಾಕುತ್ತದೆ ಇದರಿಂದ ಮಕ್ಕಳಿಗೆ ಪಠ್ಯದ ಜೊತೆಗೆ ತಮ್ಮ ಪ್ರತಿಭೆಗಳನ್ನು ಗುರುತಿಸಲು ಸಾಧ್ಯ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ತ್ ಸದಸ್ಯರಾದ ಶಶೀಲ್ ನಮೋಶಿ ಜಿ ನಮೋಶಿ ಅವರು ಮಾತನಾಡಿ, ಶಿಕ್ಷಣ ಎಂದರೆ ಮಕ್ಕಳ ಸರ್ವಾಂಗಣ ಅಭಿವೃದ್ಧಿಯನ್ನು ಹೊರ ಹಾಕುವುದು, ಎಲ್ಲಾ ಕಲೆಗಳ ಮುಖಾಂತರ ಪ್ರತಿಭೆಯನ್ನು ಹೊರ ತರಬೇಕು, ಇಂತಹ ಕಾರ್ಯಗಳು ಮಾಡುವುದೆ ನಮ್ಮೆರ ಕರ್ತವ್ಯ ಇದೆ. ಎಂದರು.

ಕಲ್ಯಾಣ ಕರ್ನಾಟಕ ರಸ್ತೆಸಆರಿಗೆ ನಿಗಮದ ಅಧ್ಯಕ್ಷರಾದ ಹಿರಿಯ ಶಾಸಕ ಎಂ.ವೈ. ಪಾಟೀಲ ಅವರು ಮಾತನಾಡಿ, ಮಕ್ಕಳಲ್ಲಿ ಕಲೆಯನ್ನು ಗುರುತಿಸುವುದು ಬಹಳಷ್ಟು ಮಹತ್ವ ಇದೆ.

ಶಿಕ್ಷಣ ಪ್ರಗತಿಯಾದರೆ ಮಾತ್ರ ನಾವು ಪ್ರಗತಿಯನ್ನು ಹೊಂದುತ್ತಿವೆ, ವಿದ್ಯಾರ್ಥಿಗಳಿಗೆ ಪ್ರೊತ್ಸಾಹ ತುಂಬುವ ಕಾರ್ಯಕ್ರಮಗಳು ಪ್ರತಿಭೆಯನ್ನು ವೇದಿಕೆಯಾಗಿದೆ, ನಮ್ಮ ವಿದ್ಯಾರ್ಥಿಗಳು ರಾಜ್ಯ ಮಟ್ಟ ಅಂತರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಕಲೆಯನ್ನು ತೊರುತಿ–ದ್ದಾರೆ ಅದಕ್ಕೆ ನಮಗೆ ಹೆಮ್ಮೆಯ ವಿಷಯವಾಗಿದೆ, ಇದೆ ರೀತಿಯಲ್ಲಿ ಮುಂದೆ ಹೋಗುಬೇಕು ಎಂದರು.

ಪ್ರತಿಭಾ ಕಾರಂಜಿಯಲ್ಲಿ ಭಾಷಣ ಸ್ಪರ್ಧೆ, ಪ್ರಭಂದ ಸ್ಪರ್ಧೆ, ಜನಪದ ನೃತ್ಯ, ಮೀಮಿಕ್ರಿ, ಕವ್ವಾಲಿ ನೃತ್ಯಗಳಿಗೆ ಹೆಜ್ಜೆ ಹಾಕಲು ಕಲಬುರಗಿ ಜಿಲ್ಲೆಯ ಎಲ್ಲಾ ತಾಲೂಕಿನ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಹೊರಹಾಕಲು ಶಿಕ್ಷಕರೊಂದಿಗೆ ಆಗಮಿ ಭಾಗವಹಿಸಿದರು.

ಕಾರ್ಯಕ್ರಮದಲ್ಲಿ ಸೆಂಟ್ ಮೇರಿ ಸ್ಕೂಲ್ ಸಂಸ್ಥೆಯಗ ಗುರುಗಳಾದ ಫಾದರ್ ಪ್ರವೀಣ ಜೋಸೆಫ್, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶ ಸೂರ್ಯಕಾಂತ ಮದಾನೆ, ನೋಡಲ್ ಅಧಿಕಾರಿ ಕರಿಬಸಯ್ಯಮಠ ಸೇರಿದಂತೆ ಕರ್ನಾಟಕ ರಾಜ್ಯ ನೌಕರರ ಸಂಘದ ಅಧ್ಯಕ್ಷರಾದ ಬಸವರಾಜ ಬಳೊಂಡಗಿ, ಶಾಲೆಯ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಭಾಗವಹಿಸಿದ್ದರು.

# ಓರ್ವ ಕಾನೂನು ಸಲಹೆಗಾರರ ಹುದ್ದೆಗೆ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.16–ಕಲಬುರಗಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಚೇರಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಓರ್ವ ಕಾನೂನು ಸಲಹೆಗಾರರ ಹುದ್ದೆಗೆ ನೇಮಕ ಮಾಡಿಕೊಳ್ಳಲು ಆಸಕ್ತಿಯುಳ್ಳ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಉಪ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಬಾರ್ ಕೌನ್ಸಿಲ್ ಆಫ್ ಇಂಡಿಯಾ/ಬಾರ್ ಕೌನ್ಸಿಲ್ ಆಫ್ ಕರ್ನಾಟಕದಲಿè(Bar Council of India/Bar Council of Karnata-ka) ಎನ್‌ರೋಲ್‌ಮೆಂಟ್ ಮಾಡಿಸಿರಬೇಕು. ಎಲ್.ಎಲ್.ಬಿ. ಕಾನೂನು ಪದವೀಧರರಾಗಿರಬೇಕು. ವಕೀಲ ವೃತ್ತಿಯಲ್ಲಿ ಸಿವಿಲ್ ಪ್ರಕರಣಗಳಲ್ಲಿ ಅಭ್ಯಾಸ ಮಾಡಿದ ಐದು ವರ್ಷದ ಅನುಭವ ಹೊಂದಿರಬೇಕು. ಕಲಬುರಗಿಯಲ್ಲಿ ವಕೀಲವೃತ್ತಿಯ ಕಚೇರಿ ಇರಬೇಕು. ಮಾಸಿಕ ವೇತನ ರೂ. 30,000 ರೂ. ನೀಡಲಾಗುತ್ತದೆ.

ಅರ್ಹ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಯೊಂದಿಗೆ ಅವಶ್ಯಕ ದಾಖಲೆಗಳೊಂದಿಗೆ (ರೆಸ್ಯೂಮ್) ನ್ನು ಲಗತ್ತಿಸಿ ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ ಕಚೇರಿಯಲ್ಲಿ 2025ರ ಜನವರಿ 29 ರೊಳಗಾಗಿ ಅರ್ಜಿ ಸಲ್ಲಿಸಬೇಕು.

ಅರ್ಹತಾ ಮಾನದಂಡ ಹಾಗೂ ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ www.hkrdb.kar.nic.in ವೆಬ್‌ಸೈಟ್‌ಗೆ ಸಂಪರ್ಕಿಸಲು ಕೋರಲಾಗಿದೆ.

# ರಾಷ್ಟ್ರೀಯ ಯುವ ದಿನಾಚರಣೆ ಹಾಗೂ ಕಾನೂನು ಅರಿವು ನೆರವು ಕಾರ್ಯಕ್ರಮ



ಮಲ್ಲಮ್ಮ ನುಡಿ ವಾರ್ತೆ

ಔರಾದ:– ತಾಲೂಕು ಕಾನೂನು ಸೇವಾ ಸಮಿತಿ ಔರಾದ, ವಕೀಲರ ಸಂಘ ಔರಾದ ಮತ್ತು ಸರಕಾರಿ ಪಾಲಿಟೆಕ್ನಿಕ ಕಾಲೇಜು ಔರಾದ ಇವರ ಸಂಯುಕ್ತಾಶ್ರಯದಲ್ಲಿ ಸರಕಾರಿ ಪಾಲಿಟೆಕ್ನಿಕ ಕಾಲೇಜು ಔರಾದನಲ್ಲಿ ರಾಷ್ಟ್ರೀಯ ಯುವ ದಿನಾಚರಣೆ ಹಾಗೂ ಕಾನೂನು ಅರಿವು ನೆರವು ಕಾರ್ಯಕ್ರಮ ಗುರಯವಾರ ಹಮ್ಮಿಕೊಳ್ಳಲಾಯಿತು.

ಹಾಜಿ ಹುಸೇನಸಾಬ ಯಾದವಾಡ, ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಧೀಶರು ಹಾಗೂ ಅಧ್ಯಕ್ಷರು ತಾಲೂಕು ಕಾನೂನು ಸೇವಾ ಸಮಿತಿ ಔರಾದರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ, ಆಧ್ಯಾತ್ಮಿಕ ಲೋಕದ ಮಹಾನ್ ಚೇತನ, ಭವ್ಯ ಭಾರತದ ಹೆಮ್ಮೆಯ ಪುತ್ರ, ಯುವಕರ ಪಾಲಿನ ಸ್ಫೂರ್ತಿಯ ಚಿಲುಮೆ ಸ್ವಾಮಿ ವಿವೇಕಾನಂದರ ತತ್ವಾದರ್ಶಗಳು ಎಂದೆಂದಿಗೂ ಜೀವಂತ. ಈ ಮಹಾನ್ ವ್ಯಕ್ತಿಯ ಜನ್ಮ ದಿನದ ಸವಿ ನೆನಪಿಗಾಗಿ ನಮ್ಮ ಭಾರತದಲ್ಲಿ ಪ್ರತಿವರ್ಷ ಜನವರಿ 12 ರಂದು ರಾಷ್ಟ್ರೀಯ ಯುವ ದಿನವನ್ನು ಆಚರಿಸಲಾಗುತ್ತದೆ.

ಒಂದು ದೇಶದ ಅಭಿವೃದ್ಧಿಯು ಆ ದೇಶದ ಯುವ ಜನತೆಯ ಮೇಲೆ ಅವಲಂಬಿತವಾಗಿದೆ. ಹೀಗಿರುವಾಗ ಸರಿಯಾದ ದಾರಿಯಲ್ಲಿ ಸಾಗಲು ಯುವ ಜನತೆಯನ್ನು ಪ್ರೇರೇಪಿಸಲು ಸರಿಯಾದ ಮಾರ್ಗದರ್ಶನ ನೀಡುವುದು ಬಹಳ ಮುಖ್ಯವಾಗಿದೆ. ಈ ಉದ್ದೇಶದಿಂದ ಭಾರತ ಸರ್ಕಾರವು 1984 ರಲ್ಲಿ ಸ್ವಾಮಿ ವಿವೇಕಾನಂದರ ಜನ್ಮ ದಿನವನ್ನು ರಾಷ್ಟ್ರೀಯ ಯುವ ದಿನವನ್ನಾಗಿ ಆಚರಿಸಲು ನಿರ್ಧರಿಸಿತು. ಈ ಬಳಿಕ 1985 ರಲ್ಲಿ ಮೊದಲ ಬಾರಿಗೆ ಭಾರತದಲ್ಲಿ ರಾಷ್ಟ್ರೀಯ ಯುವ ದಿನವನ್ನು ಆಚರಿಸಲಾಯಿತು. ಅಂದಿನಿಂದ ಪ್ರತಿವರ್ಷ ಸ್ವಾಮಿ ವಿವೇಕಾನಂದರ ಜನ್ಮದಿನವಾದ ಜನವರಿ 12 ರಂದು ರಾಷ್ಟ್ರೀಯ ಯುವ ದಿನವನ್ನು ಆಚರಿಸುತ್ತಾ ಬರಲಾಗುತ್ತಿದೆ ಎಂದು ಉದ್ಘಾಟನೆಯ ಭಾಷಣವನ್ನು ಮಾಡಿದರು.

ಕಾರ್ಯಕ್ರಮದಲ್ಲಿ ಸಂಜೀವಕುಮಾರ, ಪ್ರಾಂಶುಪಾಲರು ಸರಕಾರಿ ಪಾಲಿಟೆಕ್ನಿಕ ಕಾಲೇಜು ಔರಾದ, ಸಂದೀಪ ಮೇತ್ರೆ, ಅಧ್ಯಕ್ಷರು ತಾಲೂಕು ವಕೀಲರ ಸಂಘ ಔರಾದ, ಬಾಲಾಜಿ ಕಂಬಾರ, ಮುಖ್ಯ ಕಾರ್ಯದರ್ಶಿಗಳು, ತಾಲೂಕು ವಕೀಲರ ಸಂಘ ಔರಾದ ಮತ್ತು ಕಾಲೇಜಿನ ಉಪನ್ಯಾಸಕರು, ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು.

# ನಿಗಮದ ಅಧ್ಯಕ್ಷರ ಪ್ರವಾಸ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.16–ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮದ ಅಧ್ಯಕ್ಷರು ಹಾಗೂ ಗುಲಬರ್ಗಾ ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕರಾದ ಕನೀಜ್ ಫಾತೀಮಾ ಅವರು ಹೈದ್ರಾಬಾದ್‌ದಿಂದ ರಸ್ತೆ ಮೂಲಕ ಜನವರಿ 17 ರಂದು ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಕಲಬುರಗಿಗೆ ಆಗಮಿಸಿ ಸ್ಥಳೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ವಾಸ್ತವ್ಯ ಮಾಡುವರು.

ಜನವರಿ 18 ಹಾಗೂ 19 ರಂದು ಸ್ಥಳೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮತ್ತು ಕುಂದುಕೊರತೆಗಳ ವಿಚಾರಣೆ ನಡೆಸಿ ವಾಸ್ತವ್ಯ ಮಾಡುವರು. ಜನವರಿ 20 ರಂದು ಸೋಮವಾರ ಬೆಳಿಗ್ಗೆ 11 ಗಂಟೆಗೆ ಕಲಬುರಗಿಯಿಂದ ರಸ್ತೆ ಮೂಲಕ ಬೆಳಗಾವಿಗೆ ಪ್ರಯಾಣಿಸಿ ವಾಸ್ತವ್ಯ ಮಾಡುವರು.

# ನುರಿತ ಅನುಭವುಳ್ಳ ಶಿಕ್ಷಕರನ್ನು ಗೌರವಧನದ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.16– 2024–25ನೇ ಸಾಲಿಗೆ ಭಾರತೀಯ ಸೇನೆ/ ಇತರೆ ಯೂನಿಫಾರ್ಮ್ ಸೇವೆಗಳಿಗೆ ಸೇರಬಯಸುವ ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ–1, 2(ಎ), 3(ಎ) ಹಾಗೂ 3(ಬಿ) ಅಭ್ಯರ್ಥಿಗಳಿಗೆ ಆಯ್ಕೆಯ ಪೂರ್ವ ಸಿದ್ಧತೆ ಬಗ್ಗೆ, ವೃತ್ತಿ ಮಾರ್ಗದರ್ಶನ ಹಾಗೂ ತರಬೇತಿಯನ್ನು ಉಚಿತವಾಗಿ ನೀಡಲಾಗುತ್ತಿದೆ.

ಈ ತರಬೇತಿ ನೀಡಲು ಅರ್ಹ ಶಿಕ್ಷಕರ ಅವಶ್ಯಕತೆ ಇರುವ ಹಿನ್ನೆಲೆಯಲ್ಲಿ ನುರಿತ ಅನುಭವುಳ್ಳ ಶಿಕ್ಷಕರನ್ನು ಗೌರವಧನದ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಆಫ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಕಲಬುರಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ತಿಳಿಸಿದ್ದಾರೆ.

ಅರ್ಹ ಅಭ್ಯರ್ಥಿಗಳು ವಿಜ್ಞಾನ ವಿಷಯ, ಮಾನಸಿಕ ಸಾಮರ್ಥ್ಯ (mental ability) ವಿಷಯದಲ್ಲಿ ಹಾಗೂ ಸಾಮಾನ್ಯ ಅಧ್ಯಯನ ವಿಷಯಗಳಲ್ಲಿ ಪರಿಣಿತರಾಗಿರಬೇಕು. ಅರ್ಜಿ ಸಲ್ಲಿಕೆಗೆ 2025ರ ಜನವರಿ 20 ರಂದು ಕೊನೆಯ ದಿನವಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 8095239730ಗೆ (ಪ್ರತಿದಿನ ಬೆಳಿಗ್ಗೆ 10 ರಿಂದ ಸಂಜೆ 5.30 ಗಂಟೆಯವರೆಗೆ ಸಾರ್ವಜನಿಕ ರಜಾ ದಿನಗಳನ್ನು ಹೊರತು ಪಡಿಸಿ) ಸಂಪರ್ಕಿಸಲು ಕೋರಲಾಗಿದೆ.

ಜಾಹೀರಾತಿಗಾಗಿ ಇಂದೆ ಸಂಪರ್ಕಿಸಿ:9449732000

## ಜ.17 ರಂದು ಸಂಸದರ ನೂತನ ಕಚೇರಿ ಉದ್ಘಾಟನೆ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜ.16-09-ಬಳ್ಳಾರಿ ಲೋಕಸಭೆ ಕ್ಷೇತ್ರದ ಸಂಸದರಾದ ಈ.ತುಕಾರಾಂ ಅವರ ನೂತನ ಕಚೇರಿ ಉದ್ಘಾಟನೆ ಕಾರ್ಯಕ್ರಮವು ಜ.17 ರಂದು ಮಧ್ಯಾಹ್ನ 12.15 ಗಂಟೆಗೆ ನಗರದ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಾರ್ವಜನಿಕರು ತಮ್ಮ ಕೆಲಸ ಕಾರ್ಯಗಳ ನಿಮಿತ್ತ ಭೇಟಿಯಾಗಲು ಹಾಗೂ ಕುಂದು-ಕೊರತೆ ಸಲ್ಲಿಸಲು ಅನುಕೂಲವಾಗುವಂತೆ ನಗರದ ರೈಲ್ವೇ ನಿಲ್ದಾಣ ರಸ್ತೆಯ ಜಿಲ್ಲಾಧಿಕಾರಿಗಳ ಕಚೇರಿಯ ಆವರಣದಲ್ಲಿ ನೂತನ ಸಂಸದರ ಕಚೇರಿ ಆರಂಭಿಸಲಾಗುತ್ತಿದೆ ಎಂದು ಸಂಸದರ ಆಪ್ತ ಸಹಾಯಕರು ತಿಳಿಸಿದ್ದಾರೆ.

## ಜ.20 ರಂದು ಜಿಲ್ಲಾ ಮಟ್ಟದ ಸಿರಿಧಾನ್ಯ ನಡಿಗೆ ಮತ್ತು ಜ.21 ರಂದು ಜಿಲ್ಲಾ ಮಟ್ಟದ ಸಾವಯವ ಹಾಗೂ ಸಿರಿಧಾನ್ಯಗಳ ಹಬ್ಬ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜ.16-ಅಂತರಾಷ್ಟ್ರೀಯ ಸಿರಿಧಾನ್ಯ ಮತ್ತು ಸಾವಯವ ಮೇಳದ ಅಂಗವಾಗಿ ಜಿಲ್ಲಾ ಮಟ್ಟದಲ್ಲಿ ಅರಿವು ಮೂಡಿಸಲು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಕೃಷಿ ಇಲಾಖೆ ಸಹಯೋಗದೊಂದಿಗೆ ಜ.20 ರಂದು ಸಿರಿಧಾನ್ಯ ನಡಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಮಟ್ಟದ ಸಾವಯವ ಮತ್ತು ಸಿರಿಧಾನ್ಯಗಳ ಹಬ್ಬ ಕಾರ್ಯಕ್ರಮವನ್ನು ಜ.21 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಡಾ.ರಾಜ್‌ಕುಮಾರ್ ರಸ್ತೆಯ ಮುನಿಸಿಪಾಲ್ ಕಾಲೇಜ್ ಆವರಣದಲ್ಲಿ ಆಯೋಜಿಸಲಾಗಿದೆ.

ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಸವಣ್ಣ ಮೂರ್ತಿಗೆ ಅಪಮಾನ ಮಾಡಿದವರಿಗೆ ಕಠಿಣ ಶಿಕ್ಷೆಯಾಗಲಿ ಸುರೇಶ ಸಜ್ಜನ್

ಮಲ್ಲಮ್ಮ ನುಡಿ ವಾರ್ತೆ

ಶಹಾಪುರ :- ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ದಾಡಗಿ ಕ್ರಾಸ್ ಬಳಿ ಜಗಜ್ಯೋತಿ ಬಸವೇಶ್ವರ ಪ್ರತಿಮೆಗೆ ಅಪಮಾನ ಮಾಡಿರುವ ಕಿಡಿ ಗಳನ್ನು ಕೂಡಲೇ ಬಂಧಿಸಿ ಗಡಿಪಾರು ಮಾಡಬೇಕು ಎಂದು ಸುರಪುರ ತಾಲೂಕು ವೀರಶೈವ-ಲಿಂಗಾಯತ ಸಮಾಜದ ತಾಲೂಕಾಧ್ಯಕ್ಷ ಡಾ.ಸುರೇಶ ಸಜ್ಜನ್ ಅವರು ಹೇಳಿದರು.



ಕೆಲವು ಕಿಡಿಗೇಡಿಗಳು ಬಸವೇಶ್ವರ ಕೈ ಮುರಿದು ಅವಮಾನಿಸಿದರಲ್ಲದೆ ಧ್ವಜದ ಕಂಬ ಕಿತ್ತೆಸೆಯಲು ಮುಂದಾಗಿದ್ದು ಈಗಾಗಲೇ ಭಾಲ್ಕಿ ತಾಲೂಕಿನ ಆ ಗ್ರಾಮದ ಗ್ರಾಮಸ್ಥರು ಹಾಗೂ ವೀರಶೈವ ಸಮಾಜದ ಮುಖಂಡರು, ಯುವಕರು,ಬಸವ ಅನುಯಾಯಿಗಳು ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟಿಸಿದ್ದಾರೆ ಕೂಡಲೇ ಕಿಡಿಗೇಡಿಗಳನ್ನು ಶೀಘ್ರದಲ್ಲಿಯೇ ಬಂಧಿಸಿ ಕಠಿಣ ಶಿಕ್ಷೆಗೆ ಒಳಪಡಿಸಿ ಅವರನ್ನು ರಾಜ್ಯದಿಂದಲೇ ಗಡಿಪಾರು ಮಾಡಬೇಕು ಒಂದು ವೇಳೆ ಆರೋಪಿಗಳನ್ನು ಬಂದಿಸದಿದ್ದಲ್ಲಿ ತಾಲೂಕು ವೀರಶೈವ-ಲಿಂಗಾಯತ ಸಮಾಜ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದ್ದಾರೆ.

## ಮಟಕಾ, ಜೂಜಾಟ: 15 ಜನರ ಬಂಧನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.16-ಸಬ್-ಅರ್ಬನ್ ಪೊಲಿಸ್ ಠಾಣೆ ವ್ಯಾಪ್ತಿಯ ಬೇಲೂರ ಗ್ರಾಮದ ಯಂಕಪ್ಪ ವಾಲಿಕಾರ ಅವರ ಕಿರಾಣಿ ಅಂಗಡಿ ಹಿಂದುಗಡೆಯ ಖಾಲಿ ಜಾಗದಲ್ಲಿ, ಬೇಲೂರ್ ತಾಂಡಾದ ರಸ್ತೆಯಲ್ಲಿರುವ ಕಿರಣ್ ಸ್ಟೋನ್ ಕ್ರಶರ್ ಮುಂದುಗಡೆಯ ಖಾಲಿ ಜಾಗದಲ್ಲಿ ಜೂಜಾಟವಾಡುತ್ತಿದ್ದ 14 ಜನರನ್ನು ಮತ್ತು ಚೌಕ್ ಪೊಲೀಸ್ ಠಾಣೆ ವ್ಯಾಪ್ತಿಯ ರಾಜೀವಗಾಂಧಿ ನಗರದ ಕೆಇಬಿ ಖಜಾನೆ ಹತ್ತಿರದ ಸಾರ್ವಜನಿಕ ರಸ್ತೆ ಮೇಲೆ ಮಟಕಾ ನಂಬರ್ ಬರೆದುಕೊಳ್ಳುತ್ತಿದ್ದ ಓರ್ವ ವ್ಯಕ್ತಿ ಸೇರಿ 15 ಜನರನ್ನು ಸಿಸಿಬಿ ಘಟಕದ ಪೊಲೀಸರು ಬಂಧಿಸಿದ್ದಾರೆ.

# ಪ್ರಕೃತಿಗೆ ಪೂರಕವಾಗಿ ಬದುಕಲು ಕರೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ16: ಪ್ರಕೃತಿಗೆ ಹೆಚ್ಚಿನ ಮಹತ್ವವನ್ನು ನೀಡಿ, ಅದಕ್ಕೆ ಪೂರಕವಾಗಿ ಬದುಕುವ ಮೂಲಕ ಮಾಲಿನ್ಯವನ್ನು ತಡೆಗಟ್ಟುವಲ್ಲಿ ಹೆಚ್ಚಿನ ಪಾತ್ರವನ್ನು ವಹಿಸಬೇಕೆಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಂ ತಿಳಿಸಿದರು.

ತೋವಿವಿಯ ಉದ್ಯಾನಗಿರಿಯಲ್ಲಿರುವ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೋಸೈಟಿ ಹಾಗೂ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ ಸಹಯೋಗದಲ್ಲಿ ಹಮ್ಮಿಕೊಂಡ ಹವಾಮಾನ ಬದಲಾವಣೆ ಎಂಬ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು ವೈಜ್ಞಾನಿಕ ಆಲೋಚಣೆಗಳೊಂದಿಗೆ ಪರಿಸರ ಸಂರಕ್ಷಣೆ ಮಾಡಲು ಮುಂದಾಗಬೇಕು ಎಂದರು.

ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಯ ಮುಖ್ಯಸ್ಥರಾದ ಲತಾ ಎಮ್. ಹೆಚ್ ಮಾತನಾಡಿ ಹವಾಮಾನ ಬದಲಾವಣೆ, ಅದರ ಹಿಂದಿನ ವಿಜ್ಞಾನ ಪರಿಣಾಮಗಳು ಮತ್ತು ಅದರ ಜಾಗತಿಕ ಸವಾಲುಗಳ ಬಗ್ಗೆ ತಿಳಿಸಿದರೆ, ತೋವಿವಿಯ ಪ್ರಾಧ್ಯಾಪಕ ಡಾ.ವಸಂತ ಗಾಣಿಗೇರ ಹವಾಮಾನ ಬದಲಾವಣೆಯಿಂದ ತೋಟಗಾರಿಕೆ ಬೆಳೆಗಳಲ್ಲಿ ಆಗುವ ಬದಲಾವಣೆಯ ಬಗ್ಗೆ ಹಾಗೂ ಇಎಂಪಿಆರ್‌ಐ ಸಂಸ್ಥೆಯ ಹಿರಿಯ ಸಮಾಲೋಚಕ ಡಾ.ಸರಿತಾ ಬೋಯಾ ಹವಾಮಾನ ಬದಲಾವಣೆಯ ಪರಿಣಾಮಗಳನ್ನು ಪರಿಹರಿಸಲು ರೂಪಿಸಿರುವ ಕ್ರೀಯಾ ಯೋಜನೆಯ ಬಗ್ಗೆ ತಿಳಿಸಿದರು.

ತರಬೇತಿ ಕಾರ್ಯಾಗಾರದಲ್ಲಿ ಹೊರಾಂಗಣ ಮತ್ತು ಒಳಾಂಗಣ ವಿಜ್ಞಾನ ಪ್ರದರ್ಶಿಕೆಗಳ ಪ್ರಾತ್ಯಕ್ಷಿಕೆಯನ್ನು ಆಯೋಜಿಸಲಾಯಿತು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಸಂತೋಷಗೌಡ ಪಾಟೀಲ್, ಉಪ ವ್ಯವಸ್ಥಾಪಕರು, ವೆಸ್ಟ್ ಕೋಸ್ಟ್ ಕಾಗದ ಕಾರ್ಖಾನೆ ರವರು ಮಾತನಾಡಿ ತೋಟಗಾರಿಕೆ ಮತ್ತು ಕೃಷಿ ಕ್ಷೇತ್ರದಲ್ಲಿನ ಕಾರ್ಬನ್ ಕ್ರೆಡಿಟ್ ಸ್ಕೋಲ್‌ನ ವಿವರವಾದ ಮಾಹಿತಿಯನ್ನು ತಿಳಿಸಿದರು.ಅದರಂತೆ, ಕಾರ್ಯಕ್ರಮದ ಇನ್ನೋರ್ವ ಸಂಪನ್ಮೂಲ ವ್ಯಕ್ತಿಗಳಾದ ಶೇಖರ ಮನೋಜಿ ರವರು ಮಾತನಾಡಿ, ಬೆಳೆಗಳು ಮತ್ತು ಜಾನುವಾರುಗಳನ್ನು ಉಳಿಸಿಕೊಳ್ಳಲು ಮತ್ತು ಸಮಗ್ರ ಕೃಷಿಯ ಮೂಲಕ ಈ ಅಸ್ಥಿರ ವಾತಾವರಣದಲ್ಲಿ ಉತ್ತಮ ಇಳುವರಿಯನ್ನು ಪಡೆಯಲು ಕೃಷಿಯ ಉಪಯೋಗಿಸುವ ಕಾರ್ಯವಿಧಾನಗಳು ಮತ್ತು ಅಭ್ಯಾಸಗಳ ಬಗ್ಗೆ ವಿವರವಾಗಿ ತಿಳಿಸಿದರು.

ಮುಂದುವರೆದು,ಕಾರ್ಯಕ್ರಮದ ಭಾಗವಾಗಿ ಎಲ್ಲ ಅಧಿಕಾರಿಗಳಿಗೆ ಹೊರಾಂಗಣ ಮತ್ತು ಒಳಾಂಗಣ ವಿಜ್ಞಾನ ಪ್ರದರ್ಶಿಕೆಗಳ ಪ್ರಾತ್ಯಕ್ಷಿಕೆಯನ್ನು ಆಯೋಜಿಸಲಾಯಿತು.

ಅದರಂತೆ,ಸದರಿ ಕಾರ್ಯಕ್ರಮವನ್ನು ಕುಮಾರಿ. ರುಚಿತಾಶ್ರೀ ಎ.ಎಮ್. ನಿರೂಪಿಸಿದರು ಹಾಗೂ ಶ್ರೀಮತಿ ಜಗದಂಬಾ ಬಿ ಆರ್. ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಬೆಂಗಳೂರು ರವರು ವಂದಿಸಿದರು.

ಕಾರ್ಯಕ್ರಮದಲ್ಲಿ ಈರಣ್ಣಾ ಬುಳ್ಳಾ, ಕ್ಯೂರೇಟರ್, ಆಸೀಫ ಬಾಗವಾನ, ತಾಂತ್ರಿಕ ಸಹಾಯಕರು, ಗಂಗನಗೌಡ ಪಾಟೀಲ, ದ್ವಿ.ದ.ಸಹಾಯಕರು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ಹಾಗೂ ಜಿಲ್ಲೆಯ ವಿವಿಧ ಇಲಾಖೆಯ ಉನ್ನತ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳಲು ಆಗ್ರಹ

ಮಲ್ಲಮ್ಮ ನುಡಿ ವಾರ್ತೆ

ಬೀದರ: ಭಾಲ್ಕಿ ತಾಲೂಕಿನ ದಾಡಗಿ ಕ್ರಾಸ್ ಹತ್ತಿರದ ಬಸವೇಶ್ವರ ಮೂರ್ತಿಗೆ ಕೆಲ ಕಿಡಿಗೇಡಿಗಳು ವಿರೂಪಗೊಳಿಸಿದ್ದಾರೆ. ವಿಶ್ವಗುರು ಬಸವಣ್ಣನವರು ಯಾವುದೇ ಜಾತಿಮತಕ್ಕೆ ಸೀಮಿತವಾದವರಲ್ಲ ಮನುಕುಲೋದ್ಧಾರಕರು. ಈ ಕೃತ್ಯವೆಸಗಿದ ಕ್ರಿಮಿನಲ್‌ಗಳನ್ನು ತತಕ್ಷಣ ಪೋಲಿಸ್ ಇಲಾಖೆ ಬಂಧಿಸಿ ಇವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಭಾರತೀಯ ಬಸವ ಬಳಗ ಆಗ್ರಹಿಸುತ್ತದೆ.

ಜಿಲ್ಲೆಯಲ್ಲಿ ಇಂಥಾ ಘಟನೆಗಳು ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕು. ಇಲ್ಲವಾದಲ್ಲಿ ಸರಕಾರದ ವಿರುದ್ಧ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ ಎಂದು ಭಾರತೀಯ ಬಸವ ಬಳಗದ ರಾಜ್ಯಧ್ಯಕ್ಷರಾದ ಬಾಬುವಾಲಿ ಎಚ್ಚರಿಸಿದ್ದಾರೆ.

## ನೌಬಾದ ಚುನಾವಣೆಗೆ ಪೋಲಿಸ ಪಾಟೀಲ ಪೇನಾಲಿಗೆ ಭರ್ಜರಿ ಜಯ.

ಮಲ್ಲಮ್ಮ ನುಡಿ ವಾರ್ತೆ

ಬೀದರ:ದಿನಾಂಕ:12-01-2025 ರಂದು ನಡೆದಿರುವ ನೌಬಾದ ಪಿ.ಕೆ.ಪಿ.ಎಸ್, ಚುನಾವಣೆಯಲ್ಲಿ ಶ್ರೀಮತಿ ಜಗದೇವಿ ಗಂಡ ಶಾಮರಾವ ಪೊಲೀಸ ಪಾಟೀಲ ಚೌಳಿ, ಅವರ ಪೇನಾಲಿನಲ್ಲಿ ಈ ಕೆಳಕಂಡ ಅಭ್ಯರ್ಥಿಗಳು ಸ್ಪರ್ಧಿಸಿ 100% ಶೇಕಡಾ ಪ್ರತಿಶತ ಭರ್ಜರಿ ಜಯ ಗಳಿಸಿರುತ್ತಾರೆ. ಚನ್ನಬಸಪ್ಪಾ ಹೇಗೆ, ಜಗದೇವಿ ಶಾಮರಾವ ಪೋಲಿಸ ಪಾಟೀಲ, ಸೋಮನಾಥ ಬೊರಂಚಿ, ಚೆನ್ನಪಾ ಕತ್ತೆ, ಸುಭಾಷ ಮಾಣಿಕಪ್ಪ, ಮಲ್ಲಯ್ಯ ಬಸಯ್ಯ, ಸರಸ್ವತಿ ಜೊಂಡಿ, ಪ್ರೀತಮ್ಮಾ ಮಾಳಪ್ಪಾ, ಭೀಮಣ್ಣಾ ತುಕಾರಾಮ , ಪ್ರವೀಣಕುಮಾರ ಬಾಬುರಾವ, ಮಹೇಶ ಬಸವರಾಜ, ಸೂರ್ಯಕಾಂತ ಚಂದ್ರಪ್ಪ.

ಈ ಎಲ್ಲಾ ಅಭ್ಯರ್ಥಿಗಳು ಸಂಪೂರ್ಣ ಜಯಬೇರಿಗೊಳಸಿರುತ್ತಾರೆ. ಈ ಜಯ ಸಾಧಿಸಲು ಸಮಸ್ತ ಎಲ್ಲಾ ಅಲಿಯಾಬಾದ. ಚೊಂಡಿ, ಚೌವಳಿ, ನೌಬಾದ, ಗ್ರಾಮದ ಎಲ್ಲಾ ಪಿಕೆಪಿಎಸ್ ಮತದಾರರು ಪಾಟೀಲ ಪೇನಾಲಿಗೆ ಭರ್ಜರಿ ಜಯ ತಂದಿರುತ್ತಾರೆ. ಈ ಸಂದರ್ಭದಲ್ಲಿ ಶಶಿಕುಮಾರ ಎಸ್.ಪೊಲೀಸ ಪಾಟೀಲ ರವರು ಈ ಪೆನಾಲನ ಜಯ ನಮ್ಮ ಜಯವಲ್ಲಾ ರೈತರ ಜಯವಾಗಿದೆ ಎಂದು ನೋಡಿದರು. ಮುಂಬರುವ ದಿನಗಳಲ್ಲಿ ರೈತರ ಏಳಿಗೆಗಾಗಿ ಒಳ್ಳೆ ರೀತಿಯ ಕಾರ್ಯ ಮಾಡುವುದೆಂದು ಭರವಸೆ ನೀಡಿದ್ದರು. ಈ ಸಂದರ್ಭದಲ್ಲಿ ಎಲ್ಲಾ ಕಾರ್ಯಕರ್ತರು ಉಪಸ್ಥಿತರಿದ್ದರು ಎಂದು ಪಾಟೀಲ ರವರ ಆಪ್ತ ಸಹಾಯಕ ಸುನೀಲ ಬಿ.ಕೆ. ರವರು ತಿಳಿಸಿದ್ದರು.

## ಹತ್ತಿಗೂಡುರು ಗ್ರಾ. ಪಂ. ಅವಿಸ್ವಾಸ ಮಂಡನೆ ಸಭೆ ವಿಫಲ






ಮಲ್ಲಮ್ಮ ನುಡಿ ವಾರ್ತೆ

ಶಹಾಪುರ:ತಾಲೂಕಿನ ಹತ್ತಿಗೂಡುರು ಗ್ರಾಮ ಪಂಚಾಯತಿ ಅಧ್ಯಕ್ಷ ರ ವಿರುದ್ಧ ನಡೆದ ಅವಿಶ್ವಾಸ ಮಂಡನೆ ಸಭೆ ಗುರುವಾರ ವಿಫಲವಾಗಿದೆ. ಅಧ್ಯಕ್ಷರ ಬದಲಾವಣೆ ಕುರಿತು ನಿರ್ಣಯ ಕೈಗೊಂಡಿರುವ ಸದಸ್ಯರು ಅವಿಶ್ವಾಸ ಮಂಡನೆ ವೇಳೆ ಪಂಚಾಯಿತಿಗೆ ಯಾರೊಬ್ಬ ಸದಸ್ಯರೂ ಆಗಮಿಸಲಿಲ್ಲ.

ಒಟ್ಟು 13 ಜನ ಗ್ರಾಮ ಪಂಚಾಯತಿ ಸದಸ್ಯರ ಪೈಕಿ, 9 ಜನ ಗ್ರಾ. ಪಂ. ಸದಸ್ಯರನ್ನು ಕರೆತಂದು ಸಭೆಯಲ್ಲಿ ಅವಿಶ್ವಾಸ ಮಂಡನೆ ಮಾಡಬೇಕಿತ್ತು. ಆದರೇ ಬೆಳಗ್ಗೆ 11 ಗಂಟೆಯಿಂದ 12 ಗಂಟೆವರೆಗೆ ಪಂಚಾಯತಿ ಸಭಾಂಗಣದಲ್ಲಿ ಚುನಾವಣಾ ಅಧಿಕಾರಿಗಳು ಕಾದು ಕುಳಿತರು. ಗ್ರಾಮ ಪಂಚಾಯತ್ ಸದಸ್ಯರು ಯಾರೂ ಬಾರದ ಕಾರಣ ಸಭೆಯನ್ನು ರದ್ದುಗೊಳಿಸಿ, ಹಾಲಿ ಗ್ರಾಮ ಪಂಚಾಯತಿ ಅಧ್ಯಕ್ಷ ಷಣ್ಮುಖಪ್ಪ ಚಂದ್ರಾಮಪ್ಪ ಹೊಸಮನಿ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಮತಿ ರೇಣುಕಾ ಗಂಡ ಭೀಮಪ್ಪ ಭಂಕೋರ, ಅವರನ್ನು ಮುಂದುವರಿಸುವಂತೆ ಯಾದಗಿರಿ ಜಿಲ್ಲಾ ಸಹಾಯಕ ಆಯುಕ್ತರಾದ ಹಂಪಣ್ಣ ಸಜ್ಜನ್ ಸೂಚಿಸಿದರು.

ಪಂಚಾಯತಿಯಲ್ಲಿ ಅವಿಶ್ವಾಸ ಸೂಚನೆ ಸಭೆ ರದ್ದಾದ ವಿಷಯ ತಿಳಿಯುತಿದ್ದಂತೆ ಗ್ರಾ. ಪಂ. ಸದಸ್ಯರು ಹಾಹೂ ಮುಖಂಡರು ಮುಂದುವರೆದ ಅಧ್ಯಕ್ಷರಿಗೆ ಶಾಲು ಹಾಗೂ ಹೂವಿನ ಹಾರ ಹಾಕಿ ಸಂತಸ ಹಂಚಿಕೊಂಡರು.

ಈ ವೇಳೆ ಎಎಸ್ ಐ, ಹೊನ್ನಪ್ಪ ಭಜಂತ್ರಿ, ರವಿ ಪವಾರ್, ಹೆಚ್ ಸಿ. ಗೋಪಾಲ್, ಮಹಿಳಾ ಪೆದೆ, ರೇಣುಕಾ ಸೇರಿದಂತೆ ಮುಖಂಡರಾದ ಭೀಮರಾಯ ಪೂಜಾರಿ, ಮಲ್ಲಪ್ಪ ತಳಿಗೇರಿ, ಶಂಭುಲಿಂಗ ಮ್ಯಾಗೇರಿ, ಚಂದ್ರಗಿರಿ ಪಾದ್ರಿ, ಮಲ್ಲಯ್ಯ ಸಾಲಿ, ರಾಜಪ್ಪ ಪಾದ್ರಿ, ಬಾಗಪ್ಪ ಕ್ಯಾತ್ನಾಳ, ಜಯಪ್ಪ ದಿವಾಳಗುಡ್ಡ, ಶರಣಬಸವ, ಭೀಮರಾಯ ಹೊಸಮನಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಸಿಂಧನೂರು, ಲಿಂಗಸೂಗೂರು, ರಾಯಚೂರಿನಲ್ಲಿ ಜ.21ರಂದು ಕ್ರೀಡಾ ವಸತಿ ಶಾಲೆಗೆ ಆಯ್ಕೆ ಪ್ರಕ್ರಿಯೆ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಜ.16-ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ನಡೆಸಲ್ಪಡುತ್ತಿರುವ ಕ್ರೀಡಾಶಾಲೆಗೆ 2025-26ನೇ ಸಾಲಿನ ಪ್ರವೇಶಕ್ಕೆ ಲಿಂಗಸೂಗೂರು, ಸಿಂಧನೂರು ಹಾಗೂ ರಾಯಚೂರು ತಾಲೂಕಿನಲ್ಲಿ ಜ.21ರಂದು ಆಯ್ಕೆ ಪ್ರಕ್ರಿಯೆ ನಡೆಯಲಿದ್ದು, ಆಸಕ್ತರು ಭಾಗವಹಿಸಿಬಹುದಾಗಿದೆ.

ಲಿಂಗಸೂಗೂರು ತಾಲ್ಲೂಕಿನ ಆಯ್ಕೆ ಪ್ರಕ್ರಿಯೆವು ಲಿಂಗಸೂರ ತಾಲೂಕು ಕ್ರೀಡಾಂಗಣದಲ್ಲಿ ನಡೆಯಲಿದ್ದು,ಆಸಕ್ತ ಕ್ರೀಡಾಪಟುಗಳು ಬೆಳಿಗ್ಗೆ 10 ಗಂಟೆಗೆ ಮೇಟಿ ಮೊ ಸಂ.9036659645,9480659645, ಸುನೀಲ್ ಮೊ ಸಂ.8971828923, ಜಿತೇಂದ್ರ ಕುಮಾರ್ ಗುತ್ತೆದಾರ್ ಮೊ ನಂ.9901402602, ಸಂಗಪ್ಪ ಅಡವಿಭಾವಿ ಮೊ ಸಂ.9731946223 ಅವರಿಗೆ ಸಂಪರ್ಕಿಸಬಹುದಾಗಿದೆ.

ಸಿಂಧನೂರು ತಾಲ್ಲೂಕಿನ ಆಯ್ಕೆ ಪ್ರಕ್ರಿಯೆವು ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು ಆರ್‌ಎಮ್‌ಎಸ್‌ಎ ಶಾಲೆ ಎದುರುಗಡೆ ನಡೆಯಲಿದ್ದು,ಆಸಕ್ತ ಕ್ರೀಡಾಪಟುಗಳು ಸೋಮಲಿಂಗಪ್ಪ ಮೊ.ಸಂಖ್ಯೆ 9448418871, ಕಳಸಪ್ಪ ಮೊ ಸಂ. 8496987237 ಅವರಿಗೆ ಸಂಪರ್ಕಿಸಬಹುದಾಗಿದೆ.ರಾಯಚೂರು ತಾಲ್ಲೂಕಿನ ಆಯ್ಕೆ ಪ್ರಕ್ರಿಯೆವು ನಗರದ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣ ನಡೆಯಲಿದ್ದು, ಆಸಕ್ತ ಕ್ರೀಡಾಪಟುಗಳು ಚಂದ್ರಶೇಖರ್ ಮೊ ಸಂ:9886551214 ಇವರಲ್ಲಿ ವರದಿ ಮಾಡಿಕೊಳ್ಳಲು ಸೂಚಿಸಲಾಗಿದೆ.

ಕಿರಿಯರ ವಿಭಾಗದ ಕ್ರೀಡಾ ವಸತಿ ಶಾಲೆಗಳ ಆಯ್ಕೆಯನ್ನು ಪ್ರಸ್ತುತ 7ನೇ ತರಗತಿ ಅಭ್ಯಾಸ ಮಾಡುತ್ತಿರುವ ಬಾಲಕ ಬಾಲಕಿಯರಿಗಾಗಿ ಅಥ್ಲೆಟಿಕ್ಸ್, ಬಾಸ್ಕೆಟ್‌ಬಾಲ್, ಫುಟ್‌ಬಾಲ್, ಜಿಮ್ನಾಸ್ಟಿಕ್, ಹಾಕಿ, ಜುಡೋ, ವಾಲಿಬಾಲ್ ಮತ್ತು ಕುಸ್ತಿ ವಿಭಾಗಗಳಲ್ಲಿ ಆಯ್ಕೆಯನ್ನು ನಡೆಸಲಾಗುವುದು. ಆಯ್ಕೆಯಲ್ಲಿ ಭಾಗವಹಿಸುವವರು. 01-06-2025 ರಂದು 14 ವರ್ಷದೊಳಗಿರಬೇಕು ಮತ್ತು 8ನೇ ತರಗತಿಗೆ ಪ್ರವೇಶ ಪಡೆಯಲು ಅರ್ಹರಾಗಿರಬೇಕು. ಮತ್ತು ತಾವು ವ್ಯಾಸಾಂಗ ಮಾಡುತ್ತಿರುವ ಶಾಲಾ ಮುಖ್ಯಸ್ಥರಿಂದ ಜನ್ಮ ದಿನಾಂಕ ಪ್ರಮಾಣಪತ್ರ ಹಾಗೂ ವ್ಯಾಸಂಗ ಮಾಡುತ್ತಿರುವ ತರಗತಿಯ ವಿವರಗಳನ್ನೊಳಗೊಂಡ ದೃಢೀಕರಣ ಪತ್ರವನ್ನು ಆಯ್ಕೆ ದಿನದಂದು ಕಡ್ಡಾಯ ತರಬೇಕು.

ಹಿರಿಯರ ವಿಭಾಗದ ಕ್ರೀಡಾ ವಸತಿ ಶಾಲೆಗಳ ಆಯ್ಕೆಯಲ್ಲಿ ಭಾಗವಹಿಸುವ ಕ್ರೀಡಾಪಟುಗಳು 01-06-2025 ರಂದು 18 ವರ್ಷದೊಳಗಿದ್ದು, ಪ್ರಥಮ ಪಿ.ಯು.ಸಿ ಪ್ರವೇಶ ಪಡೆಯಲು ಅರ್ಹರಿರಬೇಕು. ಆಯ್ಕೆಯನ್ನು ಪ್ರಸ್ತುತ 10ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಬಾಲಕ ಬಾಲಕಿಯರಿಗಾಗಿ ಅಥ್ಲೆಟಿಕ್ಸ್, ಬಾಸ್ಕೆಟ್‌ಬಾಲ್, ಫುಟ್‌ಬಾಲ್, ಜಿಮ್ನಾಸ್ಟಿಕ್, ಹಾಕಿ, ಜುಡೋ, ವಾಲಿಬಾಲ್ ಮತ್ತು ಕುಸ್ತಿ ಸ್ಪರ್ಧೆಗಳ ಆಯ್ಕೆ ನಡೆಸಲಾಗುವುದು.

ಅರ್ಹ ಕ್ರೀಡಾಪಟುಗಳು ನಿಗದಿತ ನಮೂನೆಯ ಅರ್ಜಿಗಳನ್ನು ಈ ಕಚೇರಿಯಿಂದ ಪಡೆದು ಭರ್ತಿ ಮಾಡಿ ಸಲ್ಲಿಸಬಹುದಾಗಿದೆ. ತಾಲ್ಲೂಕು ಮಟ್ಟದ ಆಯ್ಕೆಯಲ್ಲಿ ಪಾಲ್ಗೊಳ್ಳುವ ಆಸಕ್ತ ಕ್ರೀಡಾಪಟುಗಳು ಆಯಾ ದಿನಾಂಕಗಳಂದು ಬೆಳಿಗ್ಗೆ 10 ಗಂಟೆಗೆ ಆಯ್ಕೆ ನಡೆಯುವ ಸ್ಥಳಗಳಲ್ಲಿ ವರದಿ ಮಾಡಿಕೊಳ್ಳಲು ಸೂಚಿಸಲಾಗಿದೆ. ಆಯ್ಕೆಯಾದ ಕ್ರೀಡಾಪಟುಗಳಿಗೆ 5ನೇ ತರಗತಿಯಿಂದ 10ನೇ ತರಗತಿಯವರೆಗೆ (ಕ್ರೀಡಾ ಕೌಶಲ್ಯ ನೀಡಿದಲ್ಲಿ) ಸರ್ಕಾರದ ವತಿಯಿಂದ ಉಚಿತ ವಸತಿ, ಪೌಷ್ಠಿಕ ಆಹಾರ, ತಜ್ಞತರಬೇತುದಾರರಿಂದ ಕ್ರೀಡಾ ತರಬೇತಿ, ಸಮವಸ್ತ್ರ ಮುಂತಾದವುಗಳನ್ನು ಒದಗಿಸಲಾಗುವುದು. ಆಯ್ಕೆಯಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಯಾವುದೇ ವಿಧವಾದ ಭತ್ಯೆ ನೀಡಲಾಗುವುದಿಲ್ಲ. ಹೆಚ್ಚಿನ ವಿವರಗಳಿಗೆ ಸಹಾಯಕ ನಿರ್ದೇಶಕರ ಕಚೇರಿ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣ ರಾಯಚೂರು ಇಲ್ಲಿ ಕಚೇರಿ ಅವಧಿಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗೋಲ್ಡನ ವ್ಯಾಲಿ ಶಾಲೆಯಲ್ಲಿ ನವೋದಯ ಪರೀಕ್ಷೆಗೆ ಮಕ್ಕಳ ಪೂರ್ವ ತಯಾರಿ

ಮಲ್ಲಮ್ಮ ನುಡಿ ವಾರ್ತೆ

ಕಮಲನಗರ: ಜ. 18 ರಂದು ನಡೆಯುವ ನವೋದಯ ವಿದ್ಯಾಲಯ ಸಮಿತಿಯು ನಡೆಸುವ ಪರೀಕ್ಷೆಗೆ ಪಟ್ಟಣದ ದಿ ಗೋಲ್ಡನ ವ್ಯಾಲಿ ಇಂಟರ್ನ್ಯಾಷನಲ ಶಾಲೆಯಲ್ಲಿ ಗುರುವಾರ ಮಕ್ಕಳಿಗೆ ಪೂರ್ವ ತಯಾರಿ ಪರೀಕ್ಷೆ ಭರದಿಂದ ಸಾಗುತ್ತಿದೆ.



ಈ ಸಂದರ್ಭದಲ್ಲಿ ಶಾಲೆಯ ಮುಖ್ಯಗುರು ಶರಣು ಸೋಲಾಪುರೆ ಅವರ ಮಾತನಾಡಿ, ಪ್ರತಿ ವರ್ಷ ನವೋದಯ ವಿದ್ಯಾಲಯ ಸಮಿತಿಯು ನಡೆಸುವ ಈ ಪರೀಕ್ಷೆಯು ವಿದ್ಯಾರ್ಥಿಗಳಿಗೆ ಪರೀಕ್ಷಾ ಮಾದರಿ ಮತ್ತು ನಿಜವಾದ ಆಯ್ಕೆ ಪರೀಕ್ಷೆಯ ಪಠ್ಯಕ್ರಮದೊಂದಿಗೆ ಪರಿಚಿತರಾಗಲು ಸಹಾಯ ಮಾಡುತ್ತದೆ. ಅಣಕು ಪರೀಕ್ಷೆಯು ಗಣಿತ, ಇಂಗ್ಲಿಷ್, ಮಾನಸಿಕ ಸಾಮರ್ಥ್ಯ ಮತ್ತು ಪ್ರಾದೇಶಿಕ ಭಾಷೆಯಂತಹ ವಿಷಯಗಳನ್ನು ಒಳಗೊಂಡಿದೆ, ನಮ್ಮ ಶಾಲೆಯಲ್ಲಿ ಮಕ್ಕಳಿಗೆ ಈ ಪರೀಕ್ಷೆಗೆ 1 ವರ್ಷದಿಂದ ವಿಶೇಷ ತರಬೇತಿ ನೀಡಲಾಗುವುದು. ಹಾಗೂ ಪದೆ ಪದೆ ಈ ಪರೀಕ್ಷೆಯನ್ನು ತೆಗೆದುಕೊಂಡು ಮಕ್ಕಳಿಗೆ ಪರೀಕ್ಷೆ ಭಯ ಹೋಗಲಾಡಿಸಿ ಒಳ್ಳೆಯ ಅಂಕ ಪಡೆದುಕೊಳ್ಳಲು ಸಹಾಯ ವಾಗುತ್ತದೆ ಎಂದರು.

ಕಮಲನಗರ ವಲಯದಲ್ಲಿ ನವೋದಯ ತರಬೇತಿ ನಮ್ಮ ಶಾಲೆಯಲ್ಲಿ ಮಾತ್ರ ನೀಡಲಾಗುತ್ತಿದೆ. ಈ ವರ್ಷ ಸುಮಾರು 80 ಕ್ಕಿಂತ ಹೆಚ್ಚು ಮಕ್ಕಳು ಈ ಬಾರಿ ಪರೀಕ್ಷೆ ಬರಿಯಲಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶಾಲೆಯ ಸಿಬ್ಬಂದಿಗಳಾದ ಸಂಜುವಕುಮಾರ ಮಾನೆ , ದಯಸಾಗಾರ ಶಿಂದೇ , ಬಾಲಾಜಿ ಮಾನೆ, ಜಯಕುಮಾರ, ಇಂಬ್ರಾನ, ಲೋಕೇಶ ಸರ್ ಸೇರಿದಂತೆ ಅನೇಕರು ಇದ್ದರು.

"ಮಕ್ಕಳು ಯಾವದೇ ಭಯ ಇಲ್ಲದೆ ನಿರ್ವಭಯವಾಗಿ ಪರೀಕ್ಷೆ ಬರೆಯಿರಿ, ನಿಮ್ಮ ಸಾಮರ್ಥ್ಯದ ಮೇಲೆ ವಿಶ್ವಾಸ ಇಟ್ಟು ಉತ್ತಮ ರೀತಿಯಲ್ಲಿ ಪರೀಕ್ಷೆ ಪೂರ್ಣಗೊಳಿಸಿ,

ನಮ್ಮ ಸಂಸ್ಥೆಯಿಂದ ಸುಮಾರು 80 ವಿದ್ಯಾರ್ಥಿಗಳು ನವೋದಯ ಪರೀಕ್ಷೆ ಹಾಜರಾಗುತ್ತಿದ್ದಾರೆ ಎಲ್ಲರಿಗೂ ಶುಭಾಶಯ ಕೋರುತ್ತೇನೆ."

**- ಶ್ರೀಮತಿ ಜಯಶ್ರೀ ಪ್ರವೀಣ ಬಿರಾದಾರ,**
**ಅಧ್ಯಕ್ಷರು, ದಿ.ಗೋ.ವ್ಯಾ.ಇ.ಪ. ಶಾಲೆ ಕಮಲನಗರ.**




ಸುರಪುರ ತಾಲೂಕಿನಲ್ಲಿ ಮೆಚ್ಚುಗೆ ಗಳಿಸಿದ ಮಲ್ಲಮ್ಮ ನುಡಿ ಪತ್ರಿಕೆ ಸುರಪುರ ತಾಲೂಕಿನ ಅಮ್ಮಾಪುರ ಗ್ರಾಮದ ಶಿಕ್ಷಕ ಬಸವಣ್ಣಪ್ಪ ಹಂಗರಗಿ ಹಾಗೂ ಪ್ರಭು ಜೈನಾಪುರ್ ಫ್ಯಾಶನ್ ಟ್ಯಾಲೆಂಟ್ ಡೇ ಯಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಥೈಲ್ಯಾಂಡ್ ಅಲ್ಲಿ ವಿನ್ ಆದಂತ ಪ್ರತಿಭೆ ಮಲ್ಲಮ್ಮ ನುಡಿ ಪತ್ರಿಕೆ ಕೊಂಡು ಓದುತ್ತಿರುವ ದೃಶ್ಯ ಸುರಪುರ ತಾಲೂಕಿನಲ್ಲಿ ಒಳ್ಳೆಯ ಪ್ರತಿಕ್ರಿಯೆ ಉಂಟಾಯಿತು.(ಮಲ್ಲಮ್ಮ ನುಡಿ ಚಿತ್ರ)

# ಸಚಿನ್ ಆತ್ಮಹತ್ಯೆ ಪ್ರಕರಣ: ಐವರು ಆರೋಪಿಗಳ ಸಿಐಡಿ ಕಸ್ಟಡಿ ವಿಸ್ತರಣೆ

ಮಲ್ಲಮ ನುಡಿ ವಾರ್ತೆ

ಬೀದರ. ಜ. 16 : ಸಚಿವ ಪ್ರಿಯಾಂಕ್ ಖರ್ಗೆ ಅವರ ಆಪ್ತ, ಕಲಬುರಗಿಯ ಮಾಜಿ ಕಾರ್ಪೊರೇಟರ್ ರಾಜು ಕಪನೂರ ಸೇರಿದಂತೆ ಐವರ ಸಿಐಡಿ ಕಸ್ಟಡಿ ಅವಧಿಯನ್ನು ಮತ್ತೆ ಮೂರು ದಿನ ವಿಸ್ತರಿಸಿ ಇಲ್ಲಿನ ಜೆಎಂಎಫ್ ಸಿ ನ್ಯಾಯಾಲಯದ ನ್ಯಾಯಾಧೀಶ ರಾಮಮೂರ್ತಿ ಅವರು ಬುಧವಾರ ಆದೇಶ ಹೊರಡಿಸಿದರು.

ಯುವ ಗುತ್ತಿಗೆದಾರ ಸಚಿನ್ ಪಾಂಚಾಳ್ ಆತ್ಮಹತ್ಯೆ ಪ್ರಕರಣ ಸಂಬಂಧ ಜನವರಿ 10ರಂದು ಬಂಧನಕ್ಕೆ ಒಳಗಾಗಿದ್ದ ರಾಜು ಕಪನೂರ ಹಾಗೂ ಇತರೆ ನಾಲ್ವರನ್ನು ನ್ಯಾಯಾಲಯವು ಐದು ದಿನ ಸಿಐಡಿ ಕಸ್ಟಡಿಗೆ ವಹಿಸಿತ್ತು. ಬುಧವಾರ ಕಸ್ಟಡಿ



ಅವಧಿ ಅಂತ್ಯಗೊಂಡಿದ್ದರಿಂದ ನ್ಯಾಯಾಲಯದ ಎದುರು ಹಾಜರುಪಡಿಸಲಾಗಿತ್ತು.

ಹೆಚ್ಚುವರಿ ಜೆಎಂಎಫ್ ಸಿ ನ್ಯಾಯಾಲಯದ ನ್ಯಾಯಾಧೀಶ ರಾಮಮೂರ್ತಿ ಅವರು ಆರೋಪಿಗಳ ಪರ ವಕೀಲರು ಹಾಗೂ ಸಿಐಡಿ ವಕೀಲರ ವಾದ ಪ್ರತಿವಾದ ಆಲಿಸಿ ಸಿಐಡಿ ಕಸ್ಟಡಿಗೆ ವಹಿಸಿ ಆದೇಶ ಹೊರಡಿಸಿದರು. ಎರಡು ಗಂ–ಟೆಗೂ ಹೆಚ್ಚು ಕಾಲ ವಾದ–ಪ್ರತಿವಾದ ನಡೆಯಿತು. ಸಿಐಡಿ ಅಧಿಕಾರಿಗಳು ರಾಜು ಕಪನೂರ, ಮಾಜಿ ಜಿಲ್ಲಾ ಪಂಚಾಯಿತಿ ಉಪಾಧ್ಯಕ್ಷ ಗೋರಖನಾಥ ಸಜ್ಜನ್, ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ನಂದಕುಮಾರ ನಾಗಭುಜಂಗೆ, ಕಲಬುರಗಿಯ ಪ್ರಥಮ ದರ್ಜೆ ಗುತ್ತಿಗೆದಾರ ರಾಮನಗೌಡ ಪಾಟೀಲ ಹಾಗೂ ಸತೀಶ ರತ್ನಾಕರ ದುಬಲಗುಂಡಿ ಅವರನ್ನು ತಮ್ಮ ಕಸ್ಟಡಿಗೆ ತೆಗೆದುಕೊಂಡರು.

ಕೊಲೆ ಬೆದರಿಕೆ ಇದೆ ಎಂದು ಆರೋಪಿಸಿ ಡೆತ್‌ನೋಟ್ ಬರೆದಿಟ್ಟು ಸಚಿನ್ ಪಾಂಚಾಳ್ ಡಿ. 26ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು. ಒಂಬತ್ತು ಜನರ ವಿರುದ್ಧ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

# ಕಂಪ್ಯೂಟರ್ ತರಬೇತಿ ಪೂರ್ಣಗೊಳಿಸಿದ ಕಾರಾಗೃಹದ ಬಂದಿಗಳಿಗೆ ಪ್ರಮಾಣಪತ್ರ ವಿತರಣೆ



ಮಲ್ಲಮ ನುಡಿ ವಾರ್ತೆ

ಕಲಬುರಗಿ,ಜ.16:ಅದಾನಿ ಸಕ್ಷಮ ಸಂಸ್ಥೆ ವಾಡಿ ಹಾಗೂ ಸೋಕೇರ್–ಇಂಡ್ ಸಂಸ್ಥೆ, ಬೆಂಗಳೂರು ಇವುಗಳ ಸಹಭಾಗಿತ್ವದಲ್ಲಿ 30 ಜನ ಬಂದಿಗಳಿಗೆ 3ನೇ ಹಂತದ ಕಂಪ್ಯೂಟರ್ ತರಬೇತಿಯ ಪ್ರಶಿಕ್ಷಣಾರ್ಥಿಗಳಿಗೆ ಕಿಟ್ ವಿತರಣೆ ಹಾಗೂ 2ನೇ ಹಂತದ 30 ಜನ ಪ್ರಶಿಕ್ಷಣಾರ್ಥಿಗಳಿಗೆ ಕಂಪ್ಯೂಟರ್ ತರಬೇತಿ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ಕಲಬುರಗಿ ಕೇಂದ್ರ ಕಾರಾಗೃಹದಲ್ಲಿ ಅವರಿಗೆ ಬುಧವಾರ ಪ್ರಮಾಣ ಪತ್ರವನ್ನು ವಿತರಿಸಲಾಯಿತು.

ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶ್ರೀನಿವಾಸ ನವಲೆ ಅವರು ಮಾತನಾಡಿ, ಸ್ವಾವಲಂಬಿ ಬದುಕಿಗೆ ಅಕ್ಷರ ಕಲಿಕೆ ಅತ್ಯಾವಶ್ಯಕವಾಗಿದೆ. ಇಂದಿನ ದಿನಮಾನಗಳಲ್ಲಿ ಪ್ರತಿಯೊಂದು ಕ್ಷೇತ್ರದಲ್ಲಿ ಕಂಪ್ಯೂಟರ್ ಬಳಕೆ–ಯಾಗುತ್ತಿದ್ದು, ಇದಕ್ಕಾಗಿ ಕೇಂದ್ರ ಕಾರಾಗೃಹದಿಂದ ಬಂದಿಗಳಿಗೆ ಕಂಪ್ಯೂಟರ್ ಶಿಕ್ಷಣ ನೀಡಲಾಗುತ್ತಿದೆ. ಪ್ರತಿಯೊಬ್ಬರು ಕಂಪ್ಯೂಟರ್ ಶಿಕ್ಷಣ ಪಡೆದು ಇದರ ಸದುಪಯೋಗ ಪಡೆದುಕೊಳ್ಳಬೇಕು. ತಾವು ಪಡೆದ ಶಿಕ್ಷಣ ಇನ್ನೊಬ್ಬರ ಬಾಳಿಗೆ ಬೆಳಕನ್ನು ಕೊಡುವ ಅಕ್ಷರ ಜ್ಯೋತಿಯಾಗಬೇಕೆಂದು ಕರೆ ನೀಡಿದರು.

ವಾಡಿ ಅದಾನಿ ಸಕ್ಷಮ ಸಂಸ್ಥೆ ಜಿಲ್ಲಾ ಪ್ರಾಯೋಜಕ ಅಶೋಕ ಬಿ. ಹಾಲವಿ ಅವರು ಮಾತನಾಡಿ, ನಮ್ಮ ಸಂಸ್ಥೆಯು ಪ್ರತಿಯೊಬ್ಬರಿಗೆ ಕಂಪ್ಯೂಟರ್ ಶಿಕ್ಷಣದ ಸಾಕ್ಷರರನ್ನಾಗಿ ಮಾಡುವ ಗುರಿ ಹೊಂದಿದ್ದು, ಆ ನಿಟ್ಟಿನಲ್ಲಿ ಈ ಸಂಸ್ಥೆಯಲ್ಲಿರುವ ತಮಗೆ ಕಂಪ್ಯೂಟರ್ ಶಿಕ್ಷಣ ನೀಡಲಾಗುತ್ತಿದೆ. ತಾವು ಕಂಪ್ಯೂಟರ್ ತರಬೇತಿಯನ್ನು ಪಡೆದುಕೊಳ್ಳುವಂತೆ ತಿಳಿಸಿದರು.

ಕಲಬುರಗಿ ಸೋಕೇರ್–ಇಂಡ್ ಸಂಸ್ಥೆ, ಶಾಖೆಯ ಅಧ್ಯಕ್ಷ ಪ್ರಕಾಶ ಕುಲಕರ್ಣಿ, ಅವರು ಮಾತನಾಡಿ, ಈ ಸಂಸ್ಥೆಗೆ ನಾವು ಉಚಿತವಾಗಿ 10 ಕಂಪ್ಯೂಟರ್, ಕಾರಾಗೃಹ ರಂಗಮಂಟಪಕ್ಕೆ ಟಿನ್ ಶೆಡ್ಡಿನ ಮೇಲ್ಛಾವಣೆ ಹಾಗೂ ಕಂಪ್ಯೂಟರ್ ಪಡೆಯುತ್ತಿರುವ ಪ್ರತಿ ಪ್ರಶಿಕ್ಷಣಾರ್ಥಿ ತರಬೇತಿದಾರರಿಗೆ 1000 ರೂ.ಗಳ ಮೊತ್ತದ ಕಿಟ್ ನೀಡಲಾಗುತ್ತಿದೆ. ಅಲ್ಲದೇ ಬಂದಿಗಳ ಮಕ್ಕಳಿಗೆ ಉಚಿತವಾಗಿ 01 ರಿಂದ 10ನೇ ತರಗತಿಯವರಿಗೆ ಊಟ, ವಸತಿ, ಶಿಕ್ಷಣವನ್ನು ಬೆಂಗಳೂರು/ ಕಲಬುರಗಿ ಸಂಸ್ಥೆಯಲ್ಲಿ ನೀಡಲಾಗುತ್ತಿದೆ. ಹಾಗಾಗಿ ತಾವುಗಳು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಸಂಸ್ಥೆಯ ಮುಖ್ಯಸ್ಥರಾದ ಡಾ॥ ಅನಿತಾ ಆರ್. ಅವರು ಮಾತನಾಡಿ, ಬಂದಿಗಳು ಕಾರಾಗೃಹದಿಂದ ಬಿಡುಗಡೆ ಹೊಂದಿ ಸಮಾಜ ಮತ್ತು ಕುಟುಂಬದವರೊಡನೆ ಉತ್ತಮ ಸಂಬಂಧ ಹೊಂದಿ ಸಮಾಜಮುಖಿಯಾಗಿ ಕೆಲಸವನ್ನು ಮಾಡಬೇಕು. ಸ್ವಾವಲಂಬಿ ಬದುಕಿಗಾಗಿ ಕಾರಾಗೃಹ ವತಿಯಿಂದ ಹಲವಾರು ಕೌಶಲ್ಯ ಆಧಾರಿತ ತರಬೇತಿಗಳನ್ನು ನೀಡಲಾಗುತ್ತಿದೆ. ಇವುಗಳ ಪ್ರಯೋಜನ ಪಡೆದುಕೊಳ್ಳಬೇಕೆಂದು ಕರೆ ನೀಡಿದರು. ಅಲ್ಲದೇ ಅತೀ ಶೀಘ್ರದಲ್ಲಿ ಮಹಿಳಾ ಬಂದಿಗಳಿಗೆ 30 ದಿನಗಳ ಕರ ಕುಶಲ ತರಬೇತಿಯನ್ನು ಹಮ್ಮಿಕೊಳ್ಳಲಾಗುವುದೆಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಸಹಾಯಕ ಅಧೀಕ್ಷಕ ಚನ್ನಪ್ಪ, ಜೈಲರ್‌ಗಳಾದ ಸುನಂದ ವಿ., ಸಾಗರ ಪಾಟೀಲ್, ಶ್ರೀಮಂತಗೌಡ ಪಾಟೀಲ್ ಹಾಗೂ ಸೋಕೇರ್ ಸಂಸ್ಥೆಯ ಸದಸ್ಯರು, ಅದಾನಿ ಸಕ್ಷಮ ಸಂಸ್ಥೆಯ ಹರೀಶ ಗೌಳಿ ಮತ್ತು ಅಧಿಕಾರಿ ಸಿಬ್ಬಂದಿ ವರ್ಗದವರು ಭಾಗವಹಿಸಿದರು. ಶಿಕ್ಷಾ ಬಂದಿಯಾದ ವಿರೇಶ ಅವರು ಪ್ರಾರ್ಥನಾ ಗೀತೆ ಹಾಡಿದರು.

ಕಾರಾಗೃಹದ ಪ್ರಭಾರಿ ಅಧೀಕ್ಷಕ ಬಿ. ಸುರೇಶ ಸ್ವಾಗತಿಸಿದರು. ಸಂಸ್ಥೆಯ ಶಿಕ್ಷಕ ನಾಗರಾಜ ಮುಲಗೆ ಕಾಯಕ್ರಮ ನಿರ್ವಹಿಸಿದರು. ಕೊನೆಯಲ್ಲಿ ಸಹಾಯಕ ಆಡಳಿತಾಧಿಕಾರಿ ಭೀಮಾಶಂಕರ ಡಾಂಗೆ ವಂದಿಸಿದರು.

## ಫೆ. 22 ರಿಂದ ಮೂರು ದಿನಗಳ ಕಾಲ ರನ್ನ ವೈಭವ ಕಾರ್ಯಕ್ರಮ ಸಿದ್ಧತೆಗೆ ವಿವಿಧ ಸಮಿತಿ ರಚನೆ : ಡಿಸಿ ಜಾನಕಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.16:ಮುಂದಿನ ತಿಂಗಳು ಫೆ.22 ರಿಂದ ಜಿಲ್ಲೆಯ ಮುಧೋಳ ತಾಲೂಕಿನ ರನ್ನ ಬೆಳಗಲಿಯಲ್ಲಿ ಒಂದು ದಿನ ಹಾಗೂ ಮುಧೋಳ ಪಟ್ಟಣದಲ್ಲಿ ಎರಡು ದಿನಗಳ ಕಾಲ ರನ್ನ ವೈಭವ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಕಾರ್ಯಕ್ರಮ ಸಿದ್ದತೆಗೆ ವಿವಿಧ ಸಮಿತಿಗಳನ್ನು ರಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಂ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ರನ್ನವೈಭವ ಕಾರ್ಯಕ್ರಮ ಸಿದ್ದತೆ ಕುರಿತು ವಿವಿಧ ಸಮಿತಿ ರಚನೆ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರನ್ನ ವೈಭವ ಕಾರ್ಯಕ್ರಮವನ್ನು ಯಶಸ್ವಿ ಹಾಗೂ ಅದ್ದೂರಿಯಾಗಿ ನಡೆಸಲು ಒಟ್ಟು 24 ಸಮಿತಿಗಳನ್ನು ರಚಿಸಲಾಗಿದ್ದು, ಪ್ರತಿಯೊಂದು ಸಮಿತಿಯವರು ತಮ್ಮ ತಮ್ಮ ಹಂತದಲ್ಲಿ ಸಭೆಯನ್ನು ಕರೆದು ಇಂದಿನಿಂದಲೇ ತಮಗೆ ವಹಿಸಿದ ಕೆಲಸವನ್ನು ಪ್ರಾರಂಭಿಸುವಂತೆ ತಿಳಿಸಿದರು.

ಸಲಹಾ ಸಮಿತಿ, ಸ್ವಾಗತ ಮತ್ತು ಶಿಷ್ಠಾಚಾರ ಸಮಿತಿ, ಕಾರ್ಯಕಾರಿ ಸಮಿತಿ, ಹಣಕಾಸು ಸಮಿತಿ, ಸಾರಿಗೆ, ವಸತಿ, ಆಹಾರ, ಪ್ರಚಾರ, ಆಹ್ವಾನ ಪತ್ರಿಕೆ, ಕರಪತ್ರ, ನೆನಪಿನ ಕಾಣಿಕೆ, ಪ್ರಮಾಣ ಪತ್ರ ಹಾಗೂ ಬ್ಯಾನರ್, ಮೂಲಭೂತ ಸೌಲಭ್ಯ, ಆರೋಗ್ಯ ಮತ್ತು ನೈರ್ಮಲ್ಯ, ಕಾನೂನು ಸುವ್ಯವಸ್ಥೆ, ವೇದಿಕೆ, ಕ್ರೀಡಾ, ಜಾನಪದ ವಾಹಿಸಿ ಮೆರವಣಿಗೆ ಸಮಿತಿ, ರನ್ನ ರಥಯಾತ್ರೆ, ಕಲಾವಿದರ ಆಯ್ಕೆ ಸಮಿತಿ, ಸಾಕ್ಷ್ಯಚಿತ್ರ, ವಸ್ತು ಪ್ರದರ್ಶನ ಮಳಿಗೆ ಸೇರಿದಂತೆ ಒಟ್ಟು 24 ಸಮಿತಿಗಳನ್ನು ರಚಿಸಲಾಗಿದೆ ಎಂದು ತಿಳಿಸಿದರು.

ಈ ಮೂರು ದಿನಗಳ ಕಾಲ ಜರುಗುವ ಉತ್ಸವದಲ್ಲಿ ಕವಿ ಚಕ್ರವರ್ತಿ ರನ್ನನ ಸಾಹಿತ್ಯ ಕುರಿತಂತೆ ವಿಚಾರಗೋಷ್ಠಿ, ಕವಿಗೋಷ್ಠಿ ಹಮ್ಮಿಕೊಳ್ಳಲಾಗುತ್ತಿದೆ. ರಾಷ್ಟ್ರಮಟ್ಟದ ಹಾಗೂ ರಾಜ್ಯಮಟ್ಟದ ಶ್ರೇಷ್ಠ ಕಲಾವಿದರನ್ನು ಸಂಪರ್ಕ ಮಾಡಿ ಫೈನಲ್ ಮಾಡಲು ಕಮಿಟಿಗಳಿಗೆ ಸೂಚಿಸಿದರು. ಕಾರ್ಯಕ್ರಮ ಆಯೋಜನೆಗೆ ಸಂಪನ್ಮೂಲ ಸಂಗ್ರಹಣೆ ಅಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಸಂಪನ್ಮೂಲ ಕ್ರೊಢೀಕರಿಸಲು ಮುಂದಾಗಬೇಕು ಎಂದು ಅವರು ತಿಳಿಸಿದರು.

ಜಮಖಂಡಿ ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ ವಿವಿಧ ಸಮಿತಿಗಳ ರಚಿಸಿದ ಮಾಹಿತಿಯನ್ನು ಸಭೆಗೆ ತಿಳಿಸಿದರು. ಸಭೆಯಲ್ಲಿ ಜಿ.ಪಂ ಸಿಇಓ ಶಶಿಧರ ಕುರೇರ, ಉಪ ಅರಣ್ಯ ಸಂರಕ್ಷಣಾಧಿಕಾರಿ ರುಥ್ರೇನ್ ಪಿ, ಅಪರ ಜಿಲ್ಲಾಧಿಕಾರಿ ಪರಶುರಾಮ ಶಿನ್ನಾಳಕರ, ಜಿ.ಪಂ ಉಪಕಾರ್ಯದರ್ಶಿ ಎನ್. ವಾಯ್.ಬಸರಿಗಿಡದ, ಬಾಗಲಕೋಟೆ ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ಆಹಾರ ಇಲಾಖೆ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ರವೀಂದ್ರ ಹಕಾಟೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕರ್ಣಕುಮಾರ ಜೈನಾಪೂರ, ಜಿಲ್ಲಾ ವಾರ್ತಾಧಿಕಾರಿ ಕಸ್ತೂರಿ ಪಾಟೀಲ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

# ಸಾಧನೆಗೆ ನ್ಯೂನತೆ ಅಡ್ಡಿಯಾಗುವುದಿಲ್ಲ: ಶಾರದಾ ಪಾನಘಂಟಿ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ:ಜ.16:ಭಾಗ್ಯನಗರದ ವಿದ್ಯಾವಿಕಾಸ ಶಾಲೆಯಲ್ಲಿ ಪಾನಘಂಟಿ ಫೌಂಡೇಶನ್ ಹಾಗೂ ವಾಸವಿ ಕ್ಲಬ್ ಭಾಗ್ಯನಗರ ಇವರುಗಳ ಸಂಯುಕ್ತಾಶ್ರಯದಲ್ಲಿ ಅಂಧ ಮಕ್ಕಳ ಯೋಗ ಮತ್ತು ಮಲ್ಲಗಂಬ ಪ್ರದರ್ಶನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಭಾಗ್ಯನಗರದ ಶಂಕರಾಚಾರ್ಯ ಮಠದ ಶಿವಪ್ರಕಾಶಾನಂದ ಸ್ವಾಮೀಜಿ ಉದ್ಘಾಟಿಸಿ ಸಾಧನೆಗೆ ನ್ಯೂನ್ಯತೆಗಳು ಅಡ್ಡಿಯಾಗುವುದಿಲ್ಲ. ಕಣ್ಣಿಲ್ಲದವರು ಅಂತರಾತ್ಮದಿಂದ ಸಮಾಜವನ್ನು ನೋಡುತ್ತಾರೆ. ಕಣ್ಣಿಲ್ಲದವರೆ ಛಲದೊಂದಿಗೆ ಬದುಕು ಕಟ್ಟಿಕೊಳ್ಳುವ ನಿಜವಾದ ಸ್ವಾವಲಂಬಿಗಳು. ಅವರ ಬದುಕು ಜೀವನಶೈಲಿ ಆದರ್ಶವಾಗಲಿ ಎಂದು ತಿಳಿಸಿದರು.

ಇದೇ ವೇಳೆ ಭಾಗ್ಯನಗರದ ವಾಸವಿ ಕ್ಲಬ್ ನ ಅಧ್ಯಕ್ಷರಾದ ಶಾರದಾ ರಾಘವೇಂದ್ರ ಪಾನಘಂಟಿ ಮಾತನಾಡಿ ನಿಜವಾದ ಸಾಧಕರು ಎಂದರೆ ಕಣ್ಣಿಲ್ಲದವರೆ. ಇವರ ಪ್ರತಿಭೆಯನ್ನು ನೋಡಿದರೆ ಕಣ್ಣಿಲ್ಲದವರೆ ಕಣ್ಣೆತ್ತಿ ನೋಡುವ ಸಾಧನೆ ಮಾಡಿದ್ದಾರೆ. ಯೋಗ ಮತ್ತು



ಮಲ್ಲಗಂಬದಲ್ಲಿ ರಾಷ್ಟ್ರೀಯ ಸಾಧನೆ ಮಾಡಿದ ಇವರು ಸಮಾಜಕ್ಕೆ ಮಾದರಿ ಎಂದರು.

ಹೊಳೆಆಲೂರಿನ ಜ್ಞಾನ ಸಿಂಧು ವಸತಿ ಶಾಲೆಯ ಅಂಧ ಮಕ್ಕಳು ಯೋಗ ಮತ್ತು ಮಲ್ಲಗಂಬ ಪ್ರದರ್ಶನ ಮಾಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಅಂಧ ಮಕ್ಕಳನ್ನು ಪೋಷಿಸಿ ಮಾರ್ಗದರ್ಶನ ಮಾಡುತ್ತಿರುವ ತುಳಸಮ್ಮ ಹಾಗೂ ಶಿವಾನಂದ ಕೇಲೂರು ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಇದೇ ವೇಳೆ ಪಾನಘಂಟಿ ಫೌಂಡೇಷನ್ ವತಿಯಿಂದ ಮಕ್ಕಳಿಗೆ ಮಲಗಲು ಮಂಚವನ್ನು ಕೊಡುಗೆಯಾಗಿ ನೀಡಲಾಯಿತು. ಅಂಧ ಮಕ್ಕಳ ಸಾಧನೆಗೆ ಪ್ರಶಂಸಾ ಪತ್ರ ನೀಡಿ ಗೌರವಿಸಿ ಸಿಹಿ ಹಂಚಿದರು. ಕಾರ್ಯಕ್ರಮದ ನೆನಪಿಗಾಗಿ ಸಸಿನೆಟ್ಟು ಪರಿಸರ ಕಾಳಜಿ ಮೆರೆದರು.

ಕಾರ್ಯಕ್ರಮದಲ್ಲಿ ಲಲಿತಾ ಕಬ್ಬೇರ್, ಸುಮಾ ಮಹೇಶ್, ಜಯಾ ಶೆಡ್ಮಿ, ಸಂಗೀತಾ, ವಿದ್ಯಾಲಕ್ಷ್ಮೀ ಮೇಘರಾಜ, ರಚನಾ ಪಾನಘಂಟಿ, ವೈಷ್ಣವಿ, ಪ್ರಿಯದರ್ಶಿನಿ, ಪೂಜಾ, ವಾದಿರಾಜ ದೇಸಾಯಿ, ಬಸವರಾಜ, ನಿರ್ಮಲಾ ಪಾಟೀಲ್ ಮತ್ತಿರರು ಉಪಸ್ಥಿತಿ ಇದ್ದರು.

## ಜ .18 ರಂದು ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಕೊಪ್ಪಳ ತಾಲೂಕ ಮಟ್ಟದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯನ್ನು ಜನವರಿ 18 ರಂದು ಬೆಳಿಗ್ಗೆ 11 ಗಂಟೆಗೆ ಕೊಪ್ಪಳ ತಾಲೂಕ ಪಂಚಾಯತಿಯ ಸಭಾಂಗಣದಲ್ಲಿ



ಹಮ್ಮಿಕೊಳ್ಳಲಾಗಿದೆ.

ಸಭೆಯ ಅಧ್ಯಕ್ಷತೆಯನ್ನು ಕೊಪ್ಪಳ ತಾಲೂಕ ಮಟ್ಟದ ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷರಾದ ಬಾಲಚಂದ್ರನ್ ಸ್ಯಾಮುವೆಲ್ ಅವರು ವಹಿಸುವರು. ಸಭೆಯಲ್ಲಿ ರಾಜ್ಯ ಸರ್ಕಾರದ 5 ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಯಲಿದ್ದು, ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನಾಧಿಕಾರಿಗಳು ಅಗತ್ಯ ಮಾಹಿತಿಯೊಂದಿಗೆ ಪ್ರತಿನಿಧಿಗಳನ್ನು ನಿಯೋಜಿಸದೇ ಖುದ್ದಾಗಿ ಸಭೆಗೆ ಹಾಜರಾಗುವಂತೆ ಕೊಪ್ಪಳ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿಗಳಾದ ದುಂಡಪ್ಪ ತುರಾದಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾಗಿ ಮರಕಲ್, ಉಪಾಧ್ಯಕ್ಷರಾಗಿ ಗೂಗಲ್ ಅವಿರೋಧವಾಗಿ ಆಯ್ಕೆ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ :ಜ.16: ಜಿಲ್ಲಾ ಕೃಷಿಕ ಸಮಾಜದ ಜಿಲ್ಲಾಧ್ಯಕ್ಷರಾಗಿ ಬಸನಗೌಡ ಮಾಲಿ ಪಾಟೀಲ್ ಮರಕಲ್, ಉಪಾಧ್ಯಕ್ಷರಾಗಿ ಸಿದ್ರಾಮರಡ್ಡಿ ಗೂಗಲ್ ಅದರಂತೆ ಪ್ರಧಾನ ಕಾರ್ಯದರ್ಶಿಗಳಾಗಿ ಸಿದ್ರಾಮಪ್ಪ ಮುದಗಲ್, ಖಜಾಂಚಿಯಾಗಿ ಶ್ರೀಧರರಡ್ಡಿ ಎಂ.ಟಿ ಪಲ್ಲಿ, ರಾಜ್ಯ ಪ್ರತಿನಿಧಿಯಾಗಿ ರಾಚನಗೌಡ ಮುದ್ನಾಳ ಅವಿರೋಧವಾಗಿ ಆಯ್ಕೆಯಾಗಿದ್ದಾರೆ, ನಗರದ ಕೃಷಿ ಇಲಾಖೆ ಜಂಟಿ ನಿರ್ದೇಶಕರ ಕಛೇರಿ ಸಭಾಂಗಣದಲ್ಲಿ ನಡೆದ 5 ಸ್ಥಾನಗಳಿಗೆ ಏಕೈಕ ಅಭ್ಯರ್ಥಿಗಳು ಮಾತ್ರ ನಾಮಪತ್ರ ಸಲ್ಲಿಸಿದರು. ಚುನಾವಣಾಧಿಕಾರಿ, ಕೃಷಿ ಇಲಾಖೆ ಜಂಟಿ ನಿರ್ದೇಶಕ ರತೇಂದ್ರನಾಥ ಸುಗೂರ ನಾಮಪತ್ರಗಳನ್ನು ಪರಿಶೀಲನೆ ಮಾಡಿ, ನಂತರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಘೋಷಿಸಿ, ಪ್ರಮಾಣ ಪತ್ರಗಳನ್ನು ವಿತರಿಸಿದರು. 2ನೇ ಭಾರಿಗೆ ಜಿಲ್ಲಾ ಕೃಷಿಕ ಸಮಾಜದ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾದ ಬಸನಗೌಡ ಮಾಲಿ ಪಾಟೀಲ್ ಮರಕಲ್ ಮಾತನಾಡಿ, ನಾನು ಹಲವಾರು ದಶಕಗಳಿಂದ ಕೃಷಿ ಕ್ಷೇತ್ರ ಹಾಗೂ ಕೃಷಿಕ ಸಮಾಜದಲ್ಲಿ ಕೆಲಸ ಮಾಡಿಕೊಂಡು ಬಂದಿದ್ದೇನೆ, ಈ ಹಿಂದೆ ಸಮಾಜದ ರಾಜ್ಯಾಧ್ಯಕ್ಷನಾಗಿ



ಅಧಿಕಾರವಧಿಯಲ್ಲಿ ಎಲ್ಲಾ ಜಿಲ್ಲೆಗಳಿಗೆ ಭೇಟಿ ನೀಡಿ, ಸಮಾಜದ ಸಂಘಟನೆ ಹಾಗೂ ರೈತರ ಅಭಿವೃದ್ಧಿಗೆ ಪ್ರಾಮಾಣಿಕ ಕೆಲಸ ಮಾಡುವ ಜೊತೆಗೆ ಬೆಂಗಳೂರಿನಲ್ಲಿ 20 ಕೋಟಿ ರೂ. ವೆಚ್ಚದಲ್ಲಿ ರಾಜ್ಯ ಕೃಷಿಕ ಸಮಾಜದ ಭವನ ನಿರ್ಮಾಣವಾಗಲು ಶ್ರಮಿಸಿದ್ದೇನೆ ಎಂದು ಹೇಳಿದರು. ಮುಂದಿನ ತಿಂಗಳು ಜಿಲ್ಲೆಯಲ್ಲಿ ರಾಜ್ಯ ಕೃಷಿ ಸಚಿವ ಚಲುವರಾಯಸ್ವಾಮಿ ಪ್ರವಾಸ ಕೈಗೊಳ್ಳಲಿದ್ದಾರೆ, ಆ ಸಮಯದಲ್ಲಿ ಜಿಲ್ಲಾ ಕೇಂದ್ರದಲ್ಲಿ ಕೃಷಿಕ ಸಮಾಜದ ಜಿಲ್ಲಾ ಕಟ್ಟಡ ಹಾಗೂ ಶಹಾಪೂರ ನಗರದಲ್ಲಿ ತಾಲ್ಲೂಕಾ ಕಟ್ಟಡ ನಿರ್ಮಾಣ ಕಾಮಗಾರಿಗೆ ಅಡಿಗಲ್ಲು ನೆರವೇರಿಸಲಿದ್ದಾರೆ ಎಂದು ತಿಳಿಸಿದರು. ಜಿಲ್ಲೆಯಲ್ಲಿ ಅಧಿಕಾರಿಗಳ, ಪದಾಧಿಕಾರಿಗಳ ಸಹಕಾರದಿಂದ ಸರ್ಕಾರದ ಯೋಜನೆಗಳ ಲಾಭ ರೈತರಿಗೆ ತಲುಪಿಸಲು ಪ್ರಾಮಾಣಿಕ ಪ್ರಯತ್ನ ಮಾಡುವ ಜೊತೆಗೆ ಕೃಷಿಕ ಸಮಾಜಕ್ಕೆ ಹೊಸ ಕಾಯಕಲ್ಪ ನೀಡುವ ಹಲವಾರು ಚಿಂತನೆಗಳನ್ನು ಹೊಂದಿದ್ದೇನೆ ಎಂದು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಜಿಲ್ಲಾ ಕೃಷಿ ಇಲಾಖೆ ಜಂಟಿ ನಿರ್ದೇಶಕ ರತೇಂದ್ರನಾಥ ಸೂಗೂರ ಮಾತನಾಡಿ, ಜಿಲ್ಲಾ ಉಸ್ತುವಾರಿ ಸಚಿವ ದರ್ಶನಾಪುರ, ಅವರ ಇಚ್ಛಾಶಕ್ತಿಯಿಂದ ಹತ್ತಿಗೂಡೂರನಲ್ಲಿ 6 ಕೋಟಿ ರೂ. ವೆಚ್ಚದಲ್ಲಿ ಜಿಲ್ಲಾ ಕೃಷಿ ತರಬೇತಿ ಕೇಂದ್ರ ಕಟ್ಟಡ ನಿರ್ಮಾಣ ಕಾಮಗಾರಿಗೆ ಮಂಜೂರಾತಿ ಸಿಕ್ಕಿದೆ, ಇದು ರೈತರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಕೃಷಿ ಇಲಾಖೆ ಉಪನಿರ್ದೇಶಕಿ ಮಂಜುಳಾ ಬಸರಡ್ಡಿ, ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಬೆಂಗಳೂರ ನಿರ್ದೇಶಕರಾದ ರಾಯಪ್ಪಗೌಡ ದರ್ಶನಾಪೂರ, ಜಿಲ್ಲಾ ಸಹಕಾರಿ ಯುನಿಯನ್ ಅಧ್ಯಕ್ಷ ವಿಶ್ವನಾಥರಡ್ಡಿ ದರ್ಶನಾಪೂರ, ಶರಣಗೌಡ ಗುಂಡಗುರ್ತಿ, ಹಣಮೇಗೌಡ ಮರಕಲ್, ಮಲ್ಲಾರಡ್ಡಿ ಪಾಟೀಲ್ ಹೋತ್‌ಪೇಟ್, ಅಶೋಕರಡ್ಡಿ ಲಿಂಗದಳ್ಳಿ, ನಾಗಣ್ಣ ದಂಡೀನ್, ವಿಶ್ವನಾಥರಡ್ಡಿ ಸಾಹು, ದೇವಾನಂದ ಪಾಟೀಲ್, ರಮೇಶ ಮಾಗನೂರ, ಶಾಂತರಡ್ಡಿ ದೇಸಾಯಿ ನಾಯ್ಕಲ್, ಚಂದ್ರಶೇಖರ ದಂಡೀನ್, ಶಾಂತಗೌಡ ನಾಗನಟಗಿ, ಶಿವರಾಜ ಪಾಟೀಲ್ ಗುರಸಣಗಿ, ಡಾ. ಸಿದ್ದಣಗೌಡ ಬಾನಾ, ಶಂಕರಗೌಡ ಯಾಳವಾರ, ಸಿದ್ಲಿಂಗರಡ್ಡಿ ಬಾಸರಡ್ಡಿ ನಾಲವಾರ, ಸಲೀಂ ಸಂಗ್ರಾಮ್, ವೀರಣ್ಣಗೌಡ ಕುರಕುಂದಿ, ಸುನೀಲಕುಮಾರ ಮಾಲಿ ಪಾಟೀಲ್, ಸಚೀನ್ ಮಾಲಿ ಪಾಟೀಲ್, ಕೃಷಿ ಅಧಿಕಾರಿಗಳಾದ ರಾಜಕುಮಾರ, ರವಿಕುಮಾರ ಕೊಟಗೇರಾ ಸೇರದಂತೆ ಹಲವರು ಉಪಸ್ಥಿತರಿದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.